ಸಂಪುಟ ೨೦ ಸಂಚಿಕೆ ೧ ಮಾರ್ಚ್ ೧೯೯೯

ಬ್ಯಾಂಕಿಂಗ್ ಪ್ರಪಂಚ

ವಾರ್ಷಿಕ ಚಂದಾ : ರೂ. 20 ಆಜೀವ ಚಂದಾ : ರೂ. 200

ಹಣ ಬ್ಯಾಂಕಿಂಗ್ ವಿಚಾರಗಳಿಗೆ ಮೀಸಲಾದ ತ್ರೈಮಾಸಿಕ

ವಿದ್ಯುನ್ಮಾನ ವಾಣಿಜ್ಯ

ಬ್ಯಾಂಕ್‌ಗಳ ಸಾಲ ವಸೂಲಿ ಸಮಸ್ಯೆ

ಸಾಲ ವಸೂಲಿ ನ್ಯಾಯಾಧಿಕರಣಗಳು

ಸಹಕಾರ ಸಂಸ್ಥೆಗಳಲ್ಲಿ ನಿರ್ವಹಣೆಯ ಸಮಸ್ಯೆಗಳು

ಶ್ರಮಿಕ ಶಿಕ್ಷಣ

ಗ್ರಾಮೀಣ ಬ್ಯಾಂಕುಗಳು

ಆನಂದನಿಧಿ

ಸಮನ್ವಯ ಸಮಿತಿ

(ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು)

ಭಾರತೀಯ ಸ್ಟೇಟ್ ಬ್ಯಾಂಕ್, ನಂ. 22, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು 560002

ಸಂಪುಟ ೨೦ ಸಂಚಿಕೆ ೧ ಮಾರ್ಚ್ ೧೯೯೯

ಬ್ಯಾಂಕಿಂಗ್ ಪ್ರಪಂಚ

ಈ ಸಂಚಿಕೆಯಲ್ಲಿ

ವಿದ್ಯುನ್ಮಾನ ವಾಣಿಜ್ಯ

ಜಿ. ಎನ್. ನರಸಿಂಹಮೂರ್ತಿ

ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿರಿಸಲು ಸಿದ್ಧವಾಗುತ್ತಿರುವ ಸಮಯದಲ್ಲಿ ಹೊಸ ವಿದ್ಯಮಾನವೊಂದು ವಾಣಿಜ್ಯ ಹಾಗೂ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಂಡುಬರುತ್ತಿದೆ. ಅದೇ ವಿದ್ಯುನ್ಮಾನ ವಾಣಿಜ್ಯ : ಜಾಗತೀಕರಣದ ಫಲವಾಗಿ ಇಂದು ಭಾರತ ಹೊಸ ತಂತ್ರ ಜ್ಞಾನವನ್ನು ಕ್ಷಿಪ್ರವಾಗಿ ಅಳವಡಿಸಿಕೊಳ್ಳುತ್ತಿದೆ. ಪರಿಣಾಮಗಳೇನೇ ಇರಲಿ ಜಾಗತೀ ಕರಣದ ಪ್ರಕ್ರಿಯೆಯನ್ನು ಹಿಂತಳ್ಳುವ ಪರಿಸ್ಥಿತಿಯಂತೂ ಇಲ್ಲ. ಜಾಗತೀಕರಣದಿಂದ ಭಾರತೀಯ ಬ್ಯಾಂಕಿಂಗ್ ವಲಯದ ಮೇಲೆ ಆಗ ಬಹುದಾದ ಪರಿಣಾಮಗಳು ಒಂದು ಅಧ್ಯಯನ ಯೋಗ್ಯ ವಿಷಯ ವಾಗುತ್ತದೆ. ಅದರ ವ್ಯಾಪ್ತಿ ವಿಸ್ತಾರಗಳು ಹೆಚ್ಚು. ಈ ಜಾಗತೀಕರಣದ ಅನೇಕ ಅಂಶಗಳಲ್ಲಿ ಒಂದಾದ ವಿದ್ಯುನ್ಮಾನ ವಾಣಿಜ್ಯ ಇಡೀ ವಿಶ್ವ ದಲ್ಲಿಯೇ ಜಾಗತೀಕರಣದ ಪ್ರಕ್ರಿಯೆಯನ್ನು ಅಲೆಅಲೆಯಾಗಿ ಹಬ್ಬಿಸು ತ್ತಿರುವ ವಿಶ್ವದ ಎಲ್ಲ ಪ್ರದೇಶಗಳನ್ನೂ ಭೇದವಿಲ್ಲದೆ, ಸದ್ದಿಲ್ಲದೆ ಆಕ್ರಮಿಸಿಕೊಳ್ಳುತ್ತಿರುವ ಒಂದು ವಿದ್ಯಮಾನ. ಸಾಂಪ್ರದಾಯಕ ವಾಣಿಜ್ಯ ಹಾಗೂ ಬ್ಯಾಂಕಿಂಗ್ ವಲಯಗಳಲ್ಲಿ ತೀವ್ರ ಬದಲಾವಣೆ ಗಳನ್ನು ಇದು ಉಂಟುಮಾಡುತ್ತದೆ ಎನ್ನುವ ನಿರೀಕ್ಷೆಯಲ್ಲಿ ಇದರ ಕುರಿತು ಚಿಂತಿಸುವುದು ಅತ್ಯಂತ ಅಗತ್ಯವಾಗಿದೆ. ಈ ವಿದ್ಯಮಾನದ ಸ್ಥೂಲ ರೂಪುರೇಖೆಗಳನ್ನು ಕಾಣಿಸುವುದೇ ಈ ಲೇಖನದ ಉದ್ದೇಶ ವಾಗಿದೆ.

ಅಂತರ ಜಾಲವೆಂಬ ವಿಸ್ಮಯಕರ ವ್ಯವಸ್ಥೆ ಪ್ರಾರಂಭವಾಗಿ ಅತಿ ವೇಗದಲ್ಲಿ ಎಲ್ಲೆಡೆ ಹಬ್ಬಿ ನಾನಾ ಸ್ತರಗಳ ವ್ಯವಹಾರದಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತಂದಿದೆ. ಹೊಸ ಸಾಧ್ಯತೆಗಳನ್ನು ದಿನೇ ದಿನೇ ತೆರೆದಿಡುತ್ತಿದೆ. ವಿದ್ಯುನ್ಮಾನ ವಾಣಿಜ್ಯ ಇವುಗಳ ಪೈಕಿ ಒಂದು ಎಂದು ಹೇಳಿದರೂ, ಇದು ಬಹು ವ್ಯಾಪಕವಾದ ಕ್ಷೇತ್ರವಾಗಿದೆ. ಸಗಟು ವ್ಯವಹಾರ, ಬ್ಯಾಂಕಿಂಗು, ವಿವಿಧ ಬಗೆಯ ಸೇವೆಗಳು, ವಿದೇಶಿ ವಿನಿಮಯ ವ್ಯವಹಾರ, ಬಂಡವಾಳ ಮಾರುಕಟ್ಟೆ ವ್ಯವಹಾರಗಳು, ಆಮದು ರಫ್ತು ವ್ಯವಹಾರಗಳು, ಮುಂತಾದ ಇನ್ನೂ ಅನೇಕ ರೀತಿಯ ವ್ಯವಹಾರಗಳು ವಿದ್ಯುನ್ಮಾನ ವಾಣಿಜ್ಯದ ವ್ಯಾಪ್ತಿಗೆ ಬರುತ್ತವೆ.

ವಿದ್ಯುನ್ಮಾನ ವಾಣಿಜ್ಯ ಎಂದರೆ ಎಂದಿನ ವ್ಯವಹಾರದ ಎಲ್ಲಾ ಹಂತಗಳನ್ನು ಅಂತರ ಜಾಲ ಅಥವಾ ಅಂತಹ ಸಂಪರ್ಕ ಜಾಲವೊಂದರ ಮೂಲಕ ನೆರವೇರಿಸುವುದು. ಮಾರಾಟದ ವಸ್ತುವಿನ ಕುರಿತ ಮಾಹಿತಿ ಪ್ರದರ್ಶನ, ಆಯ್ಕೆ, ಮಾರಾಟ ಮತ್ತು ಮೌಲ್ಯ ವರ್ಗಾವಣೆ ಇವು ಸ್ಥೂಲವಾಗಿ ವಾಣಿಜ್ಯ ವಹಿವಾಟಿನ ಮೆಟ್ಟಿಲುಗಳಾಗಿರುತ್ತವೆ. ಈ ಎಲ್ಲಾ ಪ್ರಕ್ರಿಯೆಗಳೂ ವಿದ್ಯುನ್ಮಾನ ಮಾಧ್ಯಮದ ಮೂಲಕವೇ ಜರುಗಿದರೆ ಆಗ ಅದನ್ನು ವಿದ್ಯುನ್ಮಾನ ವಾಣಿಜ್ಯ ಎನ್ನುವುದು. ಇದು ಬಹುಪಾಲು ವ್ಯವಹಾರಗಳಲ್ಲಿ ಸಾಧಿಸುವುದಿಲ್ಲ. ಉದಾಹರಣೆಗೆ ಬೆಂಗಳೂರಿನ ಚಿತ್ರಮಂದಿರವೊಂದು ಪ್ರದರ್ಶನದ ಟಿಕೆಟ್ಟುಗಳನ್ನು ಅಂತರಜಾಲದ ಮೂಲಕ ಕಾಯ್ದಿರಿಸುವ ಸೌಲಭ್ಯವನ್ನು ಒದಗಿಸಿದೆ. ಅಂತರಜಾಲದ ಸಂಪರ್ಕವಿದ್ದು ಆ ತಾಣವನ್ನು ಹೊಕ್ಕರೆ ಅಂದಿನಿಂದ ಒಂದು ವಾರದವರೆಗೆ ಲಭ್ಯವಿರುವ ಆಸನಗಳ ವಿವರ, ಪ್ರದರ್ಶನವಾಗು ತ್ತಿರುವ ಚಿತ್ರದ ಮಾಹಿತಿ ಲಭ್ಯವಾಗುತ್ತದೆ. ಬೇಕಾದ ದಿನಾಂಕ, ಆಸನಗಳ ವಿವರಗಳನ್ನು ತಿಳಿಸಿದರೆ ಇಂತಹ ತಾಣಗಳಲ್ಲಿ ಈ ಬಗೆಯ ಎಲ್ಲಾ ಪ್ರತಿಕ್ರಿಯೆಗೆ ಅವಕಾಶವಿರುತ್ತದೆ. ಟಿಕೆಟ್ಟುಗಳನ್ನು ನಿಮ್ಮ ಹೆಸರಿನಲ್ಲಿ ಕಾಯ್ದಿರಿಸಲಾಗುತ್ತದೆ. ಹಣ ಪಾವತಿಗೆ ಎರಡು ರೀತಿಯ ಅವಕಾಶವಿರುತ್ತದೆ. ಒಂದು ನಿಮ್ಮ ಉದರಿ ಕಾರ್ಡಿನ ಸಂಖ್ಯೆಯನ್ನು ತಿಳಿಸಿದರೆ ಚಿತ್ರಮಂದಿರದವರು ಅದರ ಮೂಲಕ ತಮ್ಮ ಖಾತೆಗೆ ಮೊಬಲಗನ್ನು ಜಮಾ ಮಾಡಿಸಿಕೊಳ್ಳುತ್ತಾರೆ ಅಥವಾ ನೀವು ಚಿತ್ರ ಮಂದಿರಕ್ಕೆ ಹೋದಾಗ ನಗದನ್ನು / ಉದರಿ ಕಾರ್ಡನ್ನು ನೀಡಿ ಮೊಬಲ ಗನ್ನು ಪಾವತಿಸಬಹುದು. ಚಲನಚಿತ್ರ ಹೇಗೇ ಇರಲಿ, ಈ ವ್ಯವಹಾರ ರೀತಿ ರೋಮಾಂಚಕವಾಗಿದೆಯಲ್ಲವೆ ? ಆದರೆ ಇದೇನೂ ವಿದ್ಯುನ್ಮಾನ ವಾಣಿಜ್ಯ ವಹಿವಾಟಿಗೆ ಉತ್ತಮ ಉದಾಹರಣೆಯಲ್ಲ. ಏಕೆಂದರೆ ಇಲ್ಲಿ ಚಿತ್ರ ನೋಡಲು-ಚಿತ್ರಮಂದಿರಕ್ಕೆ ಹೋಗಬೇಕು ಹಾಗೂ ಹಣ ಪಾವತಿ ನಗದಾದರೆ ಅದು ಚಿತ್ರಮಂದಿರಲ್ಲಿಯೇ ಆಗಬೇಕಾಗಿರುತ್ತದೆ. ಆದರೆ ಈ ಉದಾಹರಣೆಯಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ವಿದ್ಯುನ್ಮಾನ ಮಾಧ್ಯಮವನ್ನು ಬಳಸಿಕೊಳ್ಳಲು ಅನೇಕರು ತುದಿಗಾಲಲ್ಲಿ ನಿಂತಿದ್ದಾರೆ. ಇದಕ್ಕೆ ನಿದರ್ಶನವಾಗಿ ಇನ್ನೂ ಒಂದು ಉದಾಹರಣೆ ಇದೆ. ಮುಂಬಯಿಯಲ್ಲಿ ವೀಳೆಯದೆಲೆಗೆ ಸುಣ್ಣ ಬಳಿದು ಸುಗಂಧ ಮಸಾಲೆ ತುಂಬಿ ಕೊಡುವ ಒಬ್ಬ ವ್ಯಕ್ತಿ ಅಂತರಜಾಲದಲ್ಲಿ ತನ್ನದೇ ಆದ ತಾಣವನ್ನು ಹೊಂದಿದ್ದು, ವೀಳೆಯದೆಲೆ ಪಟ್ಟಿಗಳಿಗೆ ಆದೇಶ ಸಲ್ಲಿಸಿ ಎಂದು ಆಹ್ವಾನ ನೀಡಿದ್ದಾನೆ. ಬೀದಿಬದಿಯ ಪೆಟ್ಟಿಗೆ ಅಂಗಡಿಗಳವರೂ ಅಂತರಜಾಲದಲ್ಲಿ ತಮ್ಮ ಪುಟಗಳನ್ನು ತೆರೆದು ಕಾಯಿ ಸೀಳುಗಳನ್ನೂ ಪಾಕಂಪಪ್ಪನ್ನೂ ಖರೀದಿಸಲು ಆಹ್ವಾನ ನೀಡಬಹುದು. ಆದರೆ ಸಧ್ಯದಲ್ಲಿ ಅವುಗಳನ್ನು ಗಣಕ ಜಾಲದ ಮೂಲಕ ರವಾನಿಸಲು ಸಾಧ್ಯವಿಲ್ಲವಾದ್ದರಿಂದ ಪಾಕಂಪಪ್ಪನ್ನು ಸವಿಯಲು ಬಯಸುವವರು ಅಲ್ಲಿಗೇ ಹೋಗಬೇಕಾಗಿದೆ. ಪರಂಪರಾಗತ ವಾಣಿಜ್ಯದ ಚೌಕಟ್ಟೇನೂ ಅಷ್ಟು ಬೇಗ ಸಡಿಲುವಂತಹದ್ದಲ್ಲ ; ಅದು ಅಪೇಕ್ಷಣೀಯವೂ ಅಲ್ಲ. ಜಾಗತೀಕರಣದ ಹಾದಿಯಲ್ಲಿ ಸಾಗುತ್ತಿರುವ ಎಲ್ಲ ದೇಶಗಳಲ್ಲಿಯೂ

ಈ ರೀತಿಯ ಹೊಸ ಒತ್ತಡಗಳು ಸಾಂಪ್ರದಾಯಿಕ ವಾಣಿಜ್ಯ ರೂಪಗಳ ಮೇಲೆ ಪರಿಣಾಮ ಬೀರಲು ಯತ್ನಿಸುತ್ತಿರುವುದು ಮಾತ್ರ ಸ್ಪಷ್ಟವಾಗಿ ಕಾಣಬರುತ್ತಿದೆ. ತಂತ್ರಜ್ಞಾನದ ಯಾವುದೋ ಅಗತ್ಯಗಳಿಗೆ ನಿರ್ಮಾಣವಾದ ಅಂತರಜಾಲ ತನ್ನಷ್ಟಕ್ಕೆ ಒಂದು ಪ್ರಬಲ ಮಾಧ್ಯಮವಾಗಿ ಎಲ್ಲವನ್ನೂ ಆವರಿಸುವ ಲಕ್ಷಣಗಳನ್ನು ತೋರುತ್ತಿದೆ. ಇದರ ಪರಿಣಾಮಗಳನ್ನು ನಿಶ್ಚಿತವಾಗಿ ಈಗ ಹೇಳಲಾಗದಿದ್ದರೂ ಅದು ತರುವ ಅನುಕೂಲಗಳೊಡನೆ ಅನಪೇಕ್ಷಿತ ವಿಪರೀತಗಳನ್ನೂ ತಂದೊಡ್ಡಬಹುದು. ಆದರೆ ಈ ಪ್ರಕ್ರಿಯೆ ನಿಲ್ಲಿಸಲಾರದಂಥದಾಗಿದೆ ಎನ್ನುವುದನ್ನು ಯಾವಾಗಲೂ ನೆನಪಿನಲ್ಲಿಡಬೇಕಾಗಿದೆ. ಈ ದೃಷ್ಟಿಯಿಂದ ಸಮಾಜಕ್ಕೆ ಇದರಿಂದ ಆಗಬಹುದಾದ ಅನುಕೂಲಗಳನ್ನು ಪಡೆದುಕೊಳ್ಳಲು ಯತ್ನಿಸುವುದೇ ಸಹಜಕ್ರಮವಾಗಿದೆ. ಅಂತಹವೂ ಸಹ ಹೇರಳವಾಗಿವೆ. ಉದಾಹರಣೆಗೆ ನಮ್ಮ ಕೃಷಿಕರನ್ನೇ ತೆಗೆದುಕೊಳ್ಳಬಹುದು. ಮಧ್ಯವರ್ತಿಗಳ ಕಾಟದಲ್ಲಿ ನಮ್ಮ ಬೆಳೆಗಾರರು ನುಲುಗಿ ಹೋಗಿದ್ದಾರೆ. ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾದಾಗ ಇವರಿಗೆ ಸಿಗುವ ಲಾಭ ಕಡಿಮೆಯೇ. ಆದರೆ ಬೆಲೆಗಳು ತಗ್ಗಿದಾಗ ಮಾತ್ರ ನಷ್ಟ ಕಟ್ಟಿಟ್ಟ ಬುತ್ತಿ. ಸರಿಯಾದ ಸಮಯದಲ್ಲಿ ಸೂಕ್ತ ಮಾಹಿತಿಯ ಅಲಭ್ಯತೆ, ಎಲ್ಲ ಮಾಲನ್ನೂ ಬಿಕರಿ ಮಾಡಲೇಬೇಕಾದ ಅನಿವಾರ್ಯತೆ ನಮ್ಮ ರೈತರನ್ನು ಕಂಗೆಡಿಸಿವೆ. ಅಂತಹ ಜಾಲದ ವ್ಯವಸ್ಥೆಗೆ ಕೃಷಿಕರ ಸೇರ್ಪಡೆಯಾದಾಗ ಮಾರುಕಟ್ಟೆಯನ್ನೇ ರೈತ ತನ್ನ ಮನೆಯಿಂದ ವೀಕ್ಷಿಸಬಹುದು. ಮಾಹಿತಿ ಪುಟಗಳಿಂದ ಆ ಕ್ಷಣದ ಧಾರಣೆಯನ್ನು ತಿಳಿಯಬಹುದು. ಇರುವ ಬೇಡಿಕೆಯನ್ನು ಮತ್ತೆ ಹೆಚ್ಚಿಸಬಹುದು. ಸಂರಕ್ಷಣೆಗಾಗಿ ಶೈತ್ಯಾಗಾರಗಳಿಗೆ ತನ್ನ ಬೆಳೆಯನ್ನು ಕಳಿಸಬಹುದು. ಆ ಮಾಲಿಗೆ ಬೇಡಿಕೆ ಇರುವ ಸ್ಥಳ, ಸಂಸ್ಥೆ, ವ್ಯಕ್ತಿಗಳ ಮಾಹಿತಿ ಪಡೆದು ಸಂಪರ್ಕಿಸಿ ವ್ಯವಹಾರ ಕುದುರಿಸಿ ರವಾನೆಗೆ ಏರ್ಪಾಡು ಮಾಡಬಹುದು. ಇದೆಲ್ಲ ಆಗದ ಮಾತು. ನಮ್ಮ ರೈತರು ಗಣಕವನ್ನು ಬಳಸುವುದು ಸಾಧ್ಯವೇ ಎಂಬ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಆದರೆ ನಮ್ಮ ಕೃಷಿಕರು ತಮಗೆ ಪ್ರಯೋಜನವಿದೆ ಎಂದಾಗ ಎಲ್ಲ ಸೌಲಭ್ಯಗಳನ್ನೂ ಖಂಡಿತ ಬಳಸಿಕೊಳ್ಳುತ್ತಾರೆ. ಇದಕ್ಕೆ ಈಗಾಗಲೇ ಅವರು ಪತ್ರಿಕೆ ರೇಡಿಯೋ ದೂರದರ್ಶನ ದೂರವಾಣಿಗಳನ್ನು ಮಾಹಿತಿಗಾಗಿ ಬಳಸಿಕೊಳ್ಳುತ್ತಿರುವುದೇ ಸಾಕ್ಷಿ. ಅವರ ಭಾಷೆಯಲ್ಲಿ ಮಾಹಿತಿ ಲಭ್ಯವಾಗುವಂತಿದ್ದರೆ ಅವರು ಖಂಡಿತ ಈ ಮಾಧ್ಯಮವನ್ನು ಬಳಸಿಕೊಳ್ಳುತ್ತಾರೆ. ಇದಕ್ಕೆ ರೈತರಿಗೆ ಗಣಕ ಜ್ಞಾನ ಇರಬೇಕು ಎಂದೇನೂ ಇಲ್ಲ. ಒಂದು ಗ್ರಾಮಕ್ಕೆ ಒಂದು ಗಣಕ ಅಂತರಜಾಲ ಸಂಪರ್ಕ ಇದ್ದರೆ ಸಾಕು. ಎಲ್ಲರೂ ಅದರ ಪ್ರಯೋಜನ ಪಡೆಯಬಹುದು.

ಇದು ಭಾರತದ ರೈತರ ಉದಾಹರಣೆಯಾದರೆ ದೊಡ್ಡ ಕಂಪನಿಗಳವರ ಸುದ್ದಿಯೇ ಬೇರೆ. ಅನೇಕ ಭಾರತೀಯ ಕಂಪನಿಗಳು ಈಗಾಗಲೇ ವಿದ್ಯುನ್ಮಾನ ವಾಣಿಜ್ಯವನ್ನು ತಮ್ಮ ನಿತ್ಯದ ವ್ಯವಹಾರವನ್ನಾಗಿಸಿಕೊಂಡಿವೆ (ವಿಶೇಷವಾಗಿ ಗಣಕ ತಯಾರಕರು ತಂತ್ರಾಂಶ ತಯಾರಕರು). ಒಂದು ರೀತಿಯಲ್ಲಿ ಈ ವ್ಯವಸ್ಥೆ ಮೌನ ಕ್ರಾಂತಿಯನ್ನು ಹುಟ್ಟುಹಾಕುತ್ತಿದೆ ಎಂದರೆ ಉತ್ಪ್ರೇಕ್ಷೆಯಾಗಲಾರದು. ಇದರ ಪರಿಣಾಮವನ್ನು ಕಾದು ನೋಡಬೇಕಾಗಿದೆ.

ವಾಣಿಜ್ಯ ವಹಿವಾಟುಗಳು ಏಕೆ ಅಂತರಜಾಲವನ್ನು ಅವಲಂಬಿಸುತ್ತವೆ ಎಂಬುದನ್ನು ಕಂಡುಕೊಂಡರೆ ಅನೇಕ ಪ್ರಶ್ನೆಗಳಿಗೆ ಉತ್ತರ ಸಿಗಬಹುದು.

ಒಬ್ಬ ಉದ್ದಿಮೆದಾರ ತನ್ನ ಉತ್ಪನ್ನದ ಕುರಿತ ಗ್ರಾಹಕರು ಬಯಸುವ ಎಲ್ಲ ಮಾಹಿತಿಯನ್ನು ಅಂತರಜಾಲದ ತನ್ನ ತಾಣದಲ್ಲಿರಿಸಬಹುದು. ಒಂದು ಬಾರಿ ಹೀಗೆ ಇರಿಸಿದ ಮಾಹಿತಿಗೆ ತಗಲುವ ವೆಚ್ಚ ಗಣನೀಯವಾಗಿ ಕಡಿಮೆ. ಇತರ ಮಾಧ್ಯಮಗಳಿಗೆ ಹೋಲಿಸಿದರೆ ಅದು ಪತ್ರಿಕೆ ಇರಲಿ ದೂರದರ್ಶನವಿರಲಿ ಜೊತೆಗೆ ಈ ತಾಣ ಇಡೀ ಜಗತ್ತಿಗೆ ಸದಾ ತನ್ನನ್ನು ಸೆಳೆದುಕೊಂಡಿರುತ್ತದೆ. ಅಲ್ಲದೆ ಗ್ರಾಹಕರು ಹೆಚ್ಚಿನ ವಿವರವನ್ನು ಬಯಸಿದರೆ ಅದನ್ನು ಆ ಕ್ಷಣ ನೀಡಬಲ್ಲ ಸೌಲಭ್ಯವಿರುತ್ತದೆ. ಇದು ಉದ್ದಿಮೆದಾರನ ಕಡೆಯಿಂದಾಯಿತು, ಗ್ರಾಹಕನ ದೃಷ್ಟಿಯಿಂದ ಇಲ್ಲಿ ಏನೇನು ಲಭ್ಯವಿದೆ ಎಂಬುದನ್ನು ಗಮನಿಸಬಹುದು ಒಂದು ಉತ್ಪನ್ನದ ಕುರಿತ ಮಾಹಿತಿ ಗ್ರಾಹಕನಿಗೆ ಉದ್ದಿಮೆದಾರನ ಜಾಲ ತಾಣದಲ್ಲಿಯೇ ದೊರಕುತ್ತದೆ. ಅದಲ್ಲದೆ ಅಂತಹ ಉತ್ಪನ್ನಗಳನ್ನು ಇನ್ನಾರು ತಯಾರಿಸುತ್ತಾರೆ, ಅವರುಗಳು ಉತ್ಪನ್ನಕ್ಕೆ ನಿಗದಿ ಮಾಡಿರುವ ಬೆಲೆ, ತುಲನಾತ್ಮಕವಾಗಿ ಅವುಗಳ ನಡುವಣ ಇರುವ ವ್ಯತ್ಯಾಸ, ಸಮಾನಾಂಶಗಳು, ಉತ್ಪನ್ನವನ್ನು ಯಾರಾದರೂ ಯಾವ ವಿಧದಲ್ಲಿ ಗುಣಮಟ್ಟ ತಪಾಸಣೆ ನಡೆಸಿದ್ದರೆ ಅವುಗಳ ವಿವರ —ಇಂತಹ ಮಾಹಿತಿಯನ್ನು ಒದಗಿಸುವುದೇ ಕೆಲವು ನಿರ್ದಿಷ್ಟ ಜಾಲ ತಾಣಗಳ ಕಾರ್ಯವಾಗಿರುತ್ತದೆ. ಜಾಹೀರಾತು ಫಲಕಗಳು ಅಂತರಜಾಲದಲ್ಲಿ ಹೇರಳವಾಗಿದ್ದು ಯಾವುದೇ ಉತ್ಪನ್ನ ಕಂಪನಿಗಳ ಮಾಹಿತಿಯನ್ನು ಪ್ರಸಾರಿಸುತ್ತಿರುತ್ತವೆ. ಸಂಶೋಧನೆಗೆ ಬೇಕಾದ ಸಲಕರಣೆಗಳಾದರೆ, ನಿರ್ದಿಷ್ಟ ಸಲಹೆಗಳನ್ನು ಉಚಿತವಾಗಿ ನೀಡುವ ಜಾಲತಾಣಗಳು ಅಂತರ್ ಜಾಲದಲ್ಲಿವೆ. ಹೀಗೆ ಅನೇಕ ಅನುಕೂಲಗಳನ್ನು ಅಂತರಜಾಲ ತಂದುಕೊಡುವುದರಿಂದಲೇ ವಿದ್ಯುನ್ಮಾನ ವಾಣಿಜ್ಯ ಇಂದು ಘಾತೀಯ ಅನುಪಾತದಲ್ಲಿ ವಿಸ್ತಾರವಾಗುತ್ತಿದೆ. ಉದಾಹರಣೆಗೆ 1996ರಲ್ಲಿ ಪ್ರಪಂಚಾದ್ಯಂತ ವಿದ್ಯುನ್ಮಾನ ವಾಣಿಜ್ಯದ ಗಾತ್ರ 2.8 ಮಿಲಿಯನ್ ಡಾಲರ್ ಇದ್ದದ್ದು 1988ರಲ್ಲಿ 7.8 ಮಿಲಿಯನ್ ಡಾಲರ್‌ಗೆ ಏರಿತು. ಕ್ರಿ.ಶ. 2001ರ ವೇಳೆಗೆ ಇದರ ಮೊತ್ತ 300 ಮಿಲಿಯನ್ ಡಾಲರ್‌ಗೆ ಏರುವ ನಿರೀಕ್ಷೆ ಇದೆ.

ಭಾರತದಲ್ಲಿ ಇನ್ನೂ ಇದೀಗ ಕಾಣಿಸಿಕೊಳ್ಳುತ್ತಿರುವ ವಿದ್ಯುನ್ಮಾನ ವಾಣಿಜ್ಯ, 'ಅನೇಕರು ಹೆಚ್ಚಿನ ಅವಕಾಶವಿಲ್ಲವೆಂದರೂ', ಗರಿಗೆದರಿಕೊಳ್ಳುವ ನಿರೀಕ್ಷೆ ಇದೆ. ಇದರ ಪೂರ್ವಾಪರಗಳನ್ನು ಹೀಗೆ ಸಂಗ್ರಹಿಸಬಹುದು :

1. ಭಾರತದಲ್ಲಿ ದೂರವಾಣಿಯೇ ಸರಿಯಿಲ್ಲ, ವಿದ್ಯುನ್ಮಾನ ವಾಣಿಜ್ಯವೆಲ್ಲಿ ಬಂತು ?

2. ಗಣಕದ ಬಳಕೆ ತರಕಾರಿ ಮಾರುವಷ್ಟು ಸುಲಭವೆ ? ವಿದ್ಯಾವಂತರೇ ಅಲ್ಪಸಂಖ್ಯಾತರಾದ ನಮ್ಮ ದೇಶದಲ್ಲಿ ಗಣಕ ಬಳಸುವವರೆಷ್ಟು ಮಂದಿ? ಕೊಳ್ಳಲು ಸಾಧ್ಯವಾಗುವುದು ಎಷ್ಟು ಜನಕ್ಕೆ ?

3. ನಮ್ಮ ಕಾನೂನಿನ ಪರಿಧಿಯಲ್ಲಿ ವಿದ್ಯುನ್ಮಾನ ವಾಣಿಜ್ಯ ಬರುತ್ತದೆಯೆ? ಬದಲಾವಣೆಗಳು ಬೇಡವೆ ?

4. ವಿದ್ಯುನ್ಮಾನ ವಾಣಿಜ್ಯ ನಿರುದ್ಯೋಗ ಸಮಸ್ಯೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಅದಕ್ಕೇಕೆ ಸಂಭ್ರಮದ ಸ್ವಾಗತ ?

5. ಬ್ಯಾಂಕಿಂಗ್‌ನಂತಹ ವ್ಯವಹಾರಕ್ಕಂತೂ ಇದರಲ್ಲಿ ಅಸ್ಪದವೇ ಇಲ್ಲ. ನಮ್ಮ ಬ್ಯಾಂಕುಗಳು ಇದಕ್ಕೆ ಸಿದ್ಧವಾಗಿಲ್ಲ. ಬ್ಯಾಂಕುಗಳ ಗಣಕೀಕರಣ ಪ್ರಕ್ರಿಯೆ ಮುಗಿಯುವುದಿರಲಿ, ಸರಿಯಾಗಿ ಪ್ರಾರಂಭವೇ ಆಗಿಲ್ಲ.

6. ವಿದ್ಯುನ್ಮಾನ ವಾಣಿಜ್ಯ ಸುರಕ್ಷಿತವಲ್ಲ. ಗ್ರಾಮಿಣ ಜನತೆಯೇ ಹೆಚ್ಚಿರುವ ಭಾರತದಲ್ಲಿ ಇದು ಸಾಧ್ಯವೆ ?

ಇವು ಋಣಾತ್ಮಕ ಅಂಶಗಳಾದರೆ ಧನಾತ್ಮಕ ಅಂಶಗಳೂ ಇವೆ :

1. ದೂರ ಸಂಪರ್ಕಜಾಲವನ್ನು ದೃಢವಾಗಿ ಬೆಳೆಸುವತ್ತ ಕೇಂದ್ರ ಸರ್ಕಾರ ಕ್ರಮ ಕೈಗೊಳ್ಳುತ್ತಿದೆ. ಖಾಸಗಿಯವರಿಗೆ ಇದರ ನಿರ್ವಹಣೆಗೆ ಅನುಮತಿ ಇತ್ತಿರುವುದೇ ಇದಕ್ಕೆ ಸಾಕ್ಷಿ, ಹೇಗಾದರೂ ಈಗ ದೂರ ಸಂಪರ್ಕ ಎಷ್ಟೋ ಉತ್ತಮ ಎನ್ನುವುದು ನಿಜ. ಈಗಾಗಲೇ ಖಾಸಗಿ ಕಂಪನಿಗಳು ಅಂತರಜಾಲ ಸಂಪರ್ಕವನ್ನು ನೀಡಲು ಆರಂಭಿಸಿವೆ. ದಿನೇ ದಿನೇ ಅಂತರಜಾಲ ಸಂಪರ್ಕ ಪಡೆಯುವವರ ಸಂಖ್ಯೆ ಹೆಚ್ಚುತ್ತಿದೆ.

2. ಅತಿ ಶೀಘ್ರದಲ್ಲಿ ಅಂತರಜಾಲ ಸಂಪರ್ಕ ದೂರವಾಣಿ ಮಳಿಗೆಗಳಂತೆ ಎಲ್ಲೆಡೆ ದೊರೆಯಲಿದೆ. ಈಗಲೇ ಅನೇಕ ನಗರಗಳಲ್ಲಿ ಈ ಸೇವೆ ಅರ್ಧ ಗಂಟೆಗೆ 30 ರೂ. ಗಳಂತೆ ದೊರೆಯುತ್ತಿದೆ. ಹೀಗಾಗಿ ಎಲ್ಲರೂ ಗಣಕಗಳನ್ನು ಕೊಳ್ಳಬೇಕಿಲ್ಲ, ಕಲಿಯಬೇಕಿಲ್ಲ ಅಥವಾ ಅಂತರಜಾಲ ಸಂಪರ್ಕ ಹೊಂದಬೇಕಿಲ್ಲ. ಇಂತಹ ಸೇವೆಗಳನ್ನು ಗ್ರಾಹಕರಿಗೆ ಬೇಕಾದ ರೀತಿಯಲ್ಲಿ ಒದಗಿಸುವ ಸಂಸ್ಥೆಗಳು ಈಗಾಗಲೇ ಇವೆ ಹಾಗೂ ಅವುಗಳ ಸಂಖ್ಯೆ ಹೆಚ್ಚುತ್ತವೆ.

3. ಇದೊಂದು ನಿಜವಾದ ತೊಡಕು. ನಿಧಿ ವರ್ಗಾವಣೆ ಬ್ಯಾಂಕಿಂಗ್ ಮುಂತಾದವು ವಾಣಿಜ್ಯವನ್ನು ಅಳವಡಿಸಿಕೊಳ್ಳಲು ಅನೇಕ ಕಾನೂನುಗಳ ಬದಲಾವಣೆ ಅಗತ್ಯವಿದೆ. ಈ ಕುರಿತು ಸರ್ಕಾರ ತೀವ್ರವಾಗಿ ಚಿಂತಿಸುತ್ತಿದೆ.

4. ನಿರುದ್ಯೋಗ ಸಮಸ್ಯೆ ದೇಶವನ್ನು ಭೂತಾಕಾರವಾಗಿ ಕಾಡುತ್ತಿದೆ ನಿಜ. ವಿದ್ಯುನ್ಮಾನ ವಾಣಿಜ್ಯ ಇದನ್ನು ಉಲ್ಬಣ ಗೊಳಿಸುತ್ತದೆ ಎನ್ನುವುದು ಖಂಡಿತ ಸರಿಯಲ್ಲ, ಬದಲಿಗೆ ಇದು ಮತ್ತಷ್ಟು ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಸಾಧ್ಯತೆಯೇ ಬಹಳ. ಏಕೆಂದರೆ ವಿದ್ಯುನ್ಮಾನ ವಾಣಿಜ್ಯದಿಂದ ವಹಿವಾಟುಗಳು ಹೆಚ್ಚಾಗುತ್ತವೆ.

5 ಅಂತರಜಾಲ ವ್ಯವಹಾರ ಸಧ್ಯದಲ್ಲಿ ಅಷ್ಟೊಂದು ಸುರಕ್ಷಿತವಲ್ಲ ಎನ್ನುವುದು ನಿಜ. ಆದರೆ ಅದನ್ನು ಸುರಕ್ಷಿತವಾಗಿಸಲು ಎಲ್ಲಾ ಪ್ರಯತ್ನಗಳೂ ನಡೆಯುತ್ತಿವೆ. ಸುರಕ್ಷಿತ ಅಂತರಜಾಲ ವ್ಯವಹಾರ ಸದ್ಯದಲ್ಲಿಯೇ ಸಾಧ್ಯವಾಗಿರುವ ನಿಟ್ಟಿನಲ್ಲಿ ಅನೇಕ ಸಂಸ್ಥೆಗಳು ಕಾರ್ಯ ಪ್ರವೃತ್ತವಾಗಿವೆ

ಸುರಕ್ಷಿತ ವಾತಾವರಣ ನಿರ್ಮಾಣವಾದ ನಂತರ ಬ್ಯಾಂಕಿಂಗ್‌ನಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಬರುವುದು ಖಂಡಿತ. ಮುಂದಿನ ದಿನಗಳಲ್ಲಿ ಬ್ಯಾಂಕಿಂಗ್ ತೀವ್ರ ಬದಲಾವಣೆಯನ್ನು ಕಾಣುವುದು ಬಹುತೇಕ ಖಚಿತವೆಂದೇ ಹೇಳಬಹುದು.

ಈಗ ಸಾಂಪ್ರದಾಯಿಕ ಬ್ಯಾಂಕಿಂಗ್‌ನಲ್ಲಿ ಕಾಣಬರುವ ಅನೇಕ ವಿಭಾಗಗಳ, ರಾಷ್ಟ್ರೀಕೃತ ಬ್ಯಾಂಕುಗಳು, ಖಾಸಗಿ ವಾಣಿಜ್ಯ ಬ್ಯಾಂಕುಗಳು, ನಗರ ಸಹಕಾರಿ ಬ್ಯಾಂಕುಗಳು, ಸಹಕಾರಿ ಬ್ಯಾಂಕುಗಳು, ಗ್ರಾಮೀಣ ಬ್ಯಾಂಕುಗಳು, ನಡುವಣ ಅಂತರ ಇಲ್ಲವೇ ಇಲ್ಲವೆನ್ನುವಷ್ಟು ಕಡಿಮೆಯಾಗಬಹುದು. ಅಲ್ಲದೆ ಬ್ಯಾಂಕುಗಳು, ವಿಮಾ ಕಂಪನಿಗಳು, ಇತರ ಹಣಕಾಸು ಸಂಸ್ಥೆಗಳ ಕಾರ್ಯಭಾರಗಳ ಒಂದರ ಪರಿಧಿಯನ್ನು ಇನ್ನೊಂದರ ಪರಿಧಿ ಆವರಿಸಬಹುದು. ಈಗಾಗಲೇ ಬ್ಯಾಂಕುಗಳು ಹಿಂದೆಂದೂ ಕಾಣದಷ್ಟು ವಿವಿಧ ರೀತಿಯ ಹೊರ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿವೆ.

ವಿದ್ಯುನ್ಮಾನ ವಾಣಿಜ್ಯ ಈ ಚಟುವಟಿಕೆಗಳ ಪಟ್ಟಿಯನ್ನು ಖಂಡಿತ ಹಿಗ್ಗಿಸುತ್ತದೆ. ಉದಾಹರಣೆಗೆ ಬ್ಯಾಂಕು ಬಂಡವಾಳ ಪೇಟೆಯ ಅನೇಕ ಕಲಾಪಗಳನ್ನು ಕೈಗೆತ್ತಿಕೊಳ್ಳಬಹುದು. ವಿಮಾ ಕ್ಷೇತ್ರಕ್ಕಂತೂ ಅವು ಕಾಲಿಡುವುದು ಖಚಿತವಾದಂತೆಯೇ ಇದೆ. ಭಾರತೀಯ ಸ್ಟೇಟ್ ಬ್ಯಾಂಕ್ ಉದರಿ ಕಾರ್ಡುಗಳಂತೂ ಈಗ ನಿತ್ಯದ ವಿಷಯವಾಗಿದೆ. ಮುಂದೆ ಮತ್ತಷ್ಟು ವಿಸ್ತಾರ ಕಾಣಲಿದೆ. ಹೀಗೆಂದ ಮಾತ್ರಕ್ಕೆ ಸಾಂಪ್ರದಾಯಿಕ ಬ್ಯಾಂಕಿಂಗ್‌ಗೆ ಅವಕಾಶವೇ ಇರುವುದಿಲ್ಲ ಎಂದೇನೂ ಅಲ್ಲ. ನಮ್ಮ ದೇಶದ ವೈವಿಧ್ಯ ಭಿನ್ನತೆ ಅಸಮಾನತೆಗಳು ಸಾಂಪ್ರದಾಯಿಕ ಬ್ಯಾಂಕಿಂಗ್‌ಗೆ ಅವಕಾಶವನ್ನು ತೆರೆದೇ ಇರುತ್ತವೆ. ಅದೂ ಅಲ್ಲದೆ ಬದಲಾವಣೆಗಳು ಹಠಾತ್ತನೆ ಆಗುವುದಿಲ್ಲ. ನಮ್ಮ ಬ್ಯಾಂಕಿಂಗ್ ವಲಯದಲ್ಲಿರುವ ಅಗಾಧ ಸಂಖ್ಯೆಯ ಕಾರ್ಮಿಕ ಶಕ್ತಿ ಈ ದಿಕ್ಕಿನಲ್ಲಿ ಚಿಂತಿಸುವ ರೀತಿ ಸಹ ಬಹು ಮುಖ್ಯ ಅಂಶವೆನ್ನುವುದನ್ನು ಮರೆಯಲಾರದು. ಹೇಗಾದರೂ ಬ್ಯಾಂಕಿಂಗ್ ವಲಯದಲ್ಲಿ ಬದಲಾವಣೆಗಳು ಎಲ್ಲ ರೀತಿಯಲ್ಲಿ ಕಾಣಿಸಿಕೊಳ್ಳುತ್ತಿರುವುದು ಸತ್ಯ ಸಂಗತಿಯೇ ಆಗಿದೆ. ಶಾಖೆಗಳ ಗಣಕೀಕರಣದ ಪ್ರಕ್ರಿಯೆ ಹೆಚ್ಚು ವೇಗವನ್ನು ಪಡೆದುಕೊಂಡಿದೆ ಬ್ಯಾಂಕ್ ಉದ್ಯೋಗಿಗಳು ನಿಧಾನವಾಗಿಯಾದರೂ ಇದಕ್ಕೆ ಒಗ್ಗಿಕೊಳ್ಳುತ್ತಿದ್ದಾರೆ. ಗ್ರಾಹಕರು, ವಿಶೇಷವಾಗಿ ನಗರ ಪ್ರದೇಶಗಳಲ್ಲಿರುವವರು, ಆಧುನಿಕ ತಂತ್ರಜ್ಞಾನದ ಬಳಕೆಯನ್ನು ಅಪೇಕ್ಷಿಸುತ್ತಿದ್ದಾರೆ. ನಿಧಾನಕ್ಕೆ ಇದು ಗ್ರಾಮೀಣ ಪ್ರದೇಶಕ್ಕೂ ಹರಡುವ ಸಾಧ್ಯತೆ ಇದೆ. ಬ್ಯಾಂಕಿನ ಉದ್ಯೋಗಿಗಳ ಸಂಖ್ಯೆ ಸ್ಥಿರವಾಗಿದೆ ಅಥವಾ ಕಡಿಮೆಯಾಗುತ್ತಲಿದೆ. ಈ ಎಲ್ಲ ಅಂಶಗಳೂ ವಿದ್ಯುನ್ಮಾನ ವಾಣಿಜ್ಯ ಬ್ಯಾಂಕಿಂಗ್ ವಲಯವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಸಹಕಾರಿಯಾಗಿವೆ. ಒಟ್ಟಿನ ಮೇಲೆ ವಿದ್ಯುನ್ಮಾನ ವಾಣಿಜ್ಯ ಬೀರುವ ಪರಿಣಾಮಗಳನ್ನು ಕಾದು ನೋಡಬೇಕಾಗಿದೆ. ಇದರ ಪ್ರಭಾವಗಳನ್ನು ಮುಂಗಾಣ್ಕೆಯಿಂದ ವಿವರವಾಗಿ ಪರಿಶೀಲಿಸಿ, ಸಮಾಜಕ್ಕೆ ಅನನುಕೂಲಕರ ಎನಿಸಬಹುದಾದ ಪರಿಣಾಮಗಳನ್ನು ನಿವಾರಿಸಿಕೊಳ್ಳುವ ಯತ್ನಗಳನ್ನು ಮಾಡಬೇಕಾಗಿದೆ.

ಬ್ಯಾಂಕ್‌ಗಳ ಸಾಲ ವಸೂಲಿ ಸಮಸ್ಯೆ

ಎಂ. ರಮೇಶ

ಯಾವುದೇ ಒಂದು ಉದ್ದಿಮೆ, ವ್ಯಾಪಾರದ ವ್ಯವಹಾರದ, ಮೂಲೋದ್ದೇಶ ಲಾಭಗಳಿಕೆಯೇ ಆಗಿರುತ್ತದೆ. ವಾಣಿಜ್ಯ ಬ್ಯಾಂಕುಗಳು ಇದಕ್ಕೆ ಹೊರತೇನಲ್ಲ. ಬ್ಯಾಂಕಿನ ಮುಖ್ಯ ವಹಿವಾಟು ಕೂಡಾ ಠೇವಣಿಯನ್ನು ಸಂಗ್ರಹಿಸಿ ಅದನ್ನು ಅಗತ್ಯವಿರುವವರಗೆ ಸಾಲ ರೂಪದಲ್ಲಿ ನಿಯಮಿತ ಬಡ್ಡಿಗೆ (ಠೇವಣಿಗೆ ಕೊಡುವ ಬಡ್ಡಿಗಿಂತಲೂ ಸ್ವಲ್ಪ ಹೆಚ್ಚು) ಕೊಡುವುದು. ಆದ್ದರಿಂದ ಠೇವಣಿ ಸಂಗ್ರಹ ಮತ್ತು ಸಾಲ ಕೊಡುವುದು ಬ್ಯಾಂಕಿನ ಎರಡು ಕಣ್ಣುಗಳಿದ್ದಂತೆ ಎಂದು ನಾವು ವರ್ಣಿಸಬಹುದು. ಯಾವುದೇ ಒಂದು ಕಣ್ಣಿಗೆ ನೋವುಂಟಾದರೂ ನಾವು ನೋಡುವ ದೃಷ್ಟಿ ತನ್ನ ನಿಖರತೆಯನ್ನು ಹೇಗೆ ಕಳೆದು ಕೊಳ್ಳುತ್ತದೋ ಹಾಗೆಯೇ ಬ್ಯಾಂಕಿನ ಮುಖ್ಯ ಕಾರ್ಯಗಳಾದ ಈ ಎರಡರಲ್ಲಿ ಯಾವುದಕ್ಕೆ ಕುಂದು ಬಂದರೂ ಬಹಳ ಕಷ್ಟವಾಗುತ್ತದೆ.

ಶಾಖಾ ವ್ಯವಸ್ಥಾಪಕನ ತಲೆಯಲ್ಲಿ ಸದಾ ಯುದ್ಧಮಾಡುವ ಎರಡು ಶಬ್ದಗಳು ಠೇವಣಿ ಸಂಗ್ರಹಣೆ ಮತ್ತು ಸಾಲ ವಸೂಲಿ ಎಂದರೆ ತಪ್ಪಾಗಲಾರದು. ಹಲವು ಸಂಪನ್ಮೂಲಗಳಿಂದ ಕ್ರೋಡೀಕರಿಸಿದ ಠೇವಣಿ ಒಂದಿದ್ದರೆ ಸಾಲದು. ಅದನ್ನು ಸೂಕ್ತ ಹಾಗೂ ಅರ್ಹ ವ್ಯಕ್ತಿಗಳಿಗೆ ಸಾಲ ಕೊಡಬೇಕು. ಕೇವಲ ಸಾಲಕೊಟ್ಟರೆ ಸಾಲದು ಅದನ್ನು ಸರಿಯಾದ ಸಮಯದಲ್ಲಿ ಹಿಂದಕ್ಕೆ ಪಡೆದುಕೊಳ್ಳುವ ವ್ಯವಸ್ಥೆಯಿರಬೇಕು. ಆಗ ಮಾತ್ರ ಬ್ಯಾಂಕಿಂಗ್ ವಹಿವಾಟಿನ ಚಕ್ರ ಸರಾಗವಾಗಿ ತಿರುಗಿ ತಾನು ನಡೆಸುತ್ತಿರುವ ವಹಿವಾಟಿನಲ್ಲಿ ಯಶಸ್ಸಿ ಹೊಂದುತ್ತದೆ.

ಸಾಲ ವಸೂಲಿಗೂ ಸಾಲ ಮರುಪಾವತಿಗೂ ಸಾಕಷ್ಟು ವ್ಯತ್ಯಾಸ ವಿದೆ. ಮರುಪಾವತಿ ಎಂದರೆ ಸಾಲಗಾರ ತನ್ನಷ್ಟಕ್ಕೆ ತಾನೇ ನಿಗದಿ ಪಡಿಸಿದ ಸಮಯಕ್ಕೆ ಸರಿಯಾಗಿ ಸಾಲದ ಕಂತು ಹಾಗೂ ಬಡ್ಡಿಯನ್ನು ಬ್ಯಾಂಕಿಗೆ ಜಮಾ ಮಾಡುವುದು. ಆದರೆ ನಿಗದಿಯಾದ ಸಮಯಕ್ಕೆ ಸರಿಯಾಗಿ ಪಾವತಿಯಾಗದಿದ್ದಾಗ ವಸೂಲಾತಿ ಪ್ರಾರಂಭವಾಗುತ್ತದೆ. ಸಾಲದ ಮರುಪಾವತಿ ಸಕಾಲಕ್ಕೆ ಆಗದಿದ್ದಲ್ಲಿ ಸಾಲ ಬಾಕಿಯಾಗಿ, ಬಡ್ಡಿ ಸುಸ್ತಿಯಾಗಿ, ಸಾಲದ ಹೊರೆ ಬೆಳೆಯುತ್ತಾ ಹೋಗುತ್ತದೆ.

ಸಾಲ ಮಂಜೂರು ಮಾಡುವ ಮುನ್ನ ಸಾಲದ ಆವಶ್ಯಕತೆ, ಅದರ ಸಾರ್ಥಕತೆ ಹಾಗೂ ಮರುಪಾವತಿಯಾಗುವ ಕ್ರಮವನ್ನು ಕೂಲಂಕಷ ವಾಗಿ ಪರಿಶೀಲಿಸಿದ ನಂತರವೇ ಮಂಜೂರು ಮಾಡುವುದು ನಮ್ಮಲ್ಲಿ ಬಂದಿರುವ ಪದ್ಧತಿ. ಅದರಲ್ಲೂ ಬ್ಯಾಂಕುಗಳು ಉತ್ಪಾದನ ಸಾಮರ್ಥ್ಯ ಹೊಂದಿರುವ ಕ್ಷೇತ್ರಗಳಿಗಲ್ಲದೆ, ಮದುವೆ, ಮುಂಜಿ ಸಮಾರಂಭಗಳಿಗೆ ಸಾಲ ಕೊಡುವುದಿಲ್ಲ. ಬ್ಯಾಂಕಿನ ಅಧಿಕಾರಿಗಳು ಸಾಲ ಮಂಜೂರು ಮಾಡುವ ಮುನ್ನ ಕೆಲವು ನೀತಿ-ನಿಯಮಗಳ ಅನುಸಾರ ನಡೆಯ ಬೇಕಾಗುವುದು. ಅವು ಯಾವುದೆಂದರೆ :

1. ಸುರಕ್ಷತೆ
2. ನಗದು ಗುಣ
3. ಉದ್ದೇಶ
4. ಭದ್ರತೆ
5. ಸಾಲಗಾರನ ಪ್ರಾಮಾಣಿಕತೆ
6. ರಾಷ್ಟ್ರೀಯ ಹಿತ

ಇಷ್ಟೆಲ್ಲಾ ಮುನ್ನೆಚ್ಚರಿಕೆ ವಹಿಸಿ ಸಾಲ ಮಂಜೂರು ಮಾಡಿದರೂ ಸಾಲ ಮರುಪಾವತಿಯಾಗುವ ಬದಲು ಸಾಲ ವಸೂಲಿ ಕೈಗೊಳ್ಳ ಬೇಕಾಗುತ್ತದೆ. ಸಾಲ ವಸೂಲಿಯಲ್ಲಿ ಬರಬಹುದಾದ ಅಡೆತಡೆಗಳು, ಎಡರುತೊಡರುಗಳನ್ನು ಹಾಗೂ ಅವುಗಳಿಗಿರುವ ಪರಿಹಾರಗಳತ್ತ ಒಂದು ಪಕ್ಷಿನೋಟ ಹರಿಸೋಣ. ಸಾಲ ವಸೂಲಿ ಸಮಸ್ಯೆಯನ್ನು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು :

1. ಅಂತರಿಕ ಸಮಸ್ಯೆ
2. ಬಾಹ್ಯ ಸಮಸ್ಯೆ

ಅಂತರಿಕ ಸಮಸ್ಯೆ

1. ಸಾಲ ಮಂಜೂರು ಮಾಡುವ ಮುನ್ನ ಅರ್ಜಿಯನ್ನು ಸರಿ ಯಾಗಿ ಪರಿಶೀಲಿಸದೆ ಸಾಲ ಮಂಜೂರು ಮಾಡುವುದು.

2. ಅಗತ್ಯಕ್ಕಿಂತ ಹೆಚ್ಚು ಅಥವಾ ಕಡಿಮೆ ಸಾಲ ಮಂಜೂರು ಮಾಡುವುದು.

3. ಮುಂದಿನ ದಿನಗಳ ಮಾರುಕಟ್ಟೆ ಬೆಲೆಯನ್ನು ಭ್ರಾಮಕ ಊಹಾಪೋಹಗಳ ಮೇಲೆ ನಿರ್ಧರಿಸಿ ಸಾಲ ಮಂಜೂರು ಮಾಡುವುದು.

4. ಸಾಲ ಮರುಪಾವತಿಯಾಗದೇ ಹೋದಾಗ, ಸಕಾಲದಲ್ಲಿ ಸಾಲಗಾರನನ್ನು ಭೇಟಿಯಾಗಿ ಕ್ರಮತೆಗೆದುಕೊಳ್ಳಲು ಆಗದೇ ಇರು ವುದು.

5. ಅಧಿಕಾರಿಗಳ ವರ್ಗಾವಣೆ ಸಾಲ ವಸೂಲಿಗೆ ಒಂದು ದೊಡ್ಡ ಸಮಸ್ಯೆಯಾಗಿದೆ. ಹೊಸದಾಗಿ ವರ್ಗವಾಗಿ ಬಂದ ಅಧಿಕಾರಿಗೆ, ಹಿಂದಿನ ಅಧಿಕಾರಿ ಮಂಜೂರು ಮಾಡಿದ ಸಾಲಗಳನ್ನು ಕುರಿತು ಹೆಚ್ಚಿನ ಮಾಹಿತಿ ದೊರೆಯದ ಕಾರಣ ಆತ ಸಂಪೂರ್ಣ ಯಶಸ್ಸಿ ಹೊಂದಲಾರ. ಇನ್ನು ಕೆಲವರು ಅದರತ್ತ ತಮ್ಮ ಗಮನವನ್ನೇ ಹರಿಸುವುದಿಲ್ಲ.

6. ಕಾಲದ ಪರಿಮಿತಿ ಕೂಡಾ ಸಾಲ ವಸೂಲಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತದೆ. ಆದ್ದರಿಂದ ಸಾಲಗಾರನ ಕೈಗೆ ಅವರ ಉತ್ಪನ್ನದ ಮೊತ್ತ ಯಾವಾಗ ಬರುತ್ತದೆ ಎಂಬುದನ್ನು ತಿಳಿಯಲು ಬ್ಯಾಂಕಿನ ಅಧಿಕಾರಿಗಳು ಅವನ ಮೇಲೆ ಹದ್ದಿನ ಕಣ್ಣಿಟ್ಟಿರಬೇಕು. ಆದರೆ ಇದು ಹಲವಾರು ಕಾರಣಗಳಿಂದ ಸಾಧ್ಯವಾಗದ ಸಮಸ್ಯೆಯಾಗೇ ಉಳಿದಿದೆ.

7. ಗಾಳಿಮಾತುಗಳಿಂದ ಪ್ರಭಾವಿತನಾದ ಸಾಲಗಾರ, ಸಾಲವನ್ನು ಹಿಂತಿರುಗಿಸುವುದಿಲ್ಲ. ಅನಕ್ಷರತೆ ಕೂಡಾ ಸಾಲ ವಸೂಲಿಯ ಒಂದು ಸಮಸ್ಯೆಯಾಗಿ ಕಾಡುತ್ತಿದೆ.

ಬಾಹ್ಯ ಸಮಸ್ಯೆ

1. ನಮ್ಮ ದೇಶ ಹಳ್ಳಿಗಳಿಂದ ಕೂಡಿದ ದೇಶವಾದ್ದರಿಂದ ಹಳ್ಳಿಗಳಲ್ಲಿ ಉತ್ಪಾದಿಸಿದ ಉತ್ಪನ್ನವನ್ನು ನೇರವಾಗಿ ಮಾರುಕಟ್ಟೆಗಳಿಗೆ ಸಾಗಿಸಲು ಸಾಧ್ಯವಾಗದ ಜನರು ಮಧ್ಯವರ್ತಿಗಳ ಕೈಯಲ್ಲಿ ಸಿಲುಕಿ ಕಡಿಮೆ ಬೆಲೆಗೆ ತಮ್ಮ ದಾಸ್ತಾನನ್ನೂ ಮಾರುತ್ತಿರುವುದರಿಂದ ಅವರಿಗೆ ದೊರೆಯುವ ಸಾಲ ಮರುಪಾವತಿ ಸಾಧ್ಯವಾಗದಂತೆ ಮಾಡುತ್ತಿದೆ.

2. ಸೂಕ್ತ ಮಾರುಕಟ್ಟೆ ಕೊರತೆ, ಉಗ್ರಾಣ ನಿಗಮಗಳ ಕೊರತೆಯಿಂದ ಸರಕುಗಳನ್ನು ದಾಸ್ತಾನು ಮಾಡಲಾಗುತ್ತಿಲ್ಲ. ಉತ್ಪಾದನೆಯ ಸಮಯದಲ್ಲಿ ಸರಕು ವಿಕ್ರಯಿಸುವುದರಿಂದ ನೀರಿಕ್ಷಿಸಿದ ಬೆಲೆ ಸಿಗದೇ ಸಾಲ ಮರುಪಾವತಿಯಾಗುತ್ತಿಲ್ಲ.

3. ಹಣಕಾಸು ಸಂಸ್ಥೆಗಳ ಅಸಹಕಾರ ಒಬ್ಬ ವ್ಯಕ್ತಿ ಹಲವು ಕಡೆ ಸಾಲ ತೆಗೆದುಕೊಳ್ಳಲು ಸಹಕಾರಿಯಾಗಿದೆ. ಇದರಿಂದ ಒಬ್ಬ ವ್ಯಕ್ತಿಯೇ ಹಲವು ಕಡೆ ಸಾಲ ತೆಗೆದುಕೊಳ್ಳುವುದು ಮಾತ್ರವಲ್ಲದೆ, ಸಾಲ ವಸೂಲಿಯ ಸಮಸ್ಯೆ ಕೂಡ ದ್ವಿಗುಣಿಸಿದೆ.

4. ಸ್ವಲ್ಪ ಸಾಲ ಬಾಕಿ ಇರುವ ಖಾತೆಗಳ ಹಣವನ್ನು ಬ್ಯಾಂಕಿನ ಅಧಿಕಾರಿಗಳು ವಸೂಲಿ ಮಾಡುವ ಗೋಜಿಗೆ ಹೋಗುವುದಿಲ್ಲ. ಠೇವಣಿ ವಿಮಾ ಮತ್ತು ಉದರಿ ಖಾತರಿ ನಿಗಮ (DICGC) ದಿಂದ ವಸೂಲಿ ಮಾಡಬಹುದು. ಅಥವಾ ಸಾಲ ವಜಾ ಮಾಡಬಹುದು ಎಂದು ಸುಮ್ಮನಾಗಿ ಬಿಡುತ್ತಾರೆ.

5. ಸಂಧಾನ ಅಥವಾ ರಾಜಿಯಿಂದ ಹಣ ವಸೂಲಿಯಾಗುವುದೆಂಬ ಉದ್ದೇಶದಿಂದ ಕೆಲವರು ವಸೂಲಿಗೆ ಗಮನ ಕೊಡುವುದೇ ಇಲ್ಲ.

ಪರಿಹಾರವಿಲ್ಲದ ಸಮಸ್ಯೆಗಳೇ ಇಲ್ಲ. ಹುಡುಕಿದರೆ ಪ್ರತಿಯೊಂದು ಸಮಸ್ಯೆಗೂ ಪರಿಹಾರವಿದ್ದೇ ಇರುತ್ತದೆ. ಬಂದ ಸಮಸ್ಯೆಗಳೆನ್ನುದುರಿಸುತ್ತಾ ಬಾಳುವ ಕಲೆ ಮಾನವ ಜೀವನಕ್ಕೆ ಕರತಲಾಮಲಕವಾಗಿದೆ. ಅಂತೆಯೇ ಸಾಲ ವಸೂಲಿ ಸಮಸ್ಯೆಗೂ ಹಲವು ಪರಿಹಾರಗಳಿವೆ. ಅವು ಯಾವುದೆಂದರೆ :

1. ಸಾಲ ನೀಡಿಕೆಯ ಕ್ರಮವನ್ನು ಸರಳೀಕರಿಸುವುದು

2. ಅರ್ಹ ವ್ಯಕ್ತಿಗೆ ಸಾಲ ದೊರೆಯುವಂತೆ ಮಾಡುವುದು. ಮತ್ತೆ ಫಲಾನುಭವಿಯೇ ಸಾಲದ ಫಲ ಪಡೆಯುತ್ತಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಮಧ್ಯವರ್ತಿಗಳ ಪ್ರವೇಶ ತಡೆಯುವುದರ ಜೊತೆಗೆ ಸಾಲವನ್ನೂ ನೇರವಾಗಿ ಸಾಲಗಾರನು ಕೊಳ್ಳುವ ವಸ್ತುವಿನ ಮಾಲಿಕನಿಗೆ ಹಣ ಸಂದಾಯವಾಗುವಂತೆ ನೋಡಿಕೊಳ್ಳಬೇಕು.

3. ಯೋಜನೆ ಹಾಗೂ ವಸೂಲಿ ಆಯವ್ಯಯವನ್ನೂ ಸಿದ್ಧಪಡಿಸಿ ಅದನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತಂದರೆ ಸಾಲವಸೂಲಿ ಯಶಸ್ವಿಯಾಗುವುದರಲ್ಲಿ ಸಂಶಯವೇ ಇಲ್ಲ.

4. ಅಗತ್ಯವಿರುವಾಗಲೇ ಸಾಲದ ಅರ್ಜಿಯನ್ನು ಪರಿಶೀಲಿಸಿ ಸೂಕ್ತ ನಿರ್ಧಾರಗಳನ್ನು ಕೈಗೊಂಡು ವಿಳಂಬ ನೀತಿ ಅನುಸರಿಸದೆ ಆದಷ್ಟು ಬೇಗ ಸಾಲ ಮಂಜೂರು ಮಾಡಬೇಕು ಹೀಗೆ ಮಾಡುವುದರಿಂದ ಉತ್ಪಾದನೆಗೆ ಮಾರುಕಟ್ಟೆ ಕೂಡಿ ಬಂದು ಸಾಲಗಾರ ಸುಸ್ತಿದಾರನಾಗುವುದು ತಪ್ಪುತ್ತದೆ.

5. ಸರ್ಕಾರದ ಸಹಾಯ ಸಾಲ ವಸೂಲಿಗೆ ಅತ್ಯಗತ್ಯ. ಆದ್ದರಿಂದ ಸರ್ಕಾರವೂ ಸಾಲ ವಸೂಲಿಗೆ ಕೆಲವು ಕಾನೂನು, ನಿಯಮಾವಳಿಯನ್ನು ರೂಪಿಸಿ ಅವುಗಳನ್ನು ಕಾರ್ಯರೂಪಕ್ಕೆ ತರಲು ಪ್ರಯತ್ನಿಸಬೇಕು. ಸಾಲ ಪಾವತಿ ಮಾಡದೆ ತಪ್ಪಿದವನನ್ನು ಕ್ರೂರ ಶಿಕ್ಷೆಗೆ ಒಳಪಡಿಸುವಂತಿರಬೇಕು.

6. ಅನಕ್ಷರಸ್ಥ ಜನರಿಗೆ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಲು ಸಮೂಹ ಮಾಧ್ಯಮವಾದ ದೂರದರ್ಶನ, ರೇಡಿಯೋ, ಸಿನಿಮಾ ಮುಂತಾದವುಗಳನ್ನು ಅಳವಡಿಸಿಕೊಳ್ಳಬೇಕು. ಇಂದಿನ ಮಾರುಕಟ್ಟೆಯಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನ ಪಡೆದಿರುವ ಜಾಹೀರಾತನ್ನು ಈ ಕಾರ್ಯಕ್ಕೆ ಬಳಸಿಕೊಳ್ಳುವುದು ಸೂಕ್ತ ಹಾಗೂ ಸಮಂಜಸ.

7. ಪತ್ರ ವ್ಯವಹಾರ, ಸಾಲದ ಅರ್ಜಿಗಳು, ಕರಾರು ಪತ್ರಗಳು ಎಲ್ಲವೂ ಜನರ ಮಾತೃಭಾಷೆಯಲ್ಲಿದ್ದರೆ ಒಳ್ಳೆಯದು.

8. ಸಾಲ ವಸೂಲಿಗೆಂದೆ ಕೆಲವು ಅನುಭವಿಗಳನ್ನೊಳಗೊಂಡ ಸದಸ್ಯರಿಂದ ಕೂಡಿದ ವಿಶೇಷ ಸಮಿತಿಗಳನ್ನು ರಚಿಸುವುದು.

9. ಬ್ಯಾಂಕ್ ಅಧಿಕಾರಿಗಳಿಗೆ ಸಾಲ ವಸೂಲಿ ಮಾಡುವ ಪ್ರಯತ್ನದಲ್ಲಿ ತರಬೇತಿ ನೀಡುವುದು.

10. ಪ್ರಾಮಾಣಿಕವಾಗಿ ಸಾಲ ಹಿಂತಿರುಗಿಸುವ ಸಾಲಗಾರರನ್ನು ಗುರುತಿಸಿ ಗೌರವಿಸಬೇಕು ಮತ್ತು ಸಣ್ಣ ಸಮಾರಂಭ ಮಾಡಿ ಅವನನ್ನು ಸನ್ಮಾನಿಸಬೇಕು. ಹೀಗೆ ಮಾಡುವುದರಿಂದ ಇತರ ಸಾಲಗಾರರೂ ಸ್ಫೂರ್ತಿಯಿಂದ ಪ್ರಭಾವಿತರಾಗಿ ಸಾಲ ಹಿಂತಿರುಗಿಸುವ ಮನಸ್ಸು ಮಾಡುತ್ತಾರೆ.

11. 'ದಂಡಂ ದಶಗುಣಂ' ಎನ್ನುವ ಗಾದೆ ಮಾತಿಗನುಸಾರವಾಗಿ ಬೇಕೆಂದೇ ಸಾಲ ತೀರಿಸದೇ ಹೋಗುವ ಸಾಲಗಾರನನ್ನು ಕ್ರೂರವಾಗಿ ಶಿಕ್ಷಿಸಬೇಕು. ಇದರಿಂದ ಶಿಕ್ಷೆಗೆ ಹೆದರಿ ಸಾಲ ಸರಿಯಾದ ಕಾಲದಲ್ಲಿ ಹಿಂತಿರುಗಿಸುತ್ತಾರೆ.

12. ಸಾಲಗಾರನನ್ನು ಕೀಳುಮಟ್ಟದಲ್ಲಿ ಪರಿಗಣಿಸುವ ಪ್ರವೃತ್ತಿ

[ಪುಟ 23ರಲ್ಲಿ ಮುಂದುವರಿದಿದೆ

ಸಾಲ ವಸೂಲಿ ನ್ಯಾಯಾಧಿಕರಣಗಳು

ನ್ಯಾಯಮೂರ್ತಿ ನಿಸಾರ್ ಅಹಮದ್ ಸಂದರ್ಶನ

ಸಂದರ್ಶಕರು : ಕೆ. ಪರಶುರಾಮಪ್ಪ

ಅಗತ್ಯಕ್ಕೆ ತಕ್ಕಂತೆ ಸಂಪನ್ಮೂಲಗಳನ್ನು ಉಪಯುಕ್ತ ಕ್ಷೇತ್ರಗಳಲ್ಲಿ ಮರು ತೊಡಗಿಸಬಲ್ಲ ಶಕ್ತಿ ಯಾವುದೇ ಆರೋಗ್ಯವಂತ ಬ್ಯಾಂಕಿಂಗ್ ವ್ಯವಸ್ಥೆಯ ಲಕ್ಷಣಗಳಲ್ಲೊಂದು. ಆಸ್ತಿ ಮತ್ತು ಸಂಪನ್ಮೂಲಗಳ ವಿನಿಯೋಗ, ವರ್ಗೀಕರಣ ಮತ್ತು ವಸೂಲಾತಿಗಳು ಸಮರ್ಪಕವಾಗಿದ್ದರೆ ಮಾತ್ರ ಈ ಶಕ್ತಿ ಲಕ್ಷ್ಯವಾಗುತ್ತದೆ. ಸುಮಾರು 40,000 ಕೋಟಿ ರೂಪಾಯಿಗಳಷ್ಟು ನಿಷ್ಕ್ರಿಯ ಆಸ್ತಿಗಳ ಹೊರೆಯಿಂದ ನಲುಗಿ ಹೋಗುತ್ತಿರುವ ಭಾರತೀಯ ಬ್ಯಾಂಕಿಂಗ್ ವ್ಯವಸ್ಥೆ ಈ ನಿಟ್ಟಿನಲ್ಲಿ ಕ್ರಮಿಸಬೇಕಾದ ಹಾದಿ ಇನ್ನೂ ಬಹಳ ದೂರ.

ಭಾರತದಲ್ಲಿ ನಿಷ್ಕ್ರಿಯ ಆಸ್ತಿಗಳ ವಸೂಲಾತಿಗೆ ಸಂಬಂಧಿಸಿದ ಕಾನೂನು ಪ್ರಕ್ರಿಯೆ ಅತ್ಯಂತ ಸಂಕೀರ್ಣವಾದದ್ದೂ ನಿಧಾನಗತಿಯದೂ ಆಗಿತ್ತು. ಆದರೆ ಭಾರತೀಯ ಹಣಕಾಸು ಕ್ಷೇತ್ರದ ಸುಧಾರಣೆಯ ಬಗ್ಗೆ ಕೂಲಂಕಷವಾಗಿ ಅಧ್ಯಯನ ನಡೆಸಿದ ನರಸಿಂಹಂ ಸಮಿತಿ ತನ್ನ ವರದಿಯಲ್ಲಿ ಆದಾಯ ಮಾನ್ಯತೆ ಮತ್ತು ಆಸ್ತಿ ವರ್ಗೀಕರಣದ ಬಗೆಗಿನ ಹೊಸ ತತ್ವಗಳನ್ನು ಸೂಚಿಸಿದ್ದಲ್ಲದೇ, ನಿಷ್ಕ್ರಿಯ ಆಸ್ತಿಗಳ ನಿರ್ವಹಣೆಯ ಅಗತ್ಯವನ್ನೂ ಸಾರಿ ಹೇಳಿತು. ಈ ನಿಷ್ಕ್ರಿಯ ಆಸ್ತಿಗಳ ವಸೂಲಾತಿಗೆ ಸಂಬಂಧಿಸಿದ ಕಾನೂನು ಪ್ರಕ್ರಿಯೆಯಲ್ಲಾಗುವ ವಿಳಂಬವನ್ನು ನಿವಾರಿಸಲು ವಸೂಲಾತಿ ನ್ಯಾಯಾಧಿಕರಣಗಳ ನೇಮಕಾತಿಯನ್ನೂ ನರಸಿಂಹಂ ಸಮಿತಿ ಶಿಫಾಗಸು ಮಾಡಿತು.

ನರಸಿಂಹಂ ಸಮಿತಿಯ ಶಿಫಾರಸ್ಸಿಗನುಗುಣವಾಗಿ ಕೇಂದ್ರ ಸರಕಾರ 1993ರ ಜೂನ್ 24ರಂದು "ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಸಾಲ ವಸೂಲಾತಿ" ಯ ಬಗ್ಗೆ ಒಂದು ಸುಗ್ರೀವಾಜ್ಞೆ ಹೊರಡಿಸಿದ್ದಲ್ಲದೆ, ಅದೇ 1993ರ ಆಗಸ್ಟ 23ರಂದು ಆ ಸುಗ್ರೀವಾಜ್ಞೆಯನ್ನು ಅಧಿನಿಯಮ (ಆಕ್ಟ್) ವನ್ನಾಗಿ ಪರಿವರ್ತಿಸಿ ಸಾಲ ವಸೂಲಾತಿ ನ್ಯಾಯ ಮಂಡಳಿಗಳ ಆರಂಭಕ್ಕೆ ನಾಂದಿ ಹಾಡಿತು. ಈ ಅಧಿನಿಯಮದ ಪ್ರಕಾರ ನ್ಯಾಯಾಧಿಕರಣ ಎರಡು ಸ್ತರಗಳಿಂದ ಕೂಡಿದ್ದು, ಮೊದಲನೆಯ ಸ್ತರವನ್ನು ಸಾಲವಸೂಲಾತಿ ನ್ಯಾಯಾಧಿಕರಣ ಎಂದೂ ಎರಡನೆಯ ಸ್ತರವನ್ನು ಮೇಲ್ಮನವಿ ನ್ಯಾಯಾಧಿಕರಣ (Appellate Tribunal) ಎಂದೂ ಕರೆಯಲಾಗುತ್ತದೆ. ಈ ಅಧಿನಿಯಮ ಜಮ್ಮು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ರಾಷ್ಟ್ರಕ್ಕೆ ಅನ್ವಯವಾಗುತ್ತದೆ.

ಈಗಿರುವಂತೆ ಯಾವುದೇ ಬ್ಯಾಂಕು, ಹಣಕಾಸು ಸಂಸ್ಥೆಗೆ ಸಂದಾಯವಾಗಬೇಕಾದ ಸಾಲ ರೂ. 10 ಲಕ್ಷಕ್ಕಿಂತ ಹೆಚ್ಚಾಗಿದ್ದು ಈ ಸಾಲವು ಆ ಸಂಸ್ಥೆಗಳ ನೇರ ಹಣಕಾಸು ವಹಿವಾಟಿಗೆ ಸಂಬಂಧಪಟ್ಟಿದ್ದಾದರೆ, ಮೇಲ್ಕಂಡ ಕಾನೂನಿನನ್ವಯ ಸಾಲ ವಸೂಲಾತಿ ನ್ಯಾಯಾಧಿಕರಣದ ವ್ಯಾಪ್ತಿಗೆ ಬರುತ್ತದೆ. ಕೆಲವು ವಿಶೇಷ ಸಂದರ್ಭಗಳಲ್ಲಿ ರೂ. ಒಂದು ಲಕ್ಷಕ್ಕಿಂತ ಹೆಚ್ಚಿನ ಸಾಲವನ್ನೂ ಈ ಕಾನೂನಿನ ವ್ಯಾಪ್ತಿಯೊಳಕ್ಕೆ ತರಲು ಸರ್ಕಾರಕ್ಕೆ ಅಧಿಕಾರವಿದೆ.

ಈ ನ್ಯಾಯಾಧಿಕರಣಗಳು ಸಿ. ಪಿ. ಸಿ. (C.P.C)ಯ ಕಾರ್ಯವಾಪ್ತಿಯಿಂದ ಹೊರಗಿದ್ದು ಸಹಜ ನ್ಯಾಯ (Natural Justice) ತತ್ವದನ್ವಯ ಕಾರ್ಯ ನಿರ್ವಹಿಸುತ್ತವೆ. ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವಂತಾಗಲು ನ್ಯಾಯಾಧಿಕರಣಗಳಿಗೆ ಸಿವಿಲ್ ನ್ಯಾಯಾಲಯಗಳಿಗೆ ಕೊಡಲಾಗಿರುವ (1) ಮೊಕದ್ದಮೆಗೆ ಸಂಬಂಧಸಿದಂತೆ ವ್ಯಕ್ತಿ : ವ್ಯಕ್ತಿಗಳ ಕಡ್ಡಾಯ ಹಾಜರಾತಿ, (2) ಸಂಬಂಧಿಸಿದ ಕಾಗದ ಪತ್ರಗಳ ಮಂಡನೆ, (3) ಸಾಕ್ಷಿಗಳ ಹಾಜರಾತಿ ಇತ್ಯಾದಿಗಳನ್ನು ಆದೇಶಿಸುವ ಮತ್ತು (4) ತೀರ್ಪು ಏಕ ಪಕ್ಷೀಯ (ex-parte) ತೀರ್ಪು ಸೇರಿದಂತೆ ನೀಡುವ ಅಧಿಕಾರಗಳನ್ನು ಕೊಡಲಾಗಿದೆ.

ನ್ಯಾಯಾಧಿಕರಣಗಳ ರಚನೆ ಮತ್ತು ಕಾರ್ಯನಿರ್ವಹಣೆ :

ಆರಂಭಿಕ ಹಂತದಲ್ಲಿ ಒಟ್ಟು ಹತ್ತು ನ್ಯಾಯ ಮಂಡಳಿಗಳ ಸ್ಥಾಪನೆಯಾಗಬೇಕೆಂಬುದು ಸರ್ಕಾರದ ಆದೇಶವಾಗಿತ್ತು. ಅದರಂತೆ ಮುಂಬೈ, ದೆಹಲಿ, ಕಲ್ಕತ್ತ, ಚೈನ್ನೈ ಗುವಾಹಟಿ, ಭೂಪಾಲ್, ಬೆಂಗಳೂರು, ಜೈಪುರ, ಅಹ್ಮದಾಬಾದ್ ಮತ್ತು ಪಾಟ್ನಾ ನಗರಗಳು ನ್ಯಾಯಾಧಿಕರಣದ ಕಚೇರಿ ಸ್ಥಾಪನೆಗೆ ಶಿಫಾರಸು ಮಾಡಲಾದ ಸ್ಥಳಗಳು. ಪ್ರತಿಯೊಂದು ನ್ಯಾಯಾಧಿಕರಣಕ್ಕೂ ಒಬ್ಬ ಹೈಕೋರ್ಟ್ ನ್ಯಾಯಾಧೀಶರ ಸ್ಥಾನಮಾನಗಳಿರುವ ನ್ಯಾಯಾಧೀಶರ ನೇಮಕವಾಗಬೇಕು. ಈ ನ್ಯಾಯಾಧೀಶರನ್ನು ಅಧ್ಯಕ್ಷ ಅಧಿಕಾರಿ (presiding officer) ಎಂದು ಕರೆಯಲಾಗುತ್ತದೆ. ಅವರ ಕೈಕೆಳಗೆ ಒಬ್ಬ ವಸೂಲಾತಿ ಅಧಿಕಾರಿ, ಇಬ್ಬರು ವಸೂಲಾತಿ ಇನ್ಸ್‌ಪೆಕ್ಟರುಗಳು, ಮತ್ತಿತರ ಸಿಬ್ಬಂದಿಗಳ ನೇಮಕವಾಗುತ್ತದೆ. ಫಿರ್ಯಾದುದಾರ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆ(ಗಳು) ಒಂದು ಸರಳ ಅರ್ಜಿಯ ಮೂಲಕ ಮೊಕದ್ದಮೆಯನ್ನು ದಾಖಲಿಸಬಹುದಲ್ಲದೆ, ತನ್ನದೇ ಆದ ವಕೀಲ ಅಥವಾ ಹಿರಿಯ

ಅಧಿಕಾರಿಯನ್ನು ಮಂಡನಾಧಿಕಾರಿ ಎಂದು ನೇಮಿಸಬಹುದು. ಪ್ರತಿ ಫಿರ್ಯಾದುದಾರ ಸಂಸ್ಥೆ ಮೊಕದ್ದಮೆಯೊಂದಕ್ಕೆ ಕನಿಷ್ಟ ರೂ. 12,000 ಮತ್ತು ಹತ್ತು ಲಕ್ಷಕ್ಕೆ ಮೇಲ್ಪಟ್ಟು ಪ್ರತಿ ಲಕ್ಷ ರೂಪಾಯಿಗಳಿಗೆ ರೂ. 1000 ದಂತೆ ಮೌಲ್ಯಾನುಗುಣ ಶುಲ್ಕವನ್ನು (advalorem) ಕಟ್ಟ ಬೇಕಾಗುತ್ತದೆ. ಈ ಶುಲ್ಕದ ಗರಿಷ್ಠ ಮಿತಿ ರೂ. 1,50,000 ಮಾತ್ರ. ನ್ಯಾಯ ಮಂಡಳಿ ಮೊಕದ್ದಮೆಯೊಂದನ್ನು 6 ತಿಂಗಳೊಳಗೆ ಇತ್ಯರ್ಥ ಪಡಿಸಬೇಕು. ತೀರ್ಪು ಹಣಕಾಸು ಸಂಸ್ಥೆ ಬ್ಯಾಂಕ್‌ಗಳ ಪರವಾಗಿ ಬಂದಲ್ಲಿ ನ್ಯಾಯಾಧಿಕರಣದ ಅಧ್ಯಕ್ಷರಿಂದ ವಸೂಲಾತಿ ಅಧಿಕಾರಿಗೆ ವಸೂಲಾತಿ ಪ್ರಮಾಣ ಪತ್ರ (Recovery Certificate) ಕೊಡಲಾಗುತ್ತದೆ. ಆ ಪ್ರಮಾಣ ಪತ್ರದ ಆಧಾರದ ಮೇಲೆ ವಸೂಲಾತಿ ಅಧಿಕಾರಿ ಕಾರ್ಯಮಗ್ನರಾಗಲು ಅನುವಾಗುವಂತೆ ಅವರಿಗೆ ಕಾನೂನುಬದ್ಧ ಅಧಿಕಾರ ಕೊಡಲಾಗಿದೆ. ಯಾವುದೇ ಒಂದು ಸಾಲಕ್ಕೆ ಆಧಾರವಾಗಿ ಇಟ್ಟಿರುವ ಆಸ್ತಿಪಾಸ್ತಿಗಳ ವಶ ಹಾಗೂ ಮಾರಾಟ ಇತ್ಯಾದಿ ಕಾರ್ಯ ಚರಣೆಗಳಿಗೆ ಒಬ್ಬ ಆದಾಯ ತೆರಿಗೆ ಅಧಿಕಾರಿಗಿರುವ ಅಧಿಕಾರವನ್ನು ವಸೂಲಾತಿ ಅಧಿಕಾರಿಗಳಿಗೆ ಕೊಡಲಾಗಿದೆ.

ನ್ಯಾಯಾಧಿಕರಣದ ತೀರ್ಮಾನ ಅಂತಿಮವೇನಲ್ಲ. ಅತೃಪ್ತ ವ್ಯಕ್ತಿ—ಸಂಸ್ಥೆ ಈ ತೀರ್ಪಿನ ವಿರುದ್ಧ ಮೇಲ್ಮನವಿ ನ್ಯಾಯಾಧಿಕರಣಕ್ಕೆ ದೂರು ಕೊಡಬಹುದು. ಆದರೆ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಸಲ್ಲಿಸುವ ಅರ್ಜಿಯೊಂದಿಗೆ ಸಾಲಗಾರ ಸಾಲದ ಮೊತ್ತದ ಶೇ. 75ರಷ್ಟನ್ನು ಕಟ್ಟಲೇ ಬೇಕಾಗುತ್ತದೆ. ಈ ಬಗ್ಗೆ ಸೂಕ್ತ ವಿನಾಯ್ತಿ ತೋರುವ ಅಧಿಕಾರ ಮೇಲ್ಮನವಿ ನ್ಯಾಯಾಧಿಕರಣಕ್ಕೆ ಇದೆ. ಇಲ್ಲಿಯೂ ಮೊಕದ್ದಮೆ ಆರು ತಿಂಗಳೊಳಗೇ ಇತ್ಯರ್ಥವಾಗಬೇಕು.

ಕಾರ್ಯಾಚರಣೆಯಲ್ಲಿರುವ ತೊಂದರೆಗಳು :

ಸರ್ಕಾರ ಹತ್ತು ನಗರಗಳಲ್ಲಿ ನ್ಯಾಯಾಧಿಕರಣಗಳನ್ನು ಸ್ಥಾಪಿಸುವ ನಿರ್ಧಾರವನ್ನೇನೋ ತೆಗೆದುಕೊಂಡಿತು. ಆದರೆ 1993ರ ಅಧಿನಿಯ ಮದ ಸಿಂಧುತ್ವವನ್ನು ಪ್ರಶ್ನಿಸಿ ದೆಹಲಿ ಹೈಕೋರ್ಟಿನ ಬಾರ್ ಅಸೋಸಿ ಯೇಷನ್ ಸಲ್ಲಿಸಿದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಎತ್ತಿ ಹಿಡಿ ದದ್ದಲ್ಲದೆ ಈ ಅಧಿನಿಯಮ "ಅಸಂವೈಧಾನಿಕ, ಪಕ್ಷಪಾತ ತೋರು ವಂಥದ್ದು, ಅವೈಚಾರಿಕತೆಯಿಂದ ಕೂಡಿದ್ದು ಮತ್ತು ತನ್ಮೂಲಕ ನ್ಯಾಯಾಂಗದ ಸ್ವಾತಂತ್ರ್ಯಕ್ಕೆ ಧಕ್ಕೆ ತರುವಂಥದ್ದೆಂದು" ಅಭಿಪ್ರಾಯ ಪಟ್ಟು ಹೊಸ ಬಿಕ್ಕಟ್ಟನ್ನೇ ಸೃಷ್ಟಿಸಿತು. ತನ್ನ ಆಸ್ತಿಪಾಸ್ತಿಗಳ ರಕ್ಷಣೆಗೆ ವ್ಯಕ್ತಿಯೊಬ್ಬನಿಗೆ ಇರುವ ಹಕ್ಕು ನ್ಯಾಯಾಧಿಕರಣದ ವ್ಯಾಪ್ತಿಯಲ್ಲಿ ಚ್ಯುತಗೊಳ್ಳುತ್ತದೆ ಎಂದೂ ದೆಹಲಿ ಹೈಕೋರ್ಟ್ ಅಭಿಪ್ರಾಯ ಪಟ್ಟಿತು.

ಈ ತೀರ್ಮಾನದ ವಿರುದ್ಧ ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಮಾಡಿಕೊಂಡಿದ್ದು ಈ ಸಂಬಂಧದ ಎಲ್ಲ ಮೊಕದ್ದಮೆಗಳೂ ಈಗ ಸುಪ್ರೀಂ ಕೋರ್ಟಿಗೆ ವರ್ಗಾಯಿಸಲ್ಪಟ್ಟಿವೆ. ಅವುಗಳ ಇತ್ಯರ್ಥವಾಗುವವರೆಗೆ ನ್ಯಾಯಾಧಿಕರಣಗಳು ಎಂದಿನಂತೆ ತಮ್ಮ ಕೆಲಸ ಕಾರ್ಯಗಳನ್ನು ಮುಂದುವರಿಸಿಕೊಂಡು ಹೋಗಬಹುದೆಂದು ಸುಪ್ರೀಂ ಕೋರ್ಟು ಆದೇಶಿಸಿದೆ.

ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಾಷ್ಟ್ರಾದ್ಯಂತ ನ್ಯಾಯಾಧಿಕರಣಗಳು ತಮ್ಮ ಕೆಲಸ ಕಾರ್ಯಗಳನ್ನು ಮುಂದುವರೆಸಿವೆ. ಆದರೆ ಮೂಲ ಅಧಿನಿಯಮ ತುಂಬ ತರಾತುರಿಯಲ್ಲಿ ಹೊರಬಿದ್ದದ್ದರಿಂದ ಅನೇಕ ಕೊರತೆಗಳೂ ದೋಷಗಳೂ ಎದ್ದು ಕಾಣಲಾರಂಭಿಸಿವೆ. ಅವುಗಳಲ್ಲಿ ಗಮನಾರ್ಹವಾದ್ದದ್ದೆಂದರೆ ರೂ. ಹತ್ತು ಲಕ್ಷದ ಮೇಲ್ಪಟ್ಟ ಸಾಲಗಳ ವಸೂಲಾತಿ ಮಾತ್ರ ನ್ಯಾಯಾಧಿಕರಣದ ವ್ಯಾಪ್ತಿಗೆ ಬರತಕ್ಕದ್ದು 'ಎನ್ನುವುದು. ಬ್ಯಾಂಕಿಂಗ್ ಕ್ಷೇತ್ರದ ಶೇಕಡಾ ಎಪ್ಪತ್ತರಷ್ಟು ಸಾಲಗಳು ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆಯವಾದ್ದರಿಂದ ಅಧಿನಿಮಯದ ಉದ್ದೇಶವೇ (ಅತಿ ಹೆಚ್ಚು ವಸೂಲಾತಿ) ಸೋತಂತಾಗುತ್ತದೆ. ಹಾಗೆಯೇ ನ್ಯಾಯಾಧಿಕರಣದ ಮೊಕದ್ದಮೆ ಶುಲ್ಕಗಳು ದುಬಾರಿ ಎನ್ನುವ ಆಕ್ಷೇಪಣೆಯಿದೆ. ಇದ ರೊಂದಿಗೆ ಹಲವಾರು ಕಾನೂನು ಸಂಬಂಧಿ ಲೋಪದೋಷಗಳೂ ನ್ಯಾಯಾಧಿಕರಣದ ಅಧಿನಿಯಮದಲ್ಲಿ ತೂರಿಕೊಂಡಿದ್ದು ಅವುಗಳ ನಿವಾರಣೆಯಾಗಬೇಕಿದೆ.

ಈ ಹಿನ್ನೆಲೆಯಲ್ಲಿ ಕಾರ್ಯನಿರತ ಅನುಭವಿ ನ್ಯಾಯಾಧಿಕರಣದ ನ್ಯಾಯಾಧೀಶರ ಸಂದರ್ಶನ ಉಪಯುಕ್ತ ಮಾಹಿತಿಯನ್ನು ಒದಗಿಸ ಬಹುದು ಎನಿಸಿದ್ದರಿಂದ ಬೆಂಗಳೂರಿನ ನ್ಯಾಯಾಧಿಕರಣ ಕಚೇರಿಯ ನ್ಯಾಯಮೂರ್ತಿ ಶ್ರೀ ನಿಸಾರ್ ಅಹಮದ್ ಅವರೊಡನೆ 'ಬ್ಯಾಂಕಿಂಗ್ ಪ್ರಪಂಚ' ಹಲವಾರು ಸಂದರ್ಶನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅವುಗಳ ಪೈಕಿ ಈ ಸಂದರ್ಶನ ಮೊತ್ತ ಮೊದಲನೆಯದು.

ಸಂದರ್ಶನ :

ಐವತ್ತೇಳು-ಐವತ್ತೆಂಟು ವರ್ಷಗಳ ಹಿರಿಯ ಶ್ರೀ ಎಸ್. ನಿಸಾರ್ ಅಹಮದ್ ಅನುಭವಿ ನ್ಯಾಯಾಧೀಶರು. ಅವರ ಮಾತುಗಳು ತುಂಬ ನೇರ ಮತ್ತು ವಿಷಯಪ್ರಧಾನ. ಸಂದರ್ಶನಕ್ಕೆ ಮೊದಲೇ ಅವರಿಗೆ ಕೊಟ್ಟಿದ್ದ ಪ್ರಶ್ನಾವಳಿಯಲ್ಲಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಅವರಲ್ಲಿ ಸಿದ್ಧವಾಗಿತ್ತು. ಗುಲ್ಬರ್ಗದ ಕಡೆಯವರಾದ ಶ್ರೀ ನಿಸಾರ್ ಅಹಮದ್ ರವರಿಗೆ ಕನ್ನಡ 'ಓದಿ ಬರೆದು ಮತ್ತು ಮಾತನಾಡಿ ಅನುಭವವಿದೆ'.

* * *

ಬ್ಯಾಂಕಿಂಗ್ ಪ್ರಪಂಚ :

ನ್ಯಾಯಾಧಿಕರಣಗಳ ಆರಂಭಕ್ಕೆ ನಾಂದಿ ಹಾಡಿ 1993ರ ಅಧಿನಿಯಮ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೆ ಮಾತ್ರವೇ ಅನ್ವಯವಾಗುವಂತಿದ್ದು, ಸಹಕಾರಿ ಬ್ಯಾಂಕುಗಳು ಮತ್ತು ರಾಜ್ಯ ಹಣ ಕಾಸು ಕಾರ್ಪೊರೇಷನ್‌ಗಳು ಅವುಗಳ ಕಾರ್ಯವ್ಯಾಪ್ತಿಯೊಳಕ್ಕೆ ಬರುವುದಿಲ್ಲ ಎನ್ನಲಾಗುತ್ತದೆ. ಇದೊಂದು ದೊಡ್ಡ ಕೊರತೆ ಅನ್ನಿಸುವುದಿಲ್ಲವೇ?

ನ್ಯಾಯಮೂರ್ತಿ ನಿಸಾರ್ ಅಹಮದ್ :

ಅವುಗಳನ್ನು ಸಾಲ ವಸೂಲಾತಿ ಟ್ರಿಬ್ಯೂನಲ್‌ಗಳ ಕಾರ್ಯವ್ಯಾಪ್ತಿಯಲ್ಲಿ ಸೇರಿಸಬೇಕಾದ ವಿಶೇಷ ಆವಶ್ಯಕತೆಯಿದೆಯೆಂದು ನನಗನಿಸುವುದಿಲ್ಲ. ಅವುಗಳಿಗೆ ಸ್ವತಂತ್ರವಾದ ಆಡಳಿತ ಯಂತ್ರ, ತಮ್ಮದೇ ಆದ ಕಾರ್ಯಸಂಹಿತೆ ಮತ್ತು ಕಾನೂನುಬದ್ಧ ಅಧಿಕಾರಗಳಿವೆ.

ಬ್ಯಾಂಕಿಂಗ್ ಪ್ರಪಂಚ :

ನ್ಯಾಯಾಧಿಕರಣಗಳಿಗೆ ಕೊಡಲಾಗಿರುವ ಅಧಿಕಾರ, ಅಧೋರಚನೆ ಮತ್ತು ಸಿಬ್ಬಂದಿ ವರ್ಗ ಅಗತ್ಯಕನುಗುಣವಾಗಿದೆಯೇ ? ಇಲ್ಲವಾದರೆ ಯಾವ ರೀತಿಯ ಹೆಚ್ಚಿನ ಸಹಾಯ ನಿರೀಕ್ಷಿಸುತ್ತೀರಿ ?

ನ್ಯಾಯಮೂರ್ತಿ ನಿಸಾರ್ ಅಹಮದ್ :

'ಏನೇನೂ ಸಾಲದು. ಬೆಂಗಳೂರಿನ ಟ್ರಿಬ್ಯೂನಲ್ ಕಾರ್ಯ ನಿರ್ವಹಿಸಲು ಆರಂಭಿಸಿ ನಾಲ್ಕು ವರ್ಷಗಳಾದವು. ತೀರ ಇತ್ತೀಚಿನವರೆಗೂ ಕೇವಲ ಒಬ್ಬರೇ ವಸೂಲಾತಿ ಅಧಿಕಾರಿಯಿದ್ದರು. ನಮ್ಮಲ್ಲಿ ದಾಖಲಾದ ಒಟ್ಟು 5,117 ಮೊಕದ್ದಮೆಗಳಲ್ಲಿ ಸುಮಾರು 1,820 ಮೊಕದ್ದಮೆಗಳು ಇತ್ಯರ್ಥವಾಗಿವೆ. ಈ 1,820 ಮೊಕದ್ದಮೆಗಳಿಗೂ ಒಬ್ಬರೇ ವಸೂಲಾತಿ ಅಧಿಕಾರಿ. ಇತ್ತೀಚೆಗೆ ಇಬ್ಬರು ವಸೂಲಾತಿ ಇನ್ಸ್‌ಪೆಕ್ಟರ್‌ಗಳು ಬಂದಿದ್ದಾರೆ. ಅದರಿಂದ ಸ್ವಲ್ಪ ಅನುಕೂಲವಾದೀತು. 3,000 ಮೊಕದ್ದಮೆಗಳಿಗೆ ಒಬ್ಬರೇ ಗುಮಾಸ್ತ. ವಾಹನ ಮತ್ತಿತರ ಸೌಕರ್ಯಗಳ ಕೊರತೆಯಿದೆ. ಇದಕ್ಕೆಲ್ಲಾ ಮೂಲ ಕಾರಣ ಟ್ರಿಬ್ಯೂನಲ್‌ಗಳ ಆರಂಭದ ಶಿಫಾರಸಿಗೆ ಒದಗಿಸಿದ ಅಂಕಿ ಅಂಶಗಳು 1989-90ರಷ್ಟು ಹಿಂದಿನವಾದದ್ದಿರಬಹುದು. ಅಲ್ಲಿಂದ ನಂತರದ ನಾಲ್ಕು ವರ್ಷಗಳಲ್ಲಿ ಬ್ಯಾಂಕ್‌ಗಳ ಸಾಲ ನೀಡಿಕೆ ಅಗಾಧ ಪ್ರಮಾಣದಲ್ಲಿ ಬೆಳೆದಿದೆ. ಅದಕ್ಕೆ ತಕ್ಕಂತೆ ಅಧೋರಚನೆ ಬೇಕು.

ಬ್ಯಾಂಕಿಂಗ್ ಪ್ರಪಂಚ :

ಕರ್ನಾಟಕ ಮತ್ತು ಆಂಧ್ರಪ್ರದೇಶ ರಾಜ್ಯಗಳೆರಡಕ್ಕೂ ಪ್ರತ್ಯೇಕ ನ್ಯಾಯಾಧಿಕರಣದ ಕಚೇರಿ ಸ್ಥಾಪನೆಯಾಗಬೇಕಿತ್ತು. ಈ ಸಲಹೆಯನ್ನು ಒಪ್ಪುತ್ತೀರಾ ?

ನ್ಯಾಯಮೂರ್ತಿ :

ಖಂಡಿತಾ ಒಪ್ಪುತ್ತೇನೆ. ನಮ್ಮ ಟ್ರಿಬ್ಯೂನಲ್‌ನಲ್ಲಿ ಆಂಧ್ರಕ್ಕೇ ಸಂಬಂಧಿಸಿದ 2,000ಕ್ಕೂ ಹೆಚ್ಚು ಮೊಕದ್ದಮೆಗಳು ದಾಖಲಾಗಿವೆ. ಆಂಧ್ರ ಒಂದು ವಿಶಾಲವಾದ ರಾಜ್ಯ. ಮೊಕದ್ದಮೆಗಳ ವಿಲೇವಾರಿಗೆ ಹೈದರಾಬಾದಿನಲ್ಲಿ ಕೆಲವೊಮ್ಮೆ ತಂಗು ನ್ಯಾಯಾಲಯ (Camp Court) ಸ್ಥಾಪಿಸಿ ಕಾರ್ಯನಿರ್ವಹಿಸಬೇಕಾಗುತ್ತದೆ. ಇವೆಲ್ಲ ತುಂಬ ಸಮಯ ತೆಗೆದುಕೊಳ್ಳುತ್ತದೆ. ನನ್ನ ಅಭಿಪ್ರಾಯದಲ್ಲಿ ಪ್ರತಿಯೊಂದು ರಾಜ್ಯಕ್ಕೂ ಒಂದೊಂದು ಟ್ರಿಬ್ಯೂನಲ್ ಸ್ಥಾಪಿಸಬೇಕಾದ ಅಗತ್ಯವಿದೆ.

ಬ್ಯಾಂಕಿಂಗ್ ಪ್ರಪಂಚ :

ಕರ್ನಾಟಕ ಮತ್ತು ಆಂಧ್ರರಾಜ್ಯಗಳ ಬ್ಯಾಂಕು ಮತ್ತು ಹಣಕಾಸು ಸಂಸ್ಥೆಗಳು ನ್ಯಾಯಾಧಿಕರಣದ ಉಪಸ್ಥಿತಿಯ ಪೂರ್ಣಲಾಭ ಪಡೆದುಕೊಳ್ಳುತ್ತಿವೆಯೇ ? ಇಲ್ಲದಿದ್ದರೆ ಕಾರಣಗಳೇನಿರಬಹುದು?

ನ್ಯಾಯಮೂರ್ತಿ :

ಖಂಡಿತಾ ಉಪಯೋಗಿಸಿಕೊಳ್ಳುತ್ತಿದ್ದಾರೆ. ಇದಕ್ಕೆ ನಮ್ಮಲ್ಲಿ 5,117ರಷ್ಟು ಹೆಚ್ಚಿನ ಸಂಖ್ಯೆಯ ಮೊಕದ್ದಮೆಗಳು ದಾಖಲಾಗಿರುವುದೇ ಸಾಕ್ಷಿ. ಇಷ್ಟಾಗಿಯೂ ಯಾರಾದರೂ ಟ್ರಿಬ್ಯೂನಲ್‌ನ ಉಪಯೋಗ ಮಾಡಿಕೊಳ್ಳುತ್ತಿಲ್ಲವೆಂದರೆ ಬಹುಶಃ ಅವರಿಗೆ ಟ್ರಿಬ್ಯೂನಲ್‌ನ ಸಂಬಂಧದ ತಿಳಿವಳಿಕೆಯಿಲ್ಲದಿರುವುದೇ ಕಾರಣವೆನ್ನಬಹುದು.

ಬ್ಯಾಂಕಿಂಗ್ ಪ್ರಪಂಚ :

ಮಾರ್ಗದರ್ಶಿ ಬ್ಯಾಂಕ್‌ನ ಉಪಸ್ಥಿತಿ, ನ್ಯಾಯಾಧಿಕರಣದ ಕಾರ್ಯ ನಿರ್ವಹಣೆಯಲ್ಲಿ ಹೇಗೆ ಉಪಯುಕ್ತ?

ನ್ಯಾಯಮೂರ್ತಿ :

ಯಾವ ಪ್ರಯೋಜನವೂ ಇಲ್ಲ. ಅದಕ್ಕೆ ಮಾರ್ಗದರ್ಶಿ ಬ್ಯಾಂಕಿನ ಪ್ರಧಾನ ಕಚೇರಿ ಬೇರೆಲ್ಲೋ ಇದ್ದು ಬೆಂಗಳೂರಿನಲ್ಲಿ ಅದರ ಪ್ರಾದೇಶಿಕ ಕಚೇರಿ ಮಾತ್ರ ಇರುವುದೂ ಕಾರಣವಿರಬಹುದು. ನನಗೂ ಅವರ ಸಹಾಯದ ಬಗ್ಗೆ ಆಸಕ್ತಿಯಿಲ್ಲ. ಏಕೆಂದರೆ ಮೊದಲನೆಯದಾಗಿ ಆ ಸಹಾಯ ನನ್ನ ಕಾರ್ಯಕ್ಷಮತೆಗೆ ಒಂದು 'ಬಣ್ಣ' ಕೊಡಬಹುದು. ಅದು ನನಗೆ ಇಷ್ಟವಿಲ್ಲ. ಎರಡನೆಯದಾಗಿ ಬ್ಯಾಂಕ್ ಉದ್ಯೋಗಿಗಳು ಸಾಮಾನ್ಯವಾಗಿ ಯಾವುದಾದರೊಂದು ಕಾರ್ಮಿಕ ಸಂಘದ ಸದಸ್ಯರಾಗಿರುತ್ತಾರೆ. 'ಸಹಾಯ'ದ ಜತೆಗೆ ಸಂಘಗಳ ರಾಜಕಾರಣದ ಪ್ರವೇಶವಾಗುವುದು ನನಗಿಷ್ಟವಿಲ್ಲ. ಕಾರ್ಮಿಕ ಸಂಘಗಳ ಅಸ್ತಿತ್ವಕ್ಕೆ ನನ್ನ ವಿರೋಧವಿಲ್ಲ. ಆದರೆ ಇದೊಂದು ನ್ಯಾಯ ಮಂಡಳಿ. ನನ್ನ ಕೆಲಸ ನಿರ್ವಹಣೆಯಲ್ಲಿ ಅನಪೇಕ್ಷಿತ 'ಹಸ್ತಕ್ಷೇಪ' ನಡೆಯುವುದು ನನಗಿಷ್ಟವಿಲ್ಲ.

ಬ್ಯಾಂಕಿಂಗ್ ಪ್ರಪಂಚ :

ನ್ಯಾಯಾಧಿಕರಣದ ಕಾನೂನು ಪ್ರಕ್ರಿಯೆಯನ್ನು ಇನ್ನೂ ಸರಳೀಕರಿಸಲು ಸಾಧ್ಯವೇ?

ನ್ಯಾಯಮೂರ್ತಿ :

ಇಲ್ಲ. ಈಗಿರುವ ಕಾರ್ಯ ವಿಧಾನ ಸರಳವಾದದ್ದೂ, ಸೂಕ್ತವಾದದ್ದೂ ಆಗಿದೆ. ಇದಕ್ಕಿಂತ ಸರಳೀಕರಣ ಸಾಧ್ಯವಿಲ್ಲ.

ಬ್ಯಾಂಕಿಂಗ್ ಪ್ರಪಂಚ :

ನ್ಯಾಯಾಧಿಕರಣದ ಕಾರ್ಯಾಚರಣೆಯಲ್ಲಿ ಏನಾದರೂ ಅಡ್ಡಿ ಆತಂಕಗಳು ಕಂಡು ಬಂದಿವೆಯೆ?

ನ್ಯಾಯಮೂರ್ತಿ :

ಇಲ್ಲ.

ಬ್ಯಾಂಕಿಂಗ್ ಪ್ರಪಂಚ :

1993ರ ಅಧಿನಿಯಮವನ್ನು ದೆಹಲಿ ಹೈಕೋರ್ಟ್ "ಅಸಂವೈಧಾನಿಕ, ನ್ಯಾಯಾಂಗದ ಸ್ವಾತಂತ್ರ್ಯವನ್ನು ಮೊಟಕುಗೊಳಿಸುವಂಥದ್ದು, ಪಕ್ಷಪಾತಕ್ಕೆ ಅನುವು ಮಾಡಿಕೊಡುವಂಥದ್ದು ಆದ್ದರಿಂದ ಅಸಿಂಧು ಮತ್ತು ಅಸಾಮಯಿಕ" ಎಂಬಿತ್ಯಾದಿ ಕಾರಣಗಳನ್ನು ಕೊಟ್ಟು ಅಮಾನ್ಯ ಮಾಡಿದೆ. ಈ ತೀರ್ಪಿನ ಬಗ್ಗೆ ತಮ್ಮ ಅಭಿಪ್ರಾಯ ಏನು ? ಸರ್ಕಾರ ಸುಪ್ರೀಂ ಕೋರ್ಟಿಗೆ ಅಪೀಲು ಹೋಗಿದ್ದು ಅದೀಗ ವಿಚಾರಣೆಯಲ್ಲಿದೆ. ಈ ಅನಿಶ್ಚಿತತೆಯಿಂದ ನ್ಯಾಯಾಧಿಕರಣಗಳ ಕಾರ್ಯ ನಿರ್ವಹಣೆಯ ಮೇಲೆ ಏನಾದರೂ ಪರಿಣಾಮವಾಗಬಹುದೆ ?

ನ್ಯಾಯಮೂರ್ತಿ :

ಈ ಮೊಕದ್ದಮೆ ಸುಪ್ರೀಂ ಕೋರ್ಟಿನಲ್ಲಿರುವುದರಿಂದ, ನಾನು ಈ ಬಗ್ಗೆ ಏನನ್ನು ಹೇಳಲೂ ಇಚ್ಛಿಸುವುದಿಲ್ಲ.

ಬ್ಯಾಂಕಿಂಗ್ ಪ್ರಪಂಚ :

ಬ್ಯಾಂಕುಗಳಿಂದ ನೀವು ಯಾವ ರೀತಿಯ ಸಹಾಯ ನಿರೀಕ್ಷಿಸುತ್ತೀರಿ ?

ನ್ಯಾಯಮೂರ್ತಿ :

ನನಗೆ ಯಾವುದೇ ಸಹಾಯದ ಆವಶ್ಯಕತೆಯಿಲ್ಲ. ಆದರೆ ಪ್ರತಿಯೊಂದು ಬ್ಯಾಂಕೂ ತನ್ನದೇ ಕಾನೂನು ಅಧಿಕಾರಿಗಳು ಅಥವಾ ಇತರ ಅಧಿಕಾರಿಗಳ ಮೂಲಕ ಮೊಕದ್ದಮೆಯನ್ನು ನಿಭಾಯಿಸಬೇಕು, ಹೊರಗಿನ ಅಡ್ವೋಕೇಟ್‌ಗಳ ಮೇಲೆ ಅವಲಂಬಿತವಾಗಿರಬಾರದು ಎನ್ನುವುದು ನನ್ನ ಅಪೇಕ್ಷೆ. ಅದು ಟ್ರಿಬ್ಯೂನಲ್‌ಗಳ ಸ್ಥಾಪನೆಯ ಮೂಲ ಉದ್ದೇಶಗಳಲ್ಲೊಂದು ಕೂಡಾ.

ಬ್ಯಾಂಕಿಂಗ್ ಪ್ರಪಂಚ :

ವಸೂಲಾತಿ ನ್ಯಾಯಾಧಿಕರಣ ಮತ್ತು ಮೇಲ್ಮನವಿ ನ್ಯಾಯಾಧಿಕರಣಗಳೆರಡರ ತೀರ್ಪುಗಳೂ ಸಾಲಗಾರನೊಬ್ಬನಿಗೆ ಒಪ್ಪಿತವಾಗದಿದ್ದರೆ ಅವನು ಯಾವ ವೇದಿಕೆಯಲ್ಲಿ ವಿರುದ್ಧ ಮನವಿ ಸಲ್ಲಿಸಬಹುದು?

ನ್ಯಾಯಮೂರ್ತಿ :

ವಸೂಲಾತಿ ಟ್ರಿಬ್ಯೂನಲ್ ಮತ್ತು ಅಪೆಲ್ಲೇಟ್ ಟ್ರಿಬ್ಯೂನಲ್‌ಗಳ ತೀರ್ಪಿನಿಂದ ತೃಪ್ತರಾಗದ ವಾದಿ, ಪ್ರತಿವಾದಿಗಳು ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಬಹುದು. ಟ್ರಿಬ್ಯುನಲ್‌ಗಳು ಹೈಕೋರ್ಟಿನ ಅಧೀನ ನ್ಯಾಯಾಲಯಗಳು.

ಬ್ಯಾಂಕಿಂಗ್ ಪ್ರಪಂಚ :

ಮೊಕದ್ದಮೆಯೊಂದರ ಹೂಡಿಕೆ ಮತ್ತು ಇತ್ಯರ್ಥಗಳ ನಡುವಿನ ಸಮಯದಲ್ಲಿ ಸಾಲಗಾರನೊಬ್ಬನು ಆಸ್ತಿಗಳನ್ನು ಮಾರಿಬಿಡುವ, ಪರಭಾರೆ ಮಾಡುವ ಸಾಧ್ಯತೆಯಿದೆ. ಅದಕ್ಕಾಗಿ ಮುಟ್ಟುಗೋಲು ಆದೇಶ (Attachment order) ಅಥವಾ ಅಸ್ತಿ ಇರುವ ಸ್ಥಳಕ್ಕೆ ಬೀಗಮುದ್ರೆ ಹಾಕುವ ಆದೇಶ ಕೊಡಲು ಸಾಧ್ಯವಿದೆಯಲ್ಲವೇ ?

ನ್ಯಾಯಮೂರ್ತಿ :

ಖಂಡಿತಾ ಸಾಧ್ಯವಿದೆ. ಟ್ರಿಬ್ಯೂನಲ್ ಆಸ್ತಿ ಪರಭಾರೆ ಮಾಡದಂತೆ ನಿರ್ಬಂಧಕಾಜ್ಞೆ (ಇಂಜಂಕ್ಷನ್) ನೀಡಬಹುದು. ಒಮ್ಮೆ ವಸೂಲಾತಿ ದೃಢಪತ್ರ ಮತ್ತು ತಗಾದೆ ನೋಟೀಸ್ ಹೊರಟ ನಂತರ ಸಾಲಗಾರನಿಗೆ ಆಸ್ತಿ ಪರಭಾರೆ ಮಾಡುವ ಹಕ್ಕು ಇರುವುದಿಲ್ಲ..

ಬ್ಯಾಂಕಿಂಗ್ ಪ್ರಪಂಚ :

ತೋರಾಧಾರಿತ ಆಸ್ತಿಗಳನ್ನು ವಶಪಡಿಸಿಕೊಂಡು ಮಾರಾಟ ಮಾಡುವ ಹಕ್ಕು ಬ್ಯಾಂಕುಗಳಿಗೆ ಇದೆಯಾದರೂ ಈ ಹಕ್ಕನ್ನು ಕಾರ್ಯರೂಪಕ್ಕೆ ತರುವುದು ಕಷ್ಟದ ಕೆಲಸ. ಕೆಲವೊಮ್ಮೆ ಮೂರನೇ ವ್ಯಕ್ತಿಯೊಬ್ಬ ಆ ತೋರಾಧಾರಿತ ಆಸ್ತಿಗಳ ಮೇಲೆ ಮುಟ್ಟುಗೋಲು ಆದೇಶ ತರಬಹುದು. ಈ ಸನ್ನಿವೇಶಗಳಲ್ಲಿ ನ್ಯಾಯಾಧಿಕರಣ ಬ್ಯಾಂಕುಗಳಿಗೆ ಹೇಗೆ ಸಹಾಯ ಮಾಡಬಲ್ಲದು ?

ನ್ಯಾಯಮೂರ್ತಿ :

ತೋರಾಧಾರಿತ ಆಸ್ತಿಗೆ ಬ್ಯಾಂಕರ್‌ಗಳು ಅವಿವಾದಿತ ಮಾಲೀಕರು ಅದನ್ನು ವಶಪಡಿಸಿಕೊಂಡು ಸೂಕ್ತ ವಿಲೇವಾರಿ ಮಾಡುವ ಅಧಿಕಾರ ಅವರಿಗೆ ಖಂಡಿತಾ ಇದೆ. ಅವರು ಆ ಅಧಿಕಾರವನ್ನು ಉಪಯೋಗಿಸಕೊಳ್ಳಬೇಕು. ಅಷ್ಟೆ.

ಬ್ಯಾಂಕಿಂಗ್ ಪ್ರಪಂಚ :

ಕೆಲವೊಮ್ಮೆ ಪ್ರತಿವಾದಿಗಳು ಕೋರ್ಟಿನ ತಗಾದೆ ನೋಟೀಸುಗಳನ್ನು ಸ್ವೀಕರಿಸುವುದೇ ಇಲ್ಲ. ಅಂತಹ ಸಂದರ್ಭಗಳಲ್ಲಿ ಆ ಪ್ರತಿವಾದಿಯ ಅನುಪಸ್ಥಿತಿಯನ್ನು ಸಾಬೀತು ಮಾಡಲು ಪಂಚನಾಮೆಯ ಆವಶ್ಯಕತೆ ಯಾಕೆ ಬೇಕು ? ತಗಾದೆ ನೋಟೀಸು ತಿರಸ್ಕೃತವಾದರೆ ಅಥವಾ ಪ್ರಾಪ್ತಕರ್ತನ ಅನುಪಸ್ಥಿತಿಯ ಕಾರಣಕ್ಕೆ ವಾಪಸು ಬಂದರೆ ತಕ್ಷಣವೇ ನ್ಯಾಯಾಧಿಕರಣ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡು ಸೂಕ್ತ ವಿಲೇವಾರಿ ಮಾಡಲು ಸಾಧ್ಯವಿಲ್ಲವೇ ?

ನ್ಯಾಯಮೂರ್ತಿ :

ಇಲ್ಲಿ ಪಂಚನಾಮೆಯೆಂದರೆ ಪೋಲೀಸ್ ಪಂಚನಾಮೆಯಂತೆ ಸುದೀರ್ಘವಾದ ವರದಿಯನ್ನು ನಾವು ನಿರೀಕ್ಷಿಸುತ್ತಿಲ್ಲ. ಆ ವ್ಯಕ್ತಿ

ನೋಟೀಸನ್ನು ತಿರಸ್ಕರಿಸಿದ ಬಗ್ಗೆ ಅಥವಾ ಊರಲ್ಲಿಲ್ಲದಿರುವ ಬಗ್ಗೆ ಸಾಕ್ಷ್ಯಾಧಾರಗಳ ಸರಳ ವರದಿ ನಮಗೆ ಬೇಕು. ಸತ್ಯಾಸತ್ಯತೆಯ ಪರೀಕ್ಷೆಗೆ ಇದರ ಆವಶ್ಯಕತೆಯಿದೆ.

ಬ್ಯಾಂಕಿಂಗ್ ಪ್ರಪಂಚ :

ಕಂಪನಿ ಕಾನೂನು ಪ್ರಕಾರ ಕಾರ್ಪೊರೇಟ್ ಸಾಲಗಾರ ಸಂಸ್ಥೆಗಳ ಅಢಾವೆ ಪಟ್ಟಿ (ಬ್ಯಾಲೆನ್ಸ್‌ಷೀಟ್) ತಯಾರಾಗಿದ್ದು ಅದೊಂದು ಅಧಿಕೃತ ದಾಖಲೆ. ಸಂಸ್ಥೆಯೊಂದು ಸಾಲದ ಕಾಲಂನಲ್ಲಿ ನಮೂದಿಸಿದ ರಕಂ ಆ ಸಂಸ್ಥೆಯ ಸಾಲ ಪಡೆದಿದೆ ಎನ್ನುವುದರ ಪ್ರಮುಖ ಸಾಕ್ಷಿ. ಹೀಗಿದ್ದೂ ಬೇರೆ ಸಾಕ್ಷ್ಯಗಳನ್ನು ಕೇಳುವುದೇಕೆ ?

ನ್ಯಾಯಮೂರ್ತಿ :

ಅಢಾವೆ ಪಟ್ಟಿಯಲ್ಲಿ (ಬ್ಯಾಲೆನ್ಸ್‌ಷೀಟ್‌ನಲ್ಲಿ) ಸಾಲದ ಕಾಲಂನಲ್ಲಿ ಬ್ಯಾಂಕ್ ಸಾಲ ನಮೂದಿತವಾಗಿದ್ದರೆ ಅಷ್ಟು ಸಾಕು. ಆದರೆ ಕೆಲವೊಮ್ಮೆ ಆ ಬ್ಯಾಲೆನ್ಸ್‌ಷೀಟ್ ಅಧಿಕೃತವಾಗಿರುವುದಿಲ್ಲ. ಅಥವಾ ಕಂಪನಿಯ ಅಧಿಕೃತ ಸದಸ್ಯರ ಸಹಿ ಇರುವುದಿಲ್ಲ. ಇಂಥ ಕಡೆ ನಾವು ಬೇರೆ ಸಾಕ್ಷ್ಯಗಳನ್ನು ಕೇಳಬೇಕಾಗಿ ಬರಬಹುದು.

ಬ್ಯಾಂಕಿಂಗ್ ಪ್ರಪಂಚ :

ನ್ಯಾಯಾಧಿಕರಣದ ಉಪಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಲ್ಲಿ ಬ್ಯಾಂಕರುಗಳಿಗೆ ನೀವು ನೀಡುವ ಸಲಹೆಗಳೇನು ?

ನ್ಯಾಯಮೂರ್ತಿ :

ಮೊತ್ತ ಮೊದಲ ಸಲಹೆಯೆಂದರೆ ಬ್ಯಾಂಕುಗಳು ತಮ್ಮ ಅಧಿಕಾರಿಗಳಿಗೆ ಕಾನೂನು ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಸೂಕ್ತ ತರಬೇತಿ ನೀಡಬೇಕು. ನಾನೂ ಈ ಬಗ್ಗೆ ಅವರಿಗೆ ಸಾಕಷ್ಟು ಮಾರ್ಗದರ್ಶನ ನೀಡುತ್ತಿದ್ದೇನೆ. ಮೊಕದ್ದಮೆಯನ್ನು ದಾಖಲಿಸುವ ಕ್ರಮವನ್ನು ಅವರಿಗೆ ಹೇಳಿಕೊಡಲು ಈ ನಾಲ್ಕು ವರ್ಷಗಳಲ್ಲಿ ಪ್ರಯತ್ನಿಸಿದ್ದೇನೆ. ಅರ್ಧದಷ್ಟನ್ನಾದರೂ ಕಲಿತಿದ್ದಾರೆ ಎಂದುಕೊಂಡಿದ್ದೇನೆ.

ಬ್ಯಾಂಕಗಳ ದಾಖಲೆ ಪತ್ರಗಳು ಬಹಳ ಉದ್ದವಾಗಿರುತ್ತದೆ. ನನ್ನ ಪ್ರಕಾರ ಯಾವುದೇ ದಾಖಲೆ ಪತ್ರ ಸಂಕ್ಷಿಪ್ತ ಹಾಗೂ ಸುಲಭಗ್ರಾಹ್ಯವಾಗಿರಬೇಕು. ದಾಖಲೆ ಪತ್ರಗಳು ಉದ್ದವಾಗಿದ್ದಷ್ಟೂ ಸಮಸ್ಯೆಗಳು ಜಾಸ್ತಿಯಾಗುತ್ತ ಹೋಗುತ್ತವೆ. ನನಗನ್ನಿಸಿದಂತೆ ಯಾವುದೇ ಸಾಲಕ್ಕೆ ಒಂದು ಪ್ರೋನೋಟು ಮತ್ತು ಎರಡು ಪುಟದ ಒಪ್ಪಂದ ಇಷ್ಟಿದ್ದರೆ ಸಾಕು. ಅದ್ದರಿಂದ ನನ್ನ ಎರಡನೆಯ ಸಲಹೆಯೆಂದರೆ ಬ್ಯಾಂಕರುಗಳು ತಮ್ಮ ದಾಖಲೆ ಪತ್ರಗಳ ಗಾತ್ರವನ್ನು ಕಡಿಮೆ ಮಾಡುವುದು. ಮೂರನೆಯ ಸಲಹೆ ಬ್ಯಾಂಕ್ ದಾಖಲೆಗಳ ಭಾಷೆಗೆ ಸಂಬಂಧಿಸಿದ್ದು. ಅದು ಸರಳವಾಗಿದ್ದಷ್ಟೂ ಅನುಕೂಲ. ಸಂಕೀರ್ಣ ಭಾಷೆ ಅನಗತ್ಯವಾದ ವಿವಾದಗಳಿಗೆ ಎಡೆ ಮಾಡಿಕೊಡಬಲ್ಲದು.

ಕೆಲವು ಅಂಕಿ ಅಂಶಗಳು

1. ನ್ಯಾಯಾಧಿಕರಣದ ಬೆಂಗಳೂರು ಕಚೇರಿ ಸ್ಥಾಪನೆಯ ದಿನಾಂಕ	: 30.11.94
2. ದಾಖಲಾದ ಒಟ್ಟು ಮೊಕದ್ದಮೆಗಳು	: 5,117
3. ಇತ್ಯರ್ಥವಾದ ಮೊಕದ್ದಮೆಗಳು	: 1,820
4. ಮೊಕದ್ದಮೆ ಇತ್ಯರ್ಥವಾಗಲು ತೆಗೆದುಕೊಳ್ಳುವ ಸರಾಸರಿ ಸಮಯ	: ಸಮನ್ಸ್ ಜಾರಿಯಾದ ನಂತರ ಕನಿಷ್ಠ 2 ತಿಂಗಳು
5. ಬಾಕಿ ಉಳಿದ ಮೊಕದ್ದಮೆಗಳ ಸಾಲದ ಮೊತ್ತ	: ರೂ. 5,318. 14 ಕೋಟಿ
6. ಇದುವರೆಗೆ ಇತ್ಯರ್ಥವಾಗದ ಮೊಕದ್ದಮೆಗಳ ಸಾಲದ ಮೊತ್ತ	: ರೂ. 837.18 ಕೋಟಿ
7. ವಸೂಲಾದ ಮೊತ್ತ	: ರೂ. 221.26 ಕೋಟಿ

ಸಹಕಾರಿ ಸಂಸ್ಥೆಗಳಲ್ಲಿ ನಿರ್ವಹಣೆಯ ಸಮಸ್ಯೆಗಳು

ಕೆ. ಸುಬ್ರಹ್ಮಣ್ಯ

ಸ್ಪರ್ಧಾತ್ಮಕವಾದ ಪರಿಸರದಲ್ಲಿ ಸಹಕಾರಿ ಸಂಸ್ಥೆಗಳು ಸಮರ್ಥ ಹಾಗೂ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸದಿರುವುದಕ್ಕೆ ಅವುಗಳ ಆಡಳಿತದಲ್ಲಿನ ನಿರ್ವಹಣೆಯ ಸಮಸ್ಯೆಗಳು ಮುಖ್ಯ ಕಾರಣ. ಅವನ್ನು ಮುಂದೆ ಚರ್ಚಿಸಲಾಗಿದೆ.

ವೈಜ್ಞಾನಿಕ ಆಡಳಿತ ಮತ್ತು ಸಹಕಾರಿ ಸಂಸ್ಥೆಗಳು

ವೈಜ್ಞಾನಿಕ ನಿರ್ವಹಣೆ ವಿಧಾನ ಮತ್ತು ಸಹಕಾರಿ ಚಳವಳಿ ಒಟ್ಟಿಗೆ ಹುಟ್ಟಿ ಬೆಳೆದಿದ್ದರೂ ಅವುಗಳೆರಡೂ ಪರಸ್ಪರ ಸಂಧಿಸಲಿಲ್ಲ ಎನ್ನುವುದು ಆಸಕ್ತಿ ಹುಟ್ಟಿಸುವ ವಿಷಯ. ಈ ಎರಡೂ ಪರಿಕಲ್ಪನೆಗಳು ಪಾಶ್ಚಾತ್ಯ ರಾಷ್ಟ್ರ ಗಳಲ್ಲಾದ ಕೈಗಾರಿಕಾ ಕ್ರಾಂತಿಯ ನೇರ ಪರಿಣಾಮಗಳಾಗಿವೆ. ವಿಕಾಸ ಶೀಲ ದೇಶಗಳ ಸಹಕಾರಿ ಸಂಸ್ಥೆಗಳ ನಿರ್ವಹಣೆಯಲ್ಲಿ ಆಧುನಿಕ ಆಡಳಿತ ಚಿಂತನೆಗಳನ್ನು ಮತ್ತು ತಂತ್ರಗಳನ್ನು ಅಳವಡಿಸಿಕೊಳ್ಳಲಾಗಿಲ್ಲ. ಸಹಕಾರಿ ಸಂಸ್ಥೆಗಳ ಈ ವಿಮುಖತೆಗೆ ಹಲವಾರು ಕಾರಣಗಳಿವೆ.

ಮೊದಲನೆಯದಾಗಿ ಈ ಆಧುನಿಕ ಆಡಳಿತ ವಿಧಾನ ಪಾಶ್ಚಾತ್ಯ ರಾಷ್ಟ್ರಗಳ ಬಂಡವಾಳಶಾಹಿ ಅರ್ಥ ವ್ಯವಸ್ಥೆಯನ್ನು ಬಲಪಡಿಸುವುದಕ್ಕಾಗಿ ರೂಪುಗೊಂಡಿದ್ದು, ಇಂಥ ಅರ್ಥವ್ಯವಸ್ಥೆಯ ವಿರುದ್ಧ ಬಂಡಾಯೋಪಾದಿಯಲ್ಲಿ ಉದ್ಭವಿಸಿದ ಸಹಕಾರ ವ್ಯವಸ್ಥೆಗೆ ಇಂಥ ವಿಧಾನ ಸೂಕ್ತವಲ್ಲವೆಂಬ ಸಹಕಾರಿ ನೇತಾರ ಸೈದ್ಧಾಂತಿಕ ನಂಬಿಕೆಯೇ ಅಥವಾ ತಾತ್ವಿಕ ಭಿನ್ನಾಭಿಪ್ರಾಯವೇ, ಸಹಕಾರಿಗಳು ಆಧುನಿಕ ನಿರ್ವಹಣೆ ಚಿಂತನೆಯನ್ನು ತಿರಸ್ಕರಿಸಲು ಕಾರಣವಾಯಿತು. ಎರಡನೆಯದಾಗಿ ಅತ್ಯಂತ ಚಿಕ್ಕದಾದ, ಸರಳವಾದ ಮತ್ತು ಸೀಮಿತ ವ್ಯಾಪ್ತಿಯಲ್ಲಿ ಕಾರ್ಯಾಚರಿಸುವ ಸಹಕಾರಿ ಸಂಸ್ಥೆಗಳಿಗೆ ಆಧುನಿಕ ನಿರ್ವಹಣೆ ತತ್ತ್ವಗಳ ಆವಶ್ಯಕತೆ ಇಲ್ಲವೆಂಬುದೂ, ಬೃಹತ್ ಕೈಗಾರಿಕಾ ಸಂಸ್ಥೆಗಳಿಗಾಗಿಯೇ ಈ ನಿರ್ವಹಣೆ ಆಧುನಿಕ ತತ್ತ್ವಗಳು ನಿರೂಪಿಸಲ್ಪಟ್ಟಿವೆ ಎಂಬುದೂ ಅವರ ಭಾವನೆಯಾಗಿತ್ತು. **ಮೂರನೆಯದಾಗಿ,** ಸಹಕಾರಿ ತತ್ತ್ವಗಳಿಗೆ ಸಹಕಾರಿಗಳ ಅತಿಯಾದ ಶರಣಾಗತಿಯೂ ಇದಕ್ಕೆ ಕಾರಣ. ಲಾಭಗಳಿಸುವ ಸಂಸ್ಥೆಗಳಾಗಿರುವ ಸಹಕಾರಿ ಸಂಸ್ಥೆಗಳಲ್ಲಿ ಸಮರ್ಥ್ಯ, ಉತ್ಪಾದಕತೆ ಮತ್ತು ಲಾಭದಾಯಕತೆಯಂತಹ ಅಂಶಗಳಿಗೆ ಅವಕಾಶವೇ ಇಲ್ಲವೆನ್ನುವಷ್ಟರ ಮಟ್ಟಿಗಿನ ಅಪಾಯಕಾರಿ ತಪ್ಪು ಅಭಿಪ್ರಾಯ ಅವರದಾಗಿತ್ತು. **ನಾಲ್ಕನೆಯದಾಗಿ** ಅಭಿವೃದ್ಧಿಶೀಲ ದೇಶಗಳಲ್ಲಿ ಸಹಕಾರಿ ಸಂಸ್ಥೆಗಳು ಸಹಕಾರಿ ಇಲಾಖೆಯ ಅಧಿಕಾರಿಗಳ ಕೃಪಾಕಟಾಕ್ಷಕ್ಕೊಳಪಟ್ಟೇ ಕಾರ್ಯಾಚರಿಸಬೇಕಾದ ಐತಿಹಾಸಿಕ ಕಾರಣದಿಂದ ಸಹಕಾರಿ ಸಂಸ್ಥೆಗಳಲ್ಲಿ ವ್ಯಾಪಾರೀ ಮನೋಭಾವದ ಬದಲಾಗಿ ಅಧಿಕಾರಶಾಹಿ ಸಂಸ್ಕೃತಿ ನೆಲೆಯೂರಿತು. ಸಹಕಾರಿ ಸಂಸ್ಥೆಯೊಂದು ಪ್ರಗತಿಗಿಂತಲೂ ತನ್ನ ನೀತಿ ನಿಯಮಗಳಿಗೇ ಪ್ರಾಧಾನ್ಯ ಕೊಡಬೇಕಾದ ಆಡಳಿತಶಾಹಿಯ ಕೈಗೂಸಾಯಿತು. ಈ ಎಲ್ಲಾ ಅಂಶಗಳು ಆಧುನಿಕ ಆಡಳಿತ ಕೌಶಲಗಳನ್ನು, ನಾವೀನ್ಯತೆಗಳನ್ನು ಹಾಗೂ ತಂತ್ರಜ್ಞಾನವನ್ನು ಸಹಕಾರಿಗಳು ಮಡಿವಂತಿಕೆಯಿಂದ ನೋಡುವಂಥ ಸ್ಥಿತಿಗೆ ಕಾರಣವಾಗಿದೆ.

ಭಾರತ ಸರಕಾರದ ಹೊಸ ಆರ್ಥಿಕ ನೀತಿಯಿಂದಾಗಿ ದೇಶದ ಸಹಕಾರಿ ಸಂಸ್ಥೆಗಳ ನಿರ್ವಹಣೆಯಲ್ಲಿ ಗುಣಾತ್ಮಕ ಸುಧಾರಣೆಯು ಅತ್ಯಾವಶ್ಯಕವಾಗಿದೆ. ಸ್ಪರ್ಧಾತ್ಮಕ ಪರಿಸರದಲ್ಲಿ ತಮ್ಮ ಪ್ರತಿಸ್ಪರ್ಧಿಗಳೊಂದಿಗೆ ಸಮರ್ಪಕವಾಗಿ ಪ್ರತಿಸ್ಪರ್ಧಿಸಬೇಕಾದರೆ ಸಹಕಾರಿ ಸಂಸ್ಥೆಗಳಲ್ಲಿ ರಚನಾ ಹೊಂದಾಣಿಕೆ, ಸಂಘಟನಾತ್ಮಕ ಸುಧಾರಣೆ ಮತ್ತು ವೃತ್ತಿಪರ ನಿರ್ವಹಣೆ ಉಂಟಾಗಲೇಬೇಕೆಂಬುದು ಸಹಕಾರದ ಬಗ್ಗೆ ಗಂಭೀರವಾದ ಚಿಂತನೆ ನಡೆಸುವ ಯೋಜನಾ ತಜ್ಞರಿಗೆ ಮನವರಿಕೆಯಾಗಿದೆ. ಇತ್ತೀಚಿನ ಅನೇಕ ಸಮಿತಿಗಳು ಮತ್ತು ಅಧ್ಯಯನ ತಂಡಗಳು, ಸಹಕಾರಿ ಸಂಸ್ಥೆಗಳ ಉತ್ತಮ ಫಲಿತಾಂಶಕ್ಕೆ ಅವುಗಳಲ್ಲಿ ವೃತ್ತಿಪರ ನಿರ್ವಹಣೆ ವ್ಯವಸ್ಥೆ ಬರಲೇಬೇಕಾಗಿರುವುದನ್ನು ಒಮ್ಮತದಿಂದ ಶಿಫಾರಸ್ಸು ಮಾಡಿವೆ.

ಸಹಕಾರಿ ಸಂಸ್ಥೆಗಳ ನಿರ್ವಹಣೆ ಸಮಸ್ಯೆಗಳು

ವಿವಿಧ ರೀತಿಯ ಸಹಕಾರಿ ಸಂಸ್ಥೆಗಳಿರುವಂತೆಯೇ ವಿವಿಧ ಶೈಲಿಗಳ ಸಹಕಾರಿ ನಿರ್ವಹಣೆಯ ನೋಡಬಹುದಾಗಿದೆ. ಕೆಲವು ಸಹಕಾರಿ ಸಂಸ್ಥೆಗಳಲ್ಲಿ ಅತಿಯಾದ ನಿರ್ವಹಣೆಯಿದ್ದರೆ ಕೆಲವು ಸಹಕಾರಿ ಸಂಸ್ಥೆಗಳಲ್ಲಿ ಅಪೂರ್ಣವಾದ ನಿರ್ವಹಣೆಯಿದೆ. ಮೂರನೆಯದಾಗಿ ಕೆಲವು ಸಹಕಾರಿ ಸಂಸ್ಥೆಗಳು ದುರಾಡಳಿತಕ್ಕೊಳಪಟ್ಟಿರುವುದನ್ನೂ ನೋಡಬಹುದು. ಸಹಕಾರಿ ಸಂಸ್ಥೆಗಳು ಸರಿಯಾಗಿ ನಿರ್ವಹಿಸಲ್ಪಡದಿರುವುದೇ ಈ ಎಲ್ಲದರ ಒಂದೇ ಪರಿಣಾಮವಾಗಿದೆ. ಸಹಕಾರಿ ಸಂಸ್ಥೆಗಳ ವಿಶಿಷ್ಟವಾದ ಸಂಘಟನಾ ಅಂಶಗಳಿಂದಲೇ ಅವುಗಳ ಹೆಚ್ಚಿನ ಆಡಳಿತ ಸಮಸ್ಯೆಗಳು ಉದ್ಭವಿಸುತ್ತವೆ. ಮುಕ್ತ ಸದಸ್ಯತ್ವ, ಪ್ರಜಾಸತ್ತಾತ್ಮಕವಾದ ನಿಯಂತ್ರಣ, ಅಪ್ರಧಾನವಾದ ಬಂಡವಾಳ ಮತ್ತು ಒಬ್ಬ ಸದಸ್ಯನಿಗೆ ಒಂದೇ ಮತದಾನದ ಹಕ್ಕು ; ಈ ಹಕ್ಕುಗಳೇ ಸಹಕಾರಿ ಆಡಳಿತವನ್ನು ಸಂಕೀರ್ಣಗೊಳಿಸಿದೆ. ಸಹಕಾರಿ ಸಂಸ್ಥೆಗಳ ನಿರ್ವಹಣೆ ಒಂದು ಕಂಪನಿಯ ನಿರ್ವಹಣೆಯಷ್ಟು ಸುಲಭವಾಗಿರದೆ ಈ ಕೆಳಗಿನ ಅಂಶಗಳೇ ಸಹಕಾರಿ ಸಂಸ್ಥೆಗಳ ಸಮಸ್ಯೆಗಳಿಗೆ ಕಾರಣವಾಗಿದೆ.

ಅನೇಕವಾಗಿರುವ ಉದ್ದೇಶಗಳು 'ಸಂಸ್ಥೆಯೊಳಗೆ ವ್ಯಾಪಿಸಿರುವ

ಅಧಿಕಾರ ಮತ್ತು ನಿಯಂತ್ರಣ, ಆಡಳಿತ ಮಂಡಲಿ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಸಂಬಂಧ, ಸರ್ಕಾರದ ಪಾಲುಗಾರಿಕೆ —ಈ ಅಂಶಗಳು ಸಹಕಾರಿ ಸಂಸ್ಥೆಗಳಲ್ಲಿ ಹೇಗೆ ಗಂಭೀರವಾದ ಸಮಸ್ಯೆಗಳಿಗೆ ಕಾರಣವಾಗಿದೆ ಎಂಬುದನ್ನು ನೋಡೋಣ.

ಅನೇಕ ಉದ್ದೇಶಗಳನ್ನುಹೊಂದಿರುವುದೇ ಈ ದೇಶದ ಸಹಕಾರಿಗಳ ಮುಖ್ಯವಾದ ಜಾಯಮಾನ. ನಮ್ಮ ಸಹಕಾರಿ ಸಂಸ್ಥೆಗಳು ಅವುಗಳ ಉದ್ದೇಶಗಳ ದೃಷ್ಟಿಯಲ್ಲಿ ತಾತ್ವಿಕವಾಗಿ ನಾಲ್ಕು ರೀತಿಯಲ್ಲಿ ಭಿನ್ನವಾಗಿವೆ. ಮೊದಲನೆಯದಾಗಿ ಸಹಕಾರವನ್ನು ಉತ್ತಮವಾದ ಸಾಮಾಜಿಕ ಹಾಗೂ ಆರ್ಥಿಕ ಶಿಸ್ತನ್ನು ತರುವ ಸೈದ್ಧಾಂತಿಕ ವ್ಯವಸ್ಥೆಯನ್ನಾಗಿ ಪರಿಗಣಿಸಲಾಗಿದೆ. ಬಂಡವಾಳಶಾಹಿ ಅರ್ಥ ವ್ಯವಸ್ಥೆಯಿಂದಟಾದ ಆರ್ಥಿಕ ಹಾಗೂ ಸಾಮಾಜಿಕ ಅನಿಷ್ಟಗಳನ್ನು ಸರಿಪಡಿಸಲೆಂದು ನಿರೂಪಿಸಲ್ಪಟ್ಟ ಸರಕಾರದ ಉದ್ದೇಶವು ಮುಕ್ತ ಸಮಾಜ, ವರ್ಗ ರಹಿತ ಸಮಾಜ ಮತ್ತು ಆದರ್ಶಪ್ರಾಯವಾದ ಸಮಾಜವೊಂದರ ನಿರ್ಮಾಣವೇ ಆಗಿದೆ. ಉತ್ತಮ ಸಮಾಜದ ನಿರ್ಮಾಣವೇ ಇದರ ಉದ್ದೇಶವೇ ವಿನಾ ಬದಲಾಗಿ ಹೆಚ್ಚು ಸಮರ್ಥ ಹಾಗೂ ಉತ್ಪನ್ನಕಾರಕವಾದ ಸಮಾಜದ ನಿರ್ಮಾಣವಲ್ಲ. ಎರಡನೆಯದಾಗಿ ಸಹಕಾರವನ್ನು ಸಮುದಾಯ ಅಭಿವೃದ್ಧಿಯ ಒಂದು ತಂತ್ರವನ್ನಾಗಿ ಪರಿಗಣಿಸಲಾಗಿದೆ. ಈ ದೃಷ್ಟಿಕೋನದಲ್ಲಿ ಸಹಕಾರಿಗಳನ್ನು ನೋಡಿದ ಪಂಡಿತ ಜವಹಾರ ಲಾಲ್ ನೆಹರೂ ಅವರು ಸಮುದಾಯ ಅಭಿವೃದ್ಧಿ ಸಾಧಿಸುವಲ್ಲಿ ಸಹಕಾರ ಸಮರ್ಥವಾದ ತಂತ್ರವಾಗಿದೆ ಎಂದು ಪರಿಭಾವಿಸಿದರು. ಎಲ್ಲಾ ಸಮುದಾಯ ಅಭಿವೃದ್ಧಿ ಮಾದರಿಗಳಂತೆ ಈ ಪರಿಕಲ್ಪನೆಯಲ್ಲಿಯೂ ಉತ್ತಮವಾದ ಚಾರಿತ್ರ್ಯದ ನಿರ್ಮಾಣವೇ ಮೂಲ ವಿಷಯವಾಗಿದೆ. ಬ್ರಿಟಿಷರು ಸಹಕಾರವನ್ನು ಸಮುದಾಯ ಅಭಿವೃದ್ಧಿ ಸಾಧನೆಗಳನ್ನಾಗಿಯೇ ಈ ದೇಶಕ್ಕೆ ಪರಿಚಯಿಸಿದರು. ಕೃಷಿಯ ಉತ್ಪಾದಕತೆಯನ್ನು ಹೆಚ್ಚಿಸುವುದಕ್ಕಿಂತಲೂ ರೈತರ ಖಾಸಗಿ ಋಣಭಾರದ ಅನಿಷ್ಟಗಳ ನಿವಾರಣೆಯೇ ಕೃಷಿ ಸಹಕಾರಿ ಸಂಸ್ಥೆಗಳ ಗುರಿಯಾಯಿತು. ಮೂರನೆಯದಾಗಿ ಸಹಕಾರಿ ಸಂಸ್ಥೆಗಳ ಕೆಲಸಗಳೆಂದರೆ ಬಂಡವಾಳದ ಸ್ವೀಕರಣೆ, ಸಂಗ್ರಹಣೆ ಮತ್ತು ವಿತರಣೆಯಾಗಿರುವುದರಿಂದ ಅವುಗಳನ್ನು ಅಪ್ಪಟ ವ್ಯಾಪಾರಿ ಸಂಸ್ಥೆಗಳಾಗಿಯೇ ಪರಿಗಣಿಸಲಾಗಿದೆ. ಬಂಡವಾಳದ ಸಂಗ್ರಹಣೆ, ವಿತರಣೆ ಹಾಗೂ ಆಡಳಿತದ ವಿಧಾನದಲ್ಲಿ ಸಹಕಾರಿ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಗಳಂತೆಯೇ ಇವೆ. ಉತ್ಪಾದನೆ, ಸಂಸ್ಕರಣೆ, ಮಾರುಕಟ್ಟೆ ಹಾಗೂ ಮಾರಾಟದ ಚಟುವಟಿಕೆಗಳಲ್ಲಿ ತೊಡಗಿದ ಸಹಕಾರಿ ಸಂಸ್ಥೆಗಳು ಮೂಲತಃ ಲಾಭಗಳಿಕೆಯ ಉದ್ಯಮಗಳಂತೆಯೇ ಇವೆ. ನಾಲ್ಕನೆಯದಾಗಿ ಸಹಕಾರವನ್ನು ಆರ್ಥಿಕ ನೀತಿಯ ಸಾಧನವನ್ನಾಗಿ ಪರಿಗಣಿಸಲಾಗಿದೆ. ರಾಜ್ಯ ಮತ್ತು ಕೇಂದ್ರ ಸರಕಾರಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೊಳಿಸುವ ಸಾಧನಗಳಾನ್ನಾಗಿಯೇ ಸಹಕಾರಿ ಸಂಸ್ಥೆಗಳನ್ನು ಪರಿಗಣಿಸಲಾಗಿದೆ. ಹಾಗಾಗಿ, ಸರಕಾರಗಳು ತಮ್ಮ ಆರ್ಥಿಕ ನೀತಿ ಮತ್ತು ಆರ್ಥಿಕ ಯೋಜನೆಗಳ ಅನುಷ್ಠಾನಕ್ಕಾಗಿಯೇ ಸಹಕಾರಿ ಸಂಸ್ಥೆಗಳನ್ನು ಬೆಳೆಸಿವೆ.

ಈ ಪರಿಸ್ಥಿತಿಯಲ್ಲಿ ಭಾರತೀಯ ಸಹಕಾರಿ ವ್ಯವಸ್ಥೆ ಒಂದು ರೀತಿಯ ಗೊಂದಲದಲ್ಲಿ ಸಿಲುಕಿ ತನ್ನ ಅಂತರ್ಗತವಾದ ವಿರೋಧಾಭಾಸಗಳಿಂದಲೇ ಬಳಲುತ್ತಿದೆ. ಅದು ತನ್ನ ಸ್ಥಾನ ಮತ್ತು ಪಾತ್ರದ ಶೋಧನೆಯಲ್ಲಿ ತೊಡಗಿದೆ. ತನ್ನ ಸ್ಥಾನದ ಸಂದಿಗ್ಧತೆಗೆ, ಸಿಲುಕಿದೆ. ಈ ಮೇಲಿನ ಉದ್ದೇಶಗಳಲ್ಲಿ ವಿರೋಧಾಭಾಸಗಳಿವೆ. ಒಂದು ಉದ್ದೇಶದ ಸಾಧನೆಯೇ ಇನ್ನೊಂದು ಉದ್ದೇಶದ ಸಾಧನೆಗೆ ಅಡ್ಡಿಯಾಗುವುದರಿಂದಲೇ ನಿರ್ವಹಣೆ ಸಮಸ್ಯೆ ತಲೆದೋರುತ್ತದೆ. ಸಹಕಾರಿ ಸಾಲ ವಿತರಣೆಗಾಗಿಯೇ ಸಹಕಾರಿ ಸಂಸ್ಥೆಗಳನ್ನು ಹುರಿದುಂಬಿಸಿ ನಂತರ ಅವು ಸಮುದಾಯ ಅಭಿವೃದ್ಧಿ ಲಕ್ಷಣಗಳನ್ನೇ ಹೊಂದಿಲ್ಲ ಎಂದು ಅಪಾದಿಸುವುದು ವಿಹಿತವಾದುದಲ್ಲ. ತಕ್ಕಷ್ಟು ಸಂಖ್ಯೆಯ ಸದಸ್ಯರುಗಳನ್ನು ಒಳಗೊಳ್ಳದ ಸಮುದಾಯ ಅಭಿವೃದ್ಧಿ ಸಹಕಾರಿ ಸಂಸ್ಥೆಗಳಿಗೆ ಹೆಚ್ಚು ಅರ್ಥವಿಲ್ಲ. ಆದರೆ ಬೃಹತ್ ಸಂಖ್ಯೆಯ ಸದಸ್ಯರುಗಳನ್ನು ಮತ್ತು ವಿಸ್ತಾರವಾದ ಕಾರ್ಯಕ್ಷೇತ್ರವನ್ನು ಹೊಂದಿರುವ ಸಹಕಾರಿ ಸಂಘಗಳಿಗೆ ಈ ಮಾನದಂಡ ಅಸಂಗತವಾಗುತ್ತದೆ. ಈ ಸನ್ನಿವೇಶದಲ್ಲಿ ಭಾರತದ ಸಹಕಾರಿ ವ್ಯವಸ್ಥೆಯು ಸ್ಪಷ್ಟ ಮತ್ತು ನಿರ್ದಿಷ್ಟವಾದ ತಾತ್ತ್ವಿಕ ಹಿನ್ನೆಲೆ ಗೊತ್ತುಗುರಿ ಇಲ್ಲದೇ ಪರಿತಪಿಸುತ್ತಿದೆ. ಹಾಗಾಗಿ, ಸಹಕಾರಿ ಸಂಸ್ಥೆಗಳ ಸ್ಥಾನವೇನೆಂಬುದೇ ಸಹಕಾರಿ ನಿರ್ವಹಣೆಯ ಮೊದಲ ಸಮಸ್ಯೆಯಾಗಿದೆ.

ವ್ಯಾಪಕವಾಗಿ ಪಸರಿಸಿದ ಅಧಿಕಾರ ಮತ್ತು ಸಂಸ್ಥೆಯ ಆಂತರಿಕ ನಿಯಂತ್ರಣವು ಸಹಕಾರಿ ಆಡಳಿತದ ನಿರ್ವಹಣೆಯ ಇನ್ನೊಂದು ವಿಲಕ್ಷಣವಾದ ಸಮಸ್ಯೆ. ಮಹಾಸಭೆ, ಆಡಳಿತ ಮಂಡಲಿ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಸಹಕಾರ ಸಂಸ್ಥೆಯ ಮುಖ್ಯವಾದ ಅಂಗಗಳಾಗಿದ್ದು, ಈ ಅಂಗಗಳಲ್ಲಿ ಅಧಿಕಾರ ಮತ್ತು ಜವಾಬ್ದಾರಿಯ ಪರಸ್ಪರ ಸಮರ್ಪಕ ವಿಂಗಡನೆಯೇ ಸಹಕಾರಿ ನಿರ್ವಹಣೆಯ ನಿಜವಾದ ಸಮಸ್ಯೆ.

ಬಹಳಷ್ಟು ಸದಸ್ಯರುಗಳು ತಮ್ಮ ಸಹಕಾರ ಆಡಳಿತದಲ್ಲಿ ಭಾಗವಹಿಸಲು ಆಸಕ್ತಿ ವಹಿಸದಿರುವ ಪ್ರವೃತ್ತಿಯೇ ಹೆಚ್ಚುತ್ತಿರುವುದರಿಂದ ಮಹಾಸಭೆ ಮತ್ತು ಆಡಳಿತ ಮಂಡಲಿಯ ನಡುವೆ ಅಧಿಕಾರ ಮತ್ತು ನಿಯಂತ್ರಣವನ್ನು ನಿರ್ದಿಷ್ಟ ಪಡಿಸುವುದು ಒಂದು ಗಂಭೀರವಾದ ಸಮಸ್ಯೆಯೇ ಅಲ್ಲ. ಹೀಗೆ ಮೂಲಭೂತ ಸಹಕಾರಿ ತತ್ತ್ವಕ್ಕೆ ವಿರುದ್ಧವಾಗಿ ಬಹಳಷ್ಟು ಸದಸ್ಯರುಗಳು ಸುಸ್ತಿ ಸಾಲಗಾರರಾಗಿ ಪರಿಣಮಿಸುತ್ತಿದ್ದಾರೆ. ಸದಸ್ಯರು ಸಕ್ರಿಯವಾಗಿ ಭಾಗವಹಿಸುವುದೇ ಸಹಕಾರದ ನಿಜವಾದ ಸಿದ್ಧಾಂತವಾಗಿದ್ದು ; ಈ ಸಿದ್ಧಾಂತ ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟಿರುವುದರಿಂದಲೇ ಸ್ಥಾಪಿತ ಹಿತಾಸಕ್ತಿಗಳು ತಲೆದೋರುವಂತಹ ಸ್ಥಿತಿಯುಂಟಾಗಿದೆ. ಸದಸ್ಯರುಗಳು ಸಂಘದ ಮಹಾಸಭೆಗಳಲ್ಲಿ ಭಾಗವಹಿಸದೇ ನಿರ್ದೇಶಕರುಗಳು ಉತ್ತಮವಾಗಿ ಕಾರ್ಯ ನಿರ್ವಹಿಸುವ ಒತ್ತಾಯವನ್ನು ತೆರೆದಿರುವುದರಿಂದ ಕೆಲವೇ ವ್ಯಕ್ತಿಗಳು ಆಡಳಿತದಲ್ಲಿ

ಹಲವಾರು ದಶಕಗಳವರೆಗೂ ಶಾಶ್ವತವಾಗಿ ಅಧಿಪತ್ಯ ನಡೆಸುತ್ತಾರೆ. ತಾತ್ವಿಕವಾಗಿ ಸಹಕಾರ ಸಂಸ್ಥೆಯೊಂದರ ಆಡಳಿತ ಮಂಡಲಿಯು ಸದಸ್ಯರುಗಳಿಂದಲೇ ಚುನಾಯಿಸಲ್ಪಟ್ಟಿರುತ್ತದೆ. ಆದರೆ, ವಾಸ್ತವವಾಗಿ ಆಡಳಿತ ಮಂಡಲಿಯು ಸ್ಥಿರವಾಗಿ ಸ್ವಯಂ ನೆಲೆಯೂರಿರುತ್ತದೆ. ಸಹಕಾರ ಸಂಸ್ಥೆಯೊಂದನ್ನು ಜೀವಂತವಾಗಿ ಚಾಲನೆಯಲ್ಲಿಡಲು ಆವಶ್ಯಕವಾದ ಸಾಮರ್ಥ್ಯ ಸೃಜನಶೀಲತೆ ಮತ್ತು ದೂರದರ್ಶಿತ್ವವನ್ನು ಹೀಗೆ ಸ್ವಯಂ ನೆಲೆಯೂರಿರುವ ಆಡಳಿತ ಮಂಡಲಿಯು ಕ್ರಮೇಣ ಕಳೆದುಕೊಳ್ಳುತ್ತದೆ. ಹೀಗೆ ನಿಧಾನವಾಗಿ ಮುಪ್ಪೇರುವ ಆಡಳಿತ ಮಂಡಲಿಯು ಪರಿಣಾಮಕಾರಿಯಾಗಿ ಹಾಗೂ ಸಮರ್ಥವಾಗಿ ಕಾರ್ಯಾಚರಿಸುವುದು ಮಂಡಲಿಯ ಅಧ್ಯಕ್ಷರ ಸಾಮರ್ಥ್ಯವನ್ನು ಹೊಂದಿಕೊಂಡಿರುತ್ತದೆ. ಹಾಗಾಗಿ, ಸ್ಥಾಪಿತ ಹಿತಾಸಕ್ತಿಗಳು ಮತ್ತು ಮುಪ್ಪೇರುವ ಕಾರ್ಯ ನಿರ್ವಾಹಕ ಮಂಡಲಿಯೇ, ಸಹಕಾರದ ಎರಡನೆಯ ನಿರ್ವಹಣೆ ಸಮಸ್ಯೆಯಾಗಿವೆ.

ಕಾರ್ಯ ನಿರ್ವಾಹಕ ಮಂಡಲಿ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಸಂಬಂಧವು ಇನ್ನೊಂದು ಗಂಭೀರವಾದ ಸಮಸ್ಯೆಯಾಗಿದೆ. ಪ್ರತಿ ಸಹಕಾರಿ ಸಂಘದ ಉಪನಿಯಮಗಳಲ್ಲಿ ಮಂಡಲಿ ಮತ್ತು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಅಧಿಕಾರಗಳನ್ನು ಸ್ಪಷ್ಟಪಡಿಸಲಾಗಿರುತ್ತದೆ. ಸದಸ್ಯರುಗಳ ಹಿತಾಸಕ್ತಿ ಗಳಿಗೆ ಒತ್ತಾಸೆ ನೀಡಿ ಅವುಗಳನ್ನು ಕಾರ್ಯಗತಗೊಳಿಸಲು ನೀತಿಗಳನ್ನೂ ಯೋಜನೆಗಳನ್ನೂ ರೂಪಿಸುವುದೇ ಆಡಳಿತ ಮಂಡಲಿಯ ಕೆಲಸ. ಸಿಬ್ಬಂದಿಗಳ ಸಹಕಾರದಿಂದ ಸಂಘದ ವ್ಯವಹಾರವನ್ನು ನಡೆಸುವುದೇ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಕೆಲಸ. ನಿರ್ದೇಶನ ನೀಡುವುದು ಕಾರ್ಯಕಾರಿ ಮಂಡಲಿಯ ಕೆಲಸವಾದರೆ, ಕಾರ್ಯ ನಿರ್ವಹಿಸುವುದು ಮುಖ್ಯಾಧಿಕಾರಿಯ ಕೆಲಸ. ಆದರೆ, ನಿರ್ದೇಶಕರು ಕಾರ್ಯ ನಿರ್ವಹಿಸಲು ಪ್ರಾರಂಭಿಸಿ ಕಾರ್ಯ ನಿರ್ವಹಿಸಬೇಕಾದವರನ್ನು ನಿರ್ದೇಶಿಸಲು ಪ್ರಾರಂಭಿಸಿದಾಗ ಸಮಸ್ಯೆಯುಂಟಾಗುತ್ತದೆ. ಇದುವೇ ಸಹಕಾರಿ ಸಂಸ್ಥೆಗಳಲ್ಲಿ ನಿಜಕ್ಕೂ ನಡೆಯುತ್ತಿರುವ ಸಂಗತಿ. ಸಹಕಾರಿ ಸಂಸ್ಥೆಗಳಲ್ಲಿ ನಿರ್ದೇಶಕರುಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಪಾತ್ರವಹಿಸುವ ಪ್ರವೃತ್ತಿಯನ್ನು ಬೆಳೆಸಿಕೊಂಡಿರುವುದೇ ನಿಜವಾದ ಸಮಸ್ಯೆಯಾಗಿದೆ.

ಸಹಕಾರಿ ಸಂಸ್ಥೆಗಳ ನಿರ್ದೇಶಕರುಗಳು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಪಾತ್ರವನ್ನು ವಹಿಸುವ ಪ್ರವೃತ್ತಿಗೆ ಎರಡು ಕಾರಣಗಳಿವೆ. ಬಹಳಷ್ಟು ಸಹಕಾರಿ ನೇತಾರರು ಮಂತ್ರಿಗಳಾಗಿಯೂ, ಹಿರಿಯ ಸಹಕಾರಿ ಅಧಿಕಾರಿಗಳಂತೆ ಕೆಲಸ ಮಾಡುವ ರಾಜಕಾರಣಿಗಳ ನಡತೆಯನ್ನು ಮಾದರಿಯಾಗಿಟ್ಟುಕೊಂಡು ಅದಕ್ಕನುಗುಣವಾಗಿಯೇ ವರ್ತಿಸುತ್ತಾರೆ. ಎಲ್ಲಾ ರೀತಿಯ ನಿರ್ಣಯಗಳಲ್ಲೂ ಅವರು ತಮ್ಮನ್ನು ಒಳಪಡಿಸಿಕೊಳ್ಳುತ್ತಾರೆ. ಎರಡನೆಯದಾಗಿ ಸಹಕಾರಿ ನಾಯಕತ್ವ ಬೆಳೆದು ಬಂದ ವಿಶಿಷ್ಟವಾದ ರೀತಿ ನೀತಿಯೂ ಇದಕ್ಕೆ ಕಾರಣ. ಸಹಕಾರಿ ಸಂಸ್ಥೆಗಳು ತಮ್ಮ ಬೆಳವಣಿಗೆಯ ಪ್ರಾರಂಭದ ಹಂತದಲ್ಲಿ ಸೀಮಿತ ಪ್ರದೇಶದ ವ್ಯಾಪ್ತಿಯಲ್ಲಿ ಚಿಕ್ಕ ಮತ್ತು ಸರಳವಾದ ಸಂಘಗಳಾಗಿ ಸದಸ್ಯರುಗಳಿಂದಲೇ ನಿರ್ವಹಿಸಲ್ಪಡುತ್ತಿದ್ದವು. ಸದಸ್ಯರುಗಳು ಕಾರ್ಯಕಾರಿ ಮಂಡಲಿಯಲ್ಲಿ ಅಂಶಕಾರಕ ಗೌರವ ನಿರ್ದೇಶಕರುಗಳಂತಿದ್ದು ತಮ್ಮ ಪ್ರತಿನಿಧಿಗಳ ಮೂಲಕ ಸಂಘಗಳನ್ನು ನಿರ್ವಹಿಸುತ್ತಿದ್ದರು.

ಸಹಕಾರಿ ಸಂಸ್ಥೆಗಳ ಸಂಕೀರ್ಣತೆಯಲ್ಲಿ ಅಗಾಧವಾದ ಬದಲಾವಣೆಗಳು ಉಂಟಾಗಿದ್ದರೂ ಸಹಕಾರಿ ಸಂಸ್ಥೆಗಳನ್ನು ನಿರ್ದೇಶಕರುಗಳೇ ನಿರ್ವಹಿಸುವ ಪ್ರವೃತ್ತಿಯು ದೂರವಾಗಿಲ್ಲ. ಮೊದಲೇ ಹೇಳಿದಂತೆ ಸಹಕಾರಿ ಸಂಸ್ಥೆಗಳು ಇಂದು ದೈತ್ಯಾಕಾರದ ಸಂಸ್ಥೆಗಳಾಗಿ ಬೆಳೆದಿವೆ. ಅಸಂಖ್ಯಾತ ಸದಸ್ಯರುಗಳನ್ನೂ ವಿಸ್ತೃತ ಕಾರ್ಯ ವ್ಯಾಪ್ತಿಯನ್ನೂ, ಅಗಾಧವಾದ ಬಂಡವಾಳ ವಿನಿಯೋಜನೆಯನ್ನೂ ಬೃಹತ್ ಸಂಖ್ಯೆಯ ಸಿಬ್ಬಂದಿಗಳನ್ನೂ ಹೊಂದಿದ ಸಹಕಾರಿ ಸಂಘಗಳು ವಿಭಿನ್ನ ರೀತಿಯ ವ್ಯಾಪಾರಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿವೆ. ಇಂಥ ಸ್ಥಿತಿಯಲ್ಲಿ ಸಹಕಾರಿ ಸಂಘವೊಂದನ್ನು ಅದರ ಅಂಶಕಾರಕ ಗೌರವ ನಿರ್ದೇಶಕರು ಪರಿಣಾಮಕಾರಿಯಾಗಿ ನಿರ್ವಹಿಸುವುದು ಖಂಡಿತಾ ಸಾಧ್ಯವಿಲ್ಲ. ಆದರೆ, ನಿರ್ದೇಶಕರ ಮಂಡಲಿಯು ಎಲ್ಲಾ ನಿರ್ಣಯಗಳಲ್ಲೂ ತಾನು ಒಳಗೊಂಡು ಸಂಘದ ವ್ಯವಹಾರಗಳನ್ನು ತಾನೇ ನಿರ್ವಹಿಸಲು ಅಪೇಕ್ಷಿಸುತ್ತದೆ. ಹೀಗೆ ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯು ಒಂದು ಪ್ರದರ್ಶನ ವಸ್ತುವಿನಂತಾಗಿದ್ದಾನೆ. ಆಡಳಿತ ಮಂಡಲಿಯವರು ನಿರ್ಣಯಿಸದೇ ಕೈಬಿಟ್ಟ ಅಲ್ಪ ಸ್ವಲ್ಪ ವಿಷಯಗಳನ್ನು ಅಧ್ಯಕ್ಷನಾದವನು ನಿರ್ವಹಿಸುತ್ತಾನೆ. ಇದರ ಒಟ್ಟಾರೆ ಪರಿಣಾಮವೆಂದರೆ, ಸಂಘದಲ್ಲಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗೆ ಯಾವುದೇ ಸ್ಥಾನವಿಲ್ಲದಿರುವುದು. ಕೇವಲ ಸಂಘದ ಪ್ರಧಾನ ಗುಮಾಸ್ತನ ಸ್ಥಾನದಲ್ಲಿ ಆತ ನೆಲೆಯೂರುವಂತಾಗಿದೆ. ಇದರಿಂದಾಗಿ ಅಧಿಕಾರ ಮತ್ತು ಹೊಣೆಗಾರಿಕೆಯು ಸಂಘದೊಳಗೆ ವಿಭಜನೆಗೊಂಡಂತಾಗಿದೆ. ಹಾಗೂ ಸಹಕಾರದ ನಿರ್ವಹಣೆ ಸಮಸ್ಯೆಯು ಸಹಕಾರದ ಮೂಲದಲ್ಲಿಯೇ ಇದೆ. ಈ ಸ್ಥಿತಿಯಲ್ಲಿ "ಸಹಕಾರಿಗಳಿಂದ" ಸಹಕಾರವನ್ನು ಹೇಗೆ ರಕ್ಷಿಸಬೇಕೆಂಬುದೇ ಸಹಕಾರದ ಆಡಳಿತ ಸಮಸ್ಯೆಯ ಸಾರಾಂಶವಾಗಿದೆ.

ಸಹಕಾರಿ ಸಂಸ್ಥೆಗಳ ಬೆಳವಣಿಗೆಯಲ್ಲಿ ಸರಕಾರ ಪಾಲ್ಗೊಳ್ಳುತ್ತಿರುವ ಕಾರಣದಿಂದ ದೇಶದ ಸಹಕಾರಿ ನಿರ್ವಹಣೆಯಲ್ಲಿ ಇನ್ನೊಂದು ಗಂಭೀರವಾದ ಸಮಸ್ಯೆ ತಲೆದೋರಿರುತ್ತದೆ. ಭಾರತೀಯ ಸಹಕಾರಿ ವ್ಯವಸ್ಥೆಯೇ ಸಹಕಾರದ ಪ್ರಗತಿಯಲ್ಲಿ ಸಹಕಾರದ ಪಾಲುಗಾರಿಕೆಯನ್ನು ಪರಿಶೋಧಿಸಿದೆ ಎನ್ನಬಹುದು. ಆರಂಭದಲ್ಲಿ ಸರಕಾರಕ್ಕೆ ತನ್ನೆಲ್ಲ ಬೆಂಬಲವನ್ನೂ ನೀಡುತ್ತ, ಸರಕಾರ ಸಹಕಾರವು ಪ್ರಬಲವಾಗುತ್ತಾ ಹೋದಂತೆ ತನ್ನ ಬೆಂಬಲಗಳನ್ನು ಹಿಂತೆಗೆದುಕೊಳ್ಳಬೇಕೆಂಬುದೇ ಸಹಕಾರದಲ್ಲಿ ಸರ್ಕಾರದ ಪಾಲಿನ ತತ್ತ್ವದ ಮೂಲಾರ್ಥವಾಗಿದ್ದರೂ ದುರದೃಷ್ಟವಶಾತ್ ಇದು ಹೀಗೆ ನಡೆಯಲಿಲ್ಲ. ಮನುಷ್ಯನ ಮಾಂಸದ ರುಚಿಯನ್ನು ಸವಿದ ಹುಲಿಯು ಆ ಅಭ್ಯಾಸವನ್ನು ಬಿಡುವುದು ಹೇಗೆ

ಕಷ್ಟವಾಗುತ್ತದೋ ಹಾಗೆಯೇ ಸಹಕಾರದಲ್ಲಿರುವ ರಾಜಕೀಯ ಅನುಕೂಲತೆಯನ್ನು ಸವಿದ ಸರಕಾರ ಅದರಿಂದ ಬೇರ್ಪಡಲು ಒಲ್ಲದು. ಇದು ಸರಕಾರದ ನಿಜವಾದ ಸ್ಥಿತಿ. ಸರಕಾರವು ಸಹಕಾರಿ ಸಿದ್ಧಾಂತವನ್ನು "ಸಹಕಾರದ ಜನ ಸರಕಾರದ ಹಣವನ್ನೇ ಆಶ್ರಯಿಸಬೇಕು" ಎನ್ನುವ ಅಪಾಯದ ನಿರ್ಧಾರಕ್ಕೆ ಕುಗ್ಗಿಸಿ ಬಿಟ್ಟಿದೆ. ಹಾಗಾಗಿ, ಸಹಕಾರಿ ಸಂಘಗಳಿಗೆ ನಿರ್ದೇಶಕರುಗಳನ್ನು ನಾಮಕರಣ ಮಾಡಲು, ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯನ್ನು ನೇಮಿಸಲು ಸರ್ಕಾರಕ್ಕೆ ಹಕ್ಕು ಇದೆ. ಸಹಕಾರ ಸಂಘಗಳ ನಿಬಂಧಕರ ಹುದ್ದೆಯು ಸರ್ವಾಧಿಕಾರದ ಹುದ್ದೆಯಾಗಿದೆ. ತಮ್ಮ ಅಮಿತ ಅಧಿಕಾರದ ಚಲಾವಣೆಯಲ್ಲಿ ನಿಬಂಧಕರು ಯಾವುದೇ ಕಾರಣ ನೀಡದೆ ಕಾರ್ಯ ಮಂಡಲಿಯನ್ನು ಕಿತ್ತು ಹಾಕಬಹುದಾಗಿದೆ ಅಥವಾ ನಿರ್ದೇಶಕರುಗಳ ಗಮನಕ್ಕೆ ತಾರದೆ ಉಪನಿಯಮಗಳಿಗೆ ಯಾವುದೇ ಬದಲಾವಣೆಯನ್ನು ಹೇರ ಬಹುದಾಗಿದೆ. ಸಹಕಾರಿ ಸಂಸ್ಥೆಗಳ ಬಗ್ಗೆ ಆತನಿಗಿರುವ ಅಧಿಕಾರ ಅನಿಯಮಿತವಾದುದು. ಇದು ಸಹಕಾರದ ಪ್ರಜಾಸತ್ತಾತ್ಮಕವಾದ ಗುಣ ಮತ್ತು ಸ್ವಾಯತ್ತತೆಯ ವಿನಾಶಕ್ಕೆ ಕಾರಣವಾಗಿದೆ. ಇದು ಸಹಕಾರದಲ್ಲಿ ರಾಜಕೀಕರಣ ಮತ್ತು ಅಧಿಕಾರಶಾಹಿತ್ವವನ್ನು ತಂದಿದೆ. ಇದು ಸಹಕಾರಿ ಸಂಸ್ಥೆಗಳ ವ್ಯಾಪಾರಿ ಸಂಸ್ಕೃತಿಯನ್ನೇ ಹೊಂದಿದೆ. ಆದಕಾರಣ, ಸಹಕಾರವನ್ನು ಸರ್ಕಾರದಿಂದ ಹೇಗೆ ಸಂರಕ್ಷಿಸಬೇಕೆಂಬುದೇ ಸಹಕಾರಿ ಆಡಳಿತದ ಇನ್ನೊಂದು ಗಂಭೀರವಾದ ಹಾಗೂ ಸೂಕ್ಷ್ಮವಾದ ಸಮಸ್ಯೆಯಾಗಿದೆ.

ಸಹಕಾರಿಗಳ ಕಲ್ಪನೆಗಳು :

ಸಹಕಾರಿ ನೇತಾರಲ್ಲಿ ಬಹಳಷ್ಟು ನಿರ್ವಹಣೆ ತತ್ವಗಳ ಬಗ್ಗೆ ತಮ್ಮವೇ ಆದ ಕಲ್ಪನೆಗಳಿವೆ. ಪ್ರಜಾಸತ್ತಾತ್ಮಕವಾಗಿ ಚುನಾಯಿಸಲ್ಪಟ್ಟು ಗೌರವ ಸೇವೆಯನ್ನು ನೀಡುವ ನಿರ್ದೇಶಕರುಗಳೇ ತಮ್ಮ ಸಂಸ್ಥೆಗಳನ್ನು ನಿರ್ವಹಿಸಬೇಕೆಂಬುದು ಅವರ ಅಚಲವಾದ ಭಾವನೆಯಾಗಿದೆ. ವೃತ್ತಿಪರ ನಿರ್ವಾಹಕರುಗಳಿಗೆ ನಿರ್ವಹಣೆಯ ವ್ಯವಹಾರವನ್ನು ವಹಿಸುವುದರಿಂದ ಪ್ರಜಾಸತ್ತಾತ್ಮಕವಾದ ಸಹಕಾರಿ ಸಂಸ್ಥೆಯೊಂದನ್ನು ನೌಕರಶಾಹಿ ಸಂಸ್ಥೆಯನ್ನಾಗಿ ಪರಿವರ್ತಿಸಿದಂತಾಗುತ್ತದೆ ಎನ್ನುವುದು ಅವರ ತಪ್ಪು ತಿಳಿವಳಿಕೆಯಾಗಿದೆ. ಮಾಲೀಕತ್ವ ಮತ್ತು ಆಡಳಿತ ಬೇರ್ಪಟ್ಟಿರಬಾರದು ಹಾಗೂ ಪ್ರಜಾ ಸತ್ತಾತ್ಮಕವಾದ ಆಡಳಿತ ಮತ್ತು ವೃತ್ತಿಪರ ಆಡಳಿತ ಒಂದುಗೂಡಬಾರದು ಎಂಬುವುದು ಅವರು ತಳೆದ ತಪ್ಪು ಅಭಿಪ್ರಾಯವಾಗಿದೆ. ಕಾರ್ಯಕಾರಿ ಮಂಡಲಿಗೆ ವಿಧೇಯನಾಗಿದ್ದು ಅದರ ಆದೇಶಗಳನ್ನಷ್ಟೇ ಪರಿಪಾಲಿಸುವುದು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ಕೆಲಸವೆಂಬುದು ಸಹಕಾರಿಗಳ ಸರ್ವವೇದ್ಯವಾದ ತಪ್ಪು ಕಲ್ಪನೆ. ಸಹಕಾರಿ ಸಂಸ್ಥೆಗಳಲ್ಲಿ ನಾವಿಂದು ಕಾಣುವ ದೋಷಯುಕ್ತ ಆಡಳಿತ ಪದ್ಧತಿಗಳಿಗೆ ಸಹಕಾರಿ ಆಡಳಿತದ ಬಗ್ಗೆ ಸಹಕಾರಿ ನಾಯಕರುಗಳಿಗೆ ಇರುವಂಥ ಕೆಲವು ತಪ್ಪು ಕಲ್ಪನೆಗಳೇ ಕಾರಣವಾಗಿವೆ.

ಪ್ರಜಾಸತ್ತಾತ್ಮಕವಾದ ನಿರ್ವಹಣೆ :

ಸಹಕಾರಿ ಸಂಸ್ಥೆಯೊಂದು ಪ್ರಜಾಸತ್ತಾತ್ಮಕವಾದ ಸಂಘಟನೆಯಾಗಿರುವ ಅಂಶವೇ, ಅದನ್ನು ಇತರ ವ್ಯಾಪಾರೀ ಸಂಸ್ಥೆಗಳಿಂದ ಬೇರ್ಪಡಿಸುವ ಅಂಶವಾಗಿದೆ. ಸಹಕಾರಿ ಸಂಸ್ಥೆಯೊಂದು ತಾನು ಪೂರೈಸುವ ಸೇವೆಯ ಆವಶ್ಯಕತೆ ಇರುವುದರಿಂದಲೇ ಆ ಸೇವೆಯನ್ನು ಪಡೆದುಕೊಳ್ಳುವವರಿಂದಲೇ ನಿರ್ವಹಿಸಲ್ಪಡುವುದರಲ್ಲಿ ಅವರ ಪ್ರಜಾಸತ್ತಾತ್ಮಕವಾದ ಅಂಶವಿದೆ. ಸಂಘದ ಬಂಡವಾಳ, ವ್ಯವಹಾರ ಮತ್ತು ಆಡಳಿತದಲ್ಲಿ ಸದಸ್ಯರು ಭಾಗವಹಿಸುವುದರಲ್ಲಿಯೇ ಸಹಕಾರಿ ಪ್ರಜಾಸತ್ತೆಯ ಸಾರ ಅಡಗಿದೆ.

ಸಂಘದ ನಿರ್ವಹಣೆಯಲ್ಲಿಯ ಪ್ರಜಾಸತ್ತಾತ್ಮಕ ಗುಣವನ್ನು ಖಾತರಿ ಪಡಿಸಲು ಸಂಘದ ಸೇವೆಯನ್ನು ಬಳಸಿಕೊಳ್ಳುವವರೆಲ್ಲರೂ ಸದಸ್ಯರುಗಳಾಗಿ ನೋಂದಾಯಿತರಾಗುವಂತೆಯೂ ಸದಸ್ಯರೆಲ್ಲರೂ ಸಂಘದ ಸೇವೆಯನ್ನು ಬಳಸಿಕೊಳ್ಳುವಂತೆಯೂ ಮಾಡುವುದು ಅವಶ್ಯವಾಗಿದೆ. ಸಂಘದ ಸೇವೆಯನ್ನು ಪಡೆದುಕೊಳ್ಳುವವರು ಸದಸ್ಯರುಗಳಾಗಿ ನೋಂದಾಯಿತರಾಗದೇ ಸದಸ್ಯರುಗಳ ಹಕ್ಕು ಜವಾಬ್ದಾರಿಗಳನ್ನು ಹೊಂದದೇ ಇರುವುದು ಪ್ರಜಾಸತ್ತಾತ್ಮಕವಾದ ನಿರ್ವಹಣೆ ವಿರೋಧವಾದುದು. ಹಾಗಾಯೇ ಸಂಘ ಪೂರೈಸುವ ಸೇವೆಯನ್ನು ಬಳಸದೇ ಇರುವವರು ಸದಸ್ಯರುಗಳಾಗಿ ನೋಂದಾಯಿತರಾಗಿ ನಿರ್ವಹಣೆಯ ಹಕ್ಕು ಜವಾಬ್ದಾರಿಗಳನ್ನು ಹೊಂದುವುದೂ ಪ್ರಜಾ ಸತ್ತಾತ್ಮಕ ನಿರ್ವಹಣೆ ಸಿದ್ಧಾಂತಕ್ಕೆ ವ್ಯತಿರಿಕ್ತವಾದುದು. ಆದರೆ, ಸಹಕಾರಿ ಸಂಸ್ಥೆಗಳಲ್ಲಿ ನಿಜವಾದ ಪ್ರಜಾಸತ್ತೆಗೆ ವಿರುದ್ಧವಾಗಿ ಕೆಲಸ ಮಾಡುವ ಸ್ಥಾಪಿತ ಹಿತಾಸಕ್ತಿಗಳನ್ನೇ ನಾವಿಂದು ನೋಡುತ್ತಿದ್ದೇವೆ. ಇಂಥವರು ಸಂಘದ ಸೇವೆಯ ಆವಶ್ಯಕತೆ ಇಲ್ಲದವರನ್ನೇ ಸದಸ್ಯರುಗಳನ್ನಾಗಿ ನೋಂದಾಯಿಸಿಕೊಳ್ಳುವ ಪ್ರವೃತ್ತಿಯು ಸಹಕಾರಿ ಸಂಘಗಳನ್ನು ಖೋಟಾ ಸಹಕಾರಿ ಸಂಘಗಳನ್ನಾಗಿ ಮಾಡುತ್ತಿದೆ.

ಮೇಲೆ ಹೇಳಿದಂತೆ ಸಹಕಾರ ಸಂಸ್ಥೆಗಳಲ್ಲಿ ಅಧಿಕಾರವನ್ನು ಸವಿದು ಅನುಭವಿಸಿದ ರಾಜಕಾರಣಿಗಳು, ಅಂಥ ಸಂಘಗಳ ವ್ಯವಹಾರಗಳಲ್ಲಿ ತಮ್ಮ ಸ್ಥಾಪಿತ ಹಿತಾಸಕ್ತಿಗಳೇ ಮುಂದುವರೆಯುವಂತಹ ಸ್ಥಿತಿಯನ್ನು ನಿರ್ಮಿಸಿದ್ದಾರೆ. ನಿಜವಾಗಿಯೂ ಸಂಘದ ಸೇವೆಯನ್ನು ಅಪೇಕ್ಷಿಸುವಂಥವರಿಗೆ ಸದಸ್ಯತ್ವವನ್ನು ತಿರಸ್ಕರಿಸಿ, ಸೇವೆಯೇ ಬೇಕಾಗಿರದೇ ರಾಜಕೀಯ, ಜಾತಿ ಕೋಮಿನ ವಿಚಾರಗಳಂತಹ ಅನಪೇಕ್ಷಿತ ವಿಚಾರಗಳಲ್ಲಿ ತಮ್ಮನ್ನು ಬೆಂಬಲಿಸುವಂಥವರಿಗೆ ಸಹಕಾರಿ ನಾಯಕರು ಸದಸ್ಯತ್ವವನ್ನು ನೀಡುತ್ತಾರೆ.

ವ್ಯಕ್ತಿಪರ ಆಡಳಿತ :

ಮೂಲತಃ ವಾಣಿಜ್ಯ ಸಂಘಟನೆಗಳಾಗಿರುವ ಸಹಕಾರಿ ಸಂಸ್ಥೆಗಳ ಪ್ರತಿಷ್ಠೆಯು ಅವುಗಳ ವ್ಯಾವಹಾರಿಕ ನಿರ್ವಹಣೆಯನ್ನು ಹೊಂದಿಕೊಂಡಿರುತ್ತದೆ. ಒಂದು ವಾಣಿಜ್ಯ ಸಂಸ್ಥೆಯ ಕಾರ್ಯಾಚರಣೆಯ

ಸಾಮರ್ಥ್ಯವು ಅದರ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯ ದಕ್ಷತೆಯನ್ನು ಹೊಂದಿಕೊಂಡಿರುತ್ತದೆ. ಯಾವುದೇ ಉದ್ಯಮದಲ್ಲಿ ಸಫಲತೆಯನ್ನು ತರುವವನೆಂದರೆ ಅದರ ವ್ಯಕ್ತಿಪರ ವ್ಯವಸ್ಥಾಪಕ ಆದರೆ, ಸಹಕಾರಿ ಸಂಘಟನೆಗಳಲ್ಲಿ ಇಂಥಹ ವ್ಯಕ್ತಿಪರ ವ್ಯವಸ್ಥಾಪಕನೆಗೆ ಯಾವ ಸ್ಥಾನವೂ ಇಲ್ಲ.

ಸರಕಾರದ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಸಹಕಾರಿ ಸಂಸ್ಥೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳನ್ನಾಗಿ ನಿಯುಕ್ತಿಗೊಳಿಸುತ್ತಿರುವುದನ್ನು ನಾವಿಂದು ನೋಡುತ್ತಿದ್ದೇವೆ. ಮೂಲತಃ ಆಡಳಿತಗಾರರಾದ ಈ ಅಧಿಕಾರಿಗಳಲ್ಲಿ ವೃತ್ತಿಪರ ಗುಣಗಳಿರುವುದಿಲ್ಲ. ಇವರು ಸಹಕಾರಿ ಸಂಸ್ಥೆಗಳಲ್ಲಿ ನೌಕರಶಾಹಿ ಸಂಸ್ಕೃತಿಯನ್ನು ಹುಟ್ಟು ಹಾಕುತ್ತಾರೆ. ಈ ನಿಯಾಮಕದ ನೀತಿಯು ನಿಜಕ್ಕೂ ಸಹಕಾರಿ ಸಂಸ್ಥೆಗಳಲ್ಲಿನ ವ್ಯಾಪಾರಿ ಉತ್ಸಾಹ ಮತ್ತು ಔದ್ಯಮಿಕ ಗುಣಗಳನ್ನೇ ಕೊಂದುಬಿಟ್ಟಿದೆ. ಈ ರೀತಿಯ ನಿಯಾಮಕದ ನೀತಿಯು ಸಂಪೂರ್ಣವಾಗಿ ನಿಂತು ಹೋಗದ ಹೊರತು ಈ ದೇಶದಲ್ಲಿ ಸಹಕಾರಿ ಸಂಸ್ಥೆಗಳಿಗೆ ಯಾವುದೇ ಭವಿಷ್ಯವಿರುವುದಿಲ್ಲ. ಕೆಲವು ರಾಜ್ಯಗಳಲ್ಲಿ ರಾಜ್ಯ ಮಟ್ಟದ ಅಗ್ರ ಸಹಕಾರಿ ಸಂಸ್ಥೆಗಳಿಗೆ ಪೋಲೀಸ್ ಇಲಾಖೆಯ ಅಧಿಕಾರಿಗಳನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳನ್ನಾಗಿ ನೇಮಿಸಲಾಗುತ್ತಿದೆ ಎನ್ನುವುದು ಆಸಕ್ತಿ ಹುಟ್ಟಿಸುವ ವಿಷಯ.

ಸಹಕಾರಿ ಸಂಸ್ಥೆಗಳ ಆಡಳಿತವನ್ನು ವೃತ್ತಿಕರಣಗೊಳಿಸುವುದೆಂದರೆ ಕಾರ್ಯ ನಿರ್ವಹಣೆಯನ್ನು ಪ್ರಜಾಸತ್ತಾತ್ಮಕವಾದ ನಿಯಂತ್ರಣದಿಂದ ಬೇರ್ಪಡಿಸುವಂತಹ ಮೂಲಭೂತ ಅಂಶಗಳನ್ನು ಒಳಗೊಂಡಿದೆ. ಇದರ ಪ್ರಮಾಣ ಮತ್ತು ವ್ಯಾಪ್ತಿಯು ಸಂಸ್ಥೆಯ ಗಾತ್ರ, ಸಂರಚನೆ ಮೌಲ್ಯಗಳು ಮತ್ತು ಅನುಭವಿಗಳಿದ್ದಂತೆ ವ್ಯತ್ಯಾಸವಾಗುತ್ತದೆ. ಸರ್ಕಾರದ ಬೆಂಬಲವಲ್ಲದೇ ಸಹಕಾರ ಸಂಸ್ಥೆಗಳ ವೃತ್ತಿಕರಣವು ಅಸಾಧ್ಯ ಎಂಬುದನ್ನು ಮರೆಯುವಂತಿಲ್ಲ.

ಸದಸ್ಯರುಗಳು ಸಂಘದಿಂದ ಉತ್ತಮ ಮಟ್ಟದ ನಿರ್ವಹಣೆಯನ್ನು ನಿರೀಕ್ಷಿಸಿದ ಹೊರತು ಈ ಬಗ್ಗೆ ಆಡಳಿತದ ಮೇಲೆ ವ್ಯವಸ್ಥಿತ ಒತ್ತಡವನ್ನು ಹೇರದ ಹೊರತು ವೃತ್ತಿಕರಣವು ಸಾಕಾರಗೊಳ್ಳದು. ವೃತ್ತಿಕರಣವು ಸಂಸ್ಥೆಯ ತತ್ತ್ವ, ಪರಂಪರೆ, ನಿರ್ವಹಣಾ ಶೈಲಿ ಮತ್ತು ಸಂಸ್ಕೃತಿಗಳನ್ನು ಹೊಂದಿಕೊಂಡಿರುತ್ತದೆ. ವೃತ್ತಿಕರಣವೆನ್ನುವುದು ಕೇವಲ ಒಂದು ಸಿದ್ಧಾಂತವಾಗಿರದೆ ಒಂದು ಪ್ರವೃತ್ತಿಯಾಗಿರುತ್ತದೆ.

ನೂತನ ಆರ್ಥಿಕ ನೀತಿ ಮತ್ತು ಸಹಕಾರಿ ಸಂಸ್ಥೆಗಳು :

ಅರ್ಥ ವ್ಯವಸ್ಥೆಯ ಪುನಾರಚನೆ ಮತ್ತು ಸುಧಾರಣೆಗೆ ಸಂಬಂಧಿಸಿದ ಹೊಸ ಆರ್ಥಿಕಾಭಿವೃದ್ಧಿಯ ತತ್ತ್ವವು ದೇಶದ ಆರ್ಥಿಕ ವ್ಯವಸ್ಥೆಯ ಗತಿಯನ್ನೇ ಬದಲಿಸಿದೆ. ನೂತನ ಆರ್ಥಿಕ ನೀತಿಯ ಉದ್ದೇಶವು ಸ್ಪರ್ಧಾತ್ಮಕ ಅರ್ಥವ್ಯವಸ್ಥೆಯನ್ನು ಸೃಷ್ಟಿಸುವುದೇ ಆಗಿದೆ. ಸರ್ಕಾರದ ವಿಶೇಷವಾದ ಸವಲತ್ತು ಏಕಸ್ವಾಮ್ಯ ಮತ್ತು ಅಸಾಮರ್ಥ್ಯವನ್ನುಂಟು ಮಾಡುತ್ತದೆ ಎಂಬುದನ್ನು ನಂಬುವ ಈ ನೀತಿಯು ಯಾವುದೇ ಕ್ಷೇತ್ರಕ್ಕೆ ಸರ್ಕಾರದ ವಿಶೇಷ ಬೆಂಬಲವನ್ನು ವಿರೋಧಿಸುತ್ತದೆ.

ಹೊಸ ಆರ್ಥಿಕ ನೀತಿಯಲ್ಲಿ ಉದಾರೀಕಣ, ಜಾಗತೀಕರಣ, ಖಾಸಗೀಕರಣ ಮತ್ತು ಮಾರುಕಟ್ಟೆ ಮೈತ್ರಿ ಎಂಬ ನಾಲ್ಕು ತತ್ವಗಳಿವೆ. ಸಹಕಾರವು ಒಮ್ಮೆಂದೊಮ್ಮೆಗೇ ಹೊಸ ವಾತಾವರಣದಲ್ಲಿ ಕಾರ್ಯ ನಿರ್ವಹಿಸಬೇಕಾದ ಸ್ಥಿತಿಯನ್ನು ಇವು ತಂದಿವೆ. ಇದರಿಂದಾಗಿ ನಿರ್ದಿಷ್ಟವಾದ ಮತ್ತು ಪರಿಣಾಮಕಾರಿಯಾದ ಪಾತ್ರವನ್ನು ವಹಿಸಬೇಕಾದ ಸಹಕಾರ ಸಂಸ್ಥೆಗಳಲ್ಲಿ ರಚನಾತ್ಮಕ ಸುಧಾರಣೆ ಅತ್ಯಾವಶ್ಯಕವಾಗಿದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಸಹಕಾರ ಸಂಸ್ಥೆಗಳು ಕೆಳಗಿನ ನಾಲ್ಕು ಆಯಾಮಗಳುಳ್ಳ ಕ್ರಾಂತಿಕಾರಿ ತಿರುವುಗಳನ್ನು ಕ್ರಮಿಸಬೇಕಾಗಿದೆ :

ಈಗಿನ ಸಂಘಟನಾ ಸ್ವರೂಪದ ಕ್ರೋಡೀಕರಣ ಮತ್ತು ಸ್ಥಿರೀಕರಣ, ಸಹಕಾರಿ ಸಂಸ್ಥೆಗಳ ವಿಶಿಷ್ಟವಾದ ಸಾರ್ಥಕ ಗುಣ ಮತ್ತು ಸ್ಥಾನದ ಸಂರಕ್ಷಣೆ ಮತ್ತು ಪೋಷಣೆ :

ತನ್ನ ಅಂಗ ಘಟಕಗಳಾದ ಪ್ರಾಥಮಿಕ ಸಂಘಗಳನ್ನು ಬಲಪಡಿಸಿ, ಸಂವರ್ಧಿಸಿ, ಒಟ್ಟಿನಲ್ಲಿ ಅವುಗಳ ಅಗತ್ಯಗಳನ್ನು ಪೂರೈಸುವ ಪಾತ್ರ ವಹಿಸುವಂತೆ ಅಗ್ರ ಸಹಕಾರಿ ಸಂಸ್ಥೆಗಳನ್ನು ಅಭಿಮುಖಗೊಳಿಸುವುದು.

ಸಹಕಾರಿ ಸಂಘಗಳಲ್ಲಿ ನಿರ್ವಹಣೆಯ ಸುಧಾರಣೆಗಳು ಉಂಟಾಗದಿದ್ದಲ್ಲಿ ಈ ಸಂಘಟನಾ ಬದಲಾವಣೆಗಳು ಅರ್ಥಹೀನವಾಗುತ್ತವೆ. ನಿರ್ವಹಣಾ ಸುಧಾರಣೆಗಳೆಂದರೆ :

- ಸಹಕಾರ ಸಂಸ್ಥೆಗಳ ಚುನಾಯಿತ ನಿರ್ದೇಶಕರುಗಳಿಗೆ ಅನ್ವಯಿಸುವ ನೀತಿಸಂಹಿತೆಯ ರಚನೆ, ಚುನಾಯಿತ ಕಾರ್ಯಕಾರಿ ಮಂಡಲಿಯ ಪಾತ್ರದ ವ್ಯಾಪ್ತಿಯನ್ನು ಕೇವಲ ಸಂಸ್ಥೆಯ ನೀತಿಗಳ ನಿರೂಪಣೆ, ಮೌಲ್ಯಮಾಪನ ಮತ್ತು ವಿಶ್ಲೇಷಣೆಗೆ ಮಾತ್ರ ಸೀಮಿತಗೊಳಿಸುವ, ಅಂತೆಯೇ ಅಧಿಕಾರ ವರ್ಗದ ವ್ಯಾಪ್ತಿಗಳನ್ನು ಮಂಡಲಿಯ ನಿರ್ಣಯಗಳ ಅನುಷ್ಠಾನಕ್ಕೆ ಮಾತ್ರ ಸೀಮಿತಗೊಳಿಸುವ ವೃತ್ತಿಪರ ನಿರ್ವಹಣೆ.
- ಸಹಕಾರಿ ಸಂಸ್ಥೆಗಳ ಪ್ರಜಾಸತ್ತಾತ್ಮಕ ಕಾರ್ಯಾಚರಣೆಯನ್ನು ಕಾಪಾಡಲು ಅಪಗತಿ, ವಿರೂಪತೆ, ಆಪತ್ತು ಇತ್ಯಾದಿಗಳನ್ನು ವಿಚಾರಿಸಿ ಇತ್ಯರ್ಥಪಡಿಸಲು ಪ್ರಾಧಿಕಾರದಂತಹ ಸಾಂಸ್ಥಿಕ ವ್ಯವಸ್ಥೆಯನ್ನು ಹುಟ್ಟು ಹಾಕುವುದು.
- ಸಹಕಾರಿ ಸಂಸ್ಥೆಗಳ ಪ್ರಜಾಸತ್ತಾತ್ಮಕ ಸಂಘಟನಾಂಶವನ್ನು ರಕ್ಷಿಸುವುದಕ್ಕಾಗಿ ಕ್ಲುಪ್ತ ಸಮಯದಲ್ಲಿ ಕ್ರಮಬದ್ಧ ಚುನಾವಣೆಗಳು ನಡೆಯುವುದನ್ನು ಖಾತರಿಗೊಳಿಸುವುದು.

[ಪುಟ 23ರಲ್ಲಿ ಮುಂದುವರಿದಿದೆ

ಶ್ರಮಿಕ ಶಿಕ್ಷಣ : ಒಂದು ಅಧ್ಯಯನ

ಕಾ. ಶ್ರೀನಿವಾಸ

ಪರಿಪೂರ್ಣ ಸಮಾಜವನ್ನು ಸಮಾಜಿಕ ಹಾಗೂ ಆರ್ಥಿಕ ನ್ಯಾಯದ ತಳಹದಿಯ ಮೇಲೆ ನಿರ್ಮಿಸಲು ಮತ್ತು ಶ್ರಮಿಕರ, ಶ್ರಮಿಕ ಸಂಘಗಳ ಶೈಕ್ಷಣಿಕ ಅಗತ್ಯಗಳನ್ನು ಪ್ರಾಯೋಗಿಕವಾಗಿ ಪರಿಗಣಿಸಲು ಕಾರ್ಮಿಕ ಶಿಕ್ಷಣ ಒಂದು ಮಾರ್ಗ. ಕಾರ್ಮಿಕ ವಿದ್ಯಾವಿಚಾರವನ್ನು ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸಬಹುದು.

ಒಂದು ಪಂಥದ ಚಿಂತನೆಯ ಪ್ರಕಾರ ಕಾರ್ಮಿಕರ ಕರ್ತವ್ಯಗಳ, ಜವಾಬ್ದಾರಿಗಳ ಮತ್ತು ಸಂಘಗಳ ಸದಸ್ಯರ ಕುರಿತು ಜಾಗೃತಿ ನಿರ್ಮಾಣ ಮಾಡುವುದೇ ಕಾರ್ಮಿಕ ಶಿಕ್ಷಣದ ಗುರಿ. ಶಿಕ್ಷಣದ ಪಾತ್ರ ಹಾಗೂ ಪರಸ್ಪರ ಅಭಿಮುಖವಾಗಿರುವ ಉದ್ಯಮಗಳ ಮತ್ತು ಕಾಮಗಾರ ಸಂಘಗಳ ಅಗತ್ಯ ಹಾಗೂ ಕರ್ತವ್ಯಗಳ ಬಗೆಗೆ ವಿಚಾರಗಳನ್ನು ಈ ಪಂಥ ತಿಳಿಸುತ್ತದೆ. ಇದರ ಅಭಿಪ್ರಾಯದಲ್ಲಿ ಎರಡು ವ್ಯತ್ಯಾಸಗಳಿವೆ. ಕೆಲವು ದೇಶಗಳಲ್ಲಿ ಕಾರ್ಮಿಕ ಸಂಘಗಳ ಸಿಬ್ಬಂದಿಗೆ ತರಬೇತಿಯ ಪ್ರಾಮುಖ್ಯಕ್ಕೆ ಒತ್ತು ಕೊಡಲಾಗಿದೆ. ಈ ವಿಚಾರ ಫಿಲಿಪೀನ್ಸ್ ಮತ್ತು ಮಲೇಷಿಯಾಗಳಲ್ಲಿ ವ್ಯಾಪಕವಾಗಿ ಚಾಲ್ತಿಯಲ್ಲಿದೆ. ಕಾರ್ಮಿಕರನ್ನು ಆಡಳಿತದಲ್ಲಿ ಭಾಗವಹಿಸುವಂತೆ ತಯಾರು ಮಾಡುವುದೇ ಕಾರ್ಮಿಕ ವಿದ್ಯೆಯ ಉದ್ದೇಶ ಎಂಬುದು ಇನ್ನೊಂದು ಅಭಿಪ್ರಾಯ.

ಎರಡನೆಯ ಪಂಥದ ಪ್ರಕಾರ ಶ್ರಮಜೀವಿಗಳಿಗೆ ತಮ್ಮ ವೃತ್ತಿ ಸಂಘಗಳ ಸದಸ್ಯರ ಹಾಗೂ ಪೌರರ ಪಾತ್ರಗಳ ಕುರಿತು ಜಾಗೃತಿ ಉಂಟುಮಾಡುವುದೇ ಶ್ರಮಿಕ ವಿದ್ಯಾ ಧ್ಯೇಯ. ಜಾಕ್ ಬರ್‌ಬಾಶ್ ಹೇಳುವಂತೆ : "ಕಾರ್ಮಿಕ ಶಿಕ್ಷಣ ಎಂದರೆ ಅಧಿಕ ಪರಿಣಾಮಕಾರಿ ಒಕ್ಕೂಟದ ಪೌರತ್ವ ನಿರ್ಮಾಣ ಮಾಡಲು ಸಂಘದ ಹೊರಗೆ ಯಾವುದೇ ಪಾರುಪತ್ಯ ಯೋಜಿತ ಶೈಕ್ಷಣಿಕ ಚಟುವಟಿಕೆಯನ್ನು ಆರಂಭಿಸುವುದು." ಕಾರ್ಮಿಕ ಶಿಕ್ಷಣಕ್ಕೆ ಇದರಿಂದ ಹೆಚ್ಚಿನ ವ್ಯಾಪ್ತಿ ಪ್ರಾಪ್ತವಾಗುತ್ತದೆ. ಸಂಘದ ಪೌರತ್ವ ಎಂದರೆ ಕೇವಲ ಸಂಘದ ಸದಸ್ಯರಾಗಿ ಸಂಘದ ಸಮಾಚಾರಗಳಲ್ಲಿ ತರಬೇತಿ ಹೊಂದುವುದಲ್ಲದೆ ವ್ಯಾಪಕವಾದ ಯಥಾದೃಷ್ಟಿಯ ಪೌರತ್ವದ ಕರ್ತವ್ಯಗಳು ಮತ್ತು ಹಕ್ಕು ಭಾದ್ಯತೆಗಳನ್ನು ಅರಿತು ಅವಲೋಕನ ಮಾಡಬೇಕು. ಕಾರ್ಮಿಕ ಶಿಕ್ಷಣದ ಈ ವಿಚಾರಗಳು ಕಾರ್ಮಿಕ ವರ್ಗದ ಹಿತಾಸಕ್ತಿಯ ಮೇಲೆ ಸಾಮಾಜಿಕ ಮತ್ತು ರಾಷ್ಟ್ರದ ಹಿತಾಸಕ್ತಿಗಳ ಅಗ್ರಗಣ್ಯತೆ ಮತ್ತು ಸರ್ವೋತೃಷ್ಟತೆಯನ್ನು ಒತ್ತುಕೊಟ್ಟು ಸಾರುತ್ತವೆ. ಈ ಚಿಂತನಗಳು ಭಾರತ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಾರ್ಮಿಕ ಶಿಕ್ಷಣದ ಕಾರ್ಯಕ್ರಮಗಳಲ್ಲಿ ಅಡಗಿದೆ.

ಆದರ್ಶ ಜೀವನಕ್ಕೆ ಉತ್ತೇಜನ ಕೊಡುವ ಸಾಧನವೇ ಶ್ರಮಜೀವಿಗಳ ಶಿಕ್ಷಣ ಎಂಬುದು ಇನ್ನೊಂದು ವಿಚಾರ ಪ್ರಣಾಲಿ. ಇದು ಪ್ರಜಾಪ್ರಭುತ್ವವಾದಿ ಮತ್ತು ಸಮಾಜವಾದಿ ರಾಷ್ಟ್ರಗಳಲ್ಲಿ ಚಾಲ್ತಿಯಲ್ಲಿದೆ. ಕಾರ್ಮಿಕರ ಮನೋಭಾವಗಳು ಮತ್ತು ಮೌಲ್ಯಗಳು ಪ್ರಜಾಧಿಪತ್ಯದಲ್ಲಿ ಕೈಗಾರಿಕಾ ಪ್ರಜಾಸತ್ತೆಗೆ ಉತ್ತೇಜನ ಕೊಡಲು ಕಾರ್ಮಿಕ ಶಿಕ್ಷಣ ನೆರವಾಗುತ್ತದೆ. ಕೈಗಾರಿಕಾ ಕ್ಷೇತ್ರದಲ್ಲಿ ಮಧುರ ಬಾಂಧವ್ಯ ಉಂಟಾದಾಗ ಅದು ಪ್ರಜಾಸತ್ತೆಯ ರಾಜಕೀಯ ವಿಸ್ತರಣೆಯಾಗುತ್ತದೆ. ಕೈಗಾರಿಕಾ ಪ್ರಜಾಧಿಪತ್ಯ ಹೃದಯ ಮತ್ತು ಮನಸ್ಸಿನ ಅಗತ್ಯ ಸುಗುಣಗಳ ಕೃಷಿಯನ್ನೂ ಆಧರಿಸಿದೆ. ಮುಖ್ಯವಾಗಿ ತಾಳ್ಮೆ, ಕಾರ್ಯ ಕಾರಣ ಸಂಬಂಧ ವಿವೇಚನೆ, ವಿವೇಕ, ವ್ಯವಹಾರ ಜ್ಞಾನ, ಮನಒಲಿಸುವ ಪ್ರವೃತ್ತಿ, ಗೌರವ, ಸಾಮಾನ್ಯ ಹಿತಾಸಕ್ತಿಗಳಲ್ಲಿ ಪಂಗಡದ ಹಕ್ಕು ಭಾಧ್ಯತೆಗಳು, ವಿಶೇಷಾಧಿಕಾರಗಳನ್ನು ಮನಃಪೂರ್ವಕವಾಗಿ ಬಿಟ್ಟು ಬಿಡುವುದು ಮತ್ತು ಸಹಾನುಭೂತಿಯ ಮನಸ್ಸಿನ ಹದ ಹಾಗೂ ತಿಳಿವಳಿಕೆ—ಪ್ರಜಾಡಳಿತದಲ್ಲಿ ಈ ಗುಣಗಳ ಕೃಷಿಯೇ ಕಾರ್ಮಿಕ ಶಿಕ್ಷಣದ ಉದ್ದೇಶ. ಕಾರ್ಮಿಕ ಶಿಕ್ಷಣದ ವಸ್ತು ವಿಷಯಗಳಲ್ಲಿ ಮುಖ್ಯವಾಗಿ ಸಾಮಾನ್ಯ ಮತ್ತು ತಾಂತ್ರಿಕ ಶಿಕ್ಷಣ, ಶ್ರಮದ ಉತ್ಪಾದಕತೆ ಇವುಕ್ಕೆ ಸಮತಾವಾದಿ ರಾಷ್ಟ್ರಗಳಲ್ಲಿಯ ಕಾರ್ಮಿಕ ಶಿಕ್ಷಣ ವ್ಯವಸ್ಥೆಯಲ್ಲಿ ಸೇರ್ಪಡೆಯಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಕಾರ್ಮಿಕ ಶಿಕ್ಷಣದ ಚಿಂತನವು ಮೂಲಾರ್ಥದೊಡನೆ ಹೆಚ್ಚು ಅರ್ಥಗರ್ಭಿತವಾಗಿ ವ್ಯಾಪಕವಾಗಿ ವಿಸ್ತಾರಗೊಂಡಿದೆ. ಕಾರ್ಮಿಕ ಶಿಕ್ಷಣದ ಉದ್ದೇಶವೆಂದರೆ—ಕಾರ್ಮಿಕರನ್ನು ನಿಜವಾದ ಅರ್ಥದಲ್ಲಿ ಪ್ರಾಮಾಣಿಕ ಹಾಗೂ ದಕ್ಷ ವಿಕಸನ ಶೀಲರನ್ನಾಗಿ ಮಾಡುವುದು ಎಂಬುದು ಇನ್ನೊಂದು ಅಭಿಪ್ರಾಯ, ಹೊಸ ಪರಿಸ್ಥಿತಿ, ಸನ್ನಿವೇಶ, ಸಂದರ್ಭಗಳಿಗೆ ಹೊಂದಿಕೊಳ್ಳುವಂತೆ ಮತ್ತೊಮ್ಮೆ ಕಾರ್ಮಿಕ ಸಮಾಜ ಮಾರ್ಪಾಟಾಗುವುದು ಮತ್ತು ಕಾರ್ಮಿಕರು ತಮ್ಮ ಸಾಮಾಜಿಕ ನಡೆವಳಿಕೆಗೆ ಸರಿಹೊಂದಿಕೊಳ್ಳುವುದು ಮುಖ್ಯವೆನಿಸುತ್ತದೆ. ಕೈಗಾರಿಕಾ ಹಾಗೂ ತಂತ್ರಜ್ಞಾನದಲ್ಲಿ ಪ್ರಗತಿಯ ಕಾರಣ ಹೊಸ ಹೊಂದಾಣಿಕೆ ಕಾರ್ಮಿಕರಿಗೆ ಅಗತ್ಯವಾಯಿತು. ಇವುಗಳೊಂದಿಗೆ ಸಮಾನಾಂತರವಾಗಿ ಕೆಲವು ಬದಲಾವಣೆಗಳಾದವು. ಬೆಳೆಯುತ್ತಿರುವ ಕಾರ್ಮಿಕ ಸಂಘಗಳ ಹೊಣೆಗಾರಿಕೆಗಳನ್ನು ನಿರ್ವಹಿಸಲು ಮತ್ತು ಪೌರ ನೀತಿ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ನಾಯಕತ್ವವನ್ನು ಸ್ವೀಕರಿಸುವ ಕಾರ್ಮಿಕ ಸಂಘಗಳ ಸಿಬ್ಬಂದಿಯ ಅಗತ್ಯವೂ ತ್ವರಿತವಾಗಿ ಬೆಳೆಯಿತು. ಈ ಬದಲಾವಣೆಯ ಅಗತ್ಯಗಳು ಸ್ವಾಭಾವಿಕವಾಗಿ ಕಾರ್ಮಿಕ ವಿದ್ಯೆಯ

ಉದ್ದೇಶಗಳು ಮತ್ತು ಅದರ ವ್ಯಾಪ್ತಿಗಳನ್ನು ಬದಲಾಯಿಸಿತು. ಮಾರ್ಪಾಟುಗಳಾದವು, ರೂಪಾಂತರಗಳಾದವು. ಕೈಗಾರಿಕೀರಣ ಮತ್ತು ತಂತ್ರಜ್ಞಾನದ ತೀವ್ರಗತಿಯ ಅಭಿವೃದ್ಧಿಯಿಂದ ಉಂಟಾದ ಪರಿಸ್ಥಿತಿ ಸನ್ನಿವೇಶಗಳನ್ನು ಎದುರಿಸಲು ಮೇಲೆ ಹೇಳಿದ ಮಾರ್ಪಾಟುಗಳು ಕಾರ್ಮಿಕ ಶಿಕ್ಷಣದ ಕಾರ್ಯಕ್ರಮಗಳಾದವು. ಡೆನ್ಮಾರ್ಕ್, ನಾರ್ವೆ, ಸ್ವೀಡನ್, ಐಸ್ಲೆಂಡ್‌ಗಳನ್ನೊಳಗೊಂಡ ಸ್ಕಾಂಡಿನೇವಿಯಾದ ದೇಶಗಳ ಕಾರ್ಮಿಕ ಶಿಕ್ಷಣದ ಕಾರ್ಯಕ್ರಮಗಳಲ್ಲಿ ಈ ಮೇಲೆ ಹೇಳಿದ ಅಂಶ ಗಳನ್ನು ಅಳವಡಿಸಿಕೊಳ್ಳಲಾಗಿದೆ.

ಇನ್ನೊಂದು ಚಿಂತನೆಯ ಪ್ರಕಾರ ಆದರ್ಶ ಜೀವನಕ್ಕೆ ಉತ್ತೇಜನ ನೀಡುವ ಸಾಧನವೇ ಕಾರ್ಮಿಕ ಶಿಕ್ಷಣ. ಶ್ರಮಜೀವಿಗಳು ವಿಕಸಿತ ವ್ಯಕ್ತಿಗಳಾಗುವಂತೆ ಮಾಡುವ ಸಾಧನವಿದು. ಉತ್ಪತ್ತಿ, ಉತ್ಪಾದಕತೆ ಮತ್ತು ಬಳಕೆಗಳ ಕಾನೂನು ಸುತ್ತಣ ಪರಿಸರ, ವ್ಯಕ್ತಿಗಳು, ಇವುಗಳ ಬಗ್ಗೆ ಕಾರ್ಮಿಕರಿಗೆ ಹೆಚ್ಚಿನ ಅರಿವು ಮೂಡುವಂತೆ ಹೊಣೆಗಾರರಾಗು ವಂತೆ ತರಬೇತಿ ನೀಡಬೇಕು. ಕಾರ್ಮಿಕರು ವಿಕಸಿತ ವ್ಯಕ್ತಿಗಳಾಗುವಂತೆ ನೆರವಾಗಬೇಕು. ಶ್ರಮಿಕರ ದೈಹಿಕ ಪರಿಶ್ರಮ ಇಲ್ಲವೇ ಬೌದ್ಧಿಕ ಕಾರ್ಯಗಳಿಗೆ ಪ್ರತಿಫಲ ದೊರಕಬೇಕು. ಕೇವಲ ಕಾರ್ಮಿಕರನ್ನು ಕಾರ್ಮಿಕ ಸಂಘಗಳು ಮತ್ತು ಕಮ್ಮಟಗಳನ್ನು ಕುರಿತು ಹೊಣೆಗಾರ ರಾಗುವಂತೆ ಆದರೆ ಸಾಲದು. ಆರ್ಥಿಕ, ಸಾಮಾಜಿಕ, ಪೌರನೈತಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿಯೂ ಹಕ್ಕು ಭಾದ್ಯತೆ ಉಳ್ಳವರಾಗಿರಬೇಕು. ಈ ಶಿಕ್ಷಣವು ಕಾರ್ಮಿಕರ ಸ್ವಾತಂತ್ರ್ಯವನ್ನು ಗೌರವಿಸುತ್ತದೆ. ಕಾರ್ಮಿಕರು ಹೆಚ್ಚಿನ ಸಾಮರ್ಥ್ಯ ಹೊಂದಲು ಅವಕಾಶಗಳನ್ನು ಉಂಟು ಮಾಡುತ್ತದೆ. ದೈಹಿಕ, ನೈತಿಕ, ಬೌದ್ಧಿಕ ಮತ್ತು ಕೌಶಲಯುಕ್ತ ಕರ್ಮಿ ಗಳಾಗಲು ಅರ್ಥಾತ್ ವಿಕಸಿತ ವ್ಯಕ್ತಿಗಳಾಗಲು ಅವಕಾಶ ಮಾಡಿಕೊಡು ತ್ತದೆ. ವಿಚಾರವಂತರಾಗಲು ಸಾಮರ್ಥ್ಯವನ್ನು ನೀಡುತ್ತದೆ. ಕೇವಲ ಕಾರ್ಮಿಕರ ಮನಸ್ಸಿಗೆ ಹತ್ತುವಂತೆ ಶಿಸ್ತಿನ ಮತ್ತು ನಾಯಕತ್ವದ ಗುಣ ಗಳ ಬೋಧನೆ ಮಾಡು ವುದಲ್ಲದೆ ಕಾರ್ಮಿಕರು ವಿಕಸಿತ ವ್ಯಕ್ತಿಗಳಾಗು ವಂತೆ ಮಾಡುವುದೂ ಸೇರಿದೆ. ಮುಖ್ಯ ಕಾರ್ಮಿಕ ಶಿಕ್ಷಣದ ವ್ಯಾಪ್ತಿಯು ವಯಸ್ಕರ ಮತ್ತು ಸಾಮಾನ್ಯ ಶಿಕ್ಷಣ ಕಾರ್ಯಕ್ರಮಗಳಿಗೂ ಹರಡಿದೆ.

ಪಿ. ಜಿ. ಎಚ್. ಹಾಪ್‌ಕಿನ್ಸರ ನಿರೂಪಣೆಯ ಪ್ರಕಾರ ಕಾರ್ಮಿಕ ಶಿಕ್ಷಣವು ವಯಸ್ಕರ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಅರ್ಹ ಹಾಗೂ ಯೋಗ್ಯ ಕಾರ್ಮಿಕರನ್ನು ರೂಪಿಸುವುದು, ಆರೋಗ್ಯಕರ ಕಾರ್ಮಿಕ ಸಮುದಾಯವನ್ನು ನಿರ್ಮಿಸುವುದು. ಇದು ಕಾರ್ಮಿಕ ಶಿಕ್ಷಣದ ಮುಖ್ಯ ಗುರಿಯಾಗಬೇಕು.

ಪಂಡಿತ ಜವಹಾರಲಾಲ್ ನೆಹರು ಅವರ ಪ್ರಕಾರ 'ಕಾರ್ಮಿಕ ಶಿಕ್ಷಣ ಕಾರ್ಮಿಕ ಸಂಘಗಳಿಗೆ ಬದ್ಧವಾದ ಹಾಗೂ ದೃಢವಾದ ಆಧಾರ ವನ್ನು ಒದಗಿಸಿಕೊಡುತ್ತದೆ.

ಸಾಮಾಜಿಕ ವಿಜ್ಞಾನಗಳ ವಿಶ್ವಕೋಶದ ಪ್ರಕಾರ ವಯಸ್ಕರ ಶಿಕ್ಷಣದ ಬೇರೆ ನಮೂನೆಗಳ ಪರಸ್ಪರ ವ್ಯತ್ಯಾಸಗಳೊಂದಿಗೆ, ಕಾರ್ಮಿಕ ತನ್ನ ಸಮಸ್ಯೆಗಳನ್ನು ವೈಯುಕ್ತಿಕವಾಗಿ ಪರಿಹರಿಸಲು ನೆರವಾಗಲು ಮಾತ್ರ ಪ್ರಯತ್ನಿಸದೆ ತನ್ನ ಸಾಮಾಜಿಕ ವರ್ಗದ ಸದಸ್ಯನಾಗಿಯೂ ಸಮಸ್ಯೆಗಳನ್ನು ಪರಿಹರಿಸಲು ಕಾರ್ಮಿಕ ಶಿಕ್ಷಣ ಪ್ರಯತ್ನಿಸುತ್ತದೆ. ಒಟ್ಟಿನ ಮೇಲೆ ವಿಕಸಿತ ವ್ಯಕ್ತಿತ್ವಕ್ಕಾಗಿ ಕಾರ್ಮಿಕನ ವ್ಯಕ್ತಿತ್ವ ವಿಕಾಸ ಗೊಳ್ಳಬೇಕು. ಅವನು ದಕ್ಷನಾಗಬೇಕು, ಏಳಿಗೆ ಹೊಂದಬೇಕು, ಪರಿಣಾಮಕಾರಿ ಕಾರ್ಮಿಕನಾಗಬೇಕು, ಸಮುದಾಯದಲ್ಲಿ ಬೆರತು ಸಂತುಷ್ಟನಾಗಿ ಸಮಗ್ರ ಜೀವನ ನಡೆಸುವ ಸತ್ಪ್ರಜೆಯಾಗಬೇಕು, ವ್ಯಕ್ತಿಗಳ ಹಿತಾಸಕ್ತಿಗಳನ್ನು ರಕ್ಷಿಸಬಲ್ಲ ಹೊಣೆಯರಿತ ಕಾರ್ಮಿಕ ವರ್ಗದ ಸದಸ್ಯ ನಾಗಿ ರೂಪುಗೊಳ್ಳಬೇಕು.

ಕಾರ್ಮಿಕರು, ಕಾರ್ಮಿಕರಿಂದ, ಕಾರ್ಮಿಕರ ಪ್ರಯೋಜನಕ್ಕಾಗಿ ಇರುವ ಶಿಕ್ಷಣವೇ ಕಾರ್ಮಿಕರ ಶಿಕ್ಷಣ.

ಕಾರ್ಮಿಕ ಶಿಕ್ಷಣ ಕುರಿತ ಚಿಂತನೆಯಿಂದ ವ್ಯಾಪಕವಾದ ಮೌಲ್ಯಗಳ ವರ್ಗೀಕರಣದ ಪರಿಚಯ ಉಂಟಾಗುತ್ತದೆ. ಕಾರ್ಮಿಕ ಸಂಘಗಳ ಅಗತ್ಯಗಳನ್ನು ಪೂರೈಸುವುದರೊಂದಿಗೆ ಆರಂಭವಾಗಿ ಕಾರ್ಮಿಕರು ವಿಕಸಿತ ವ್ಯಕ್ತಿಗಳಾಗುವತನಕ ಈ ಮೌಲ್ಯಗಳು ಹುಟ್ಟಿವೆ. ಜೀವನವು ಎಷ್ಟು ವಿಶಾಲವಾಗಿದೆಯೋ, ಅದನ್ನು ಈ ಶಿಕ್ಷಣ ಅನೇಕ ರೀತಿಯಾಗಿ ನಿರೂಪಿಸುತ್ತದೆ. ಕಾರ್ಮಿಕ ಸಂಘಗಳ, ಅವುಗಳ ಸದಸ್ಯರ ಹಾಗೂ ಕಾರ್ಮಿಕ ಚಳವಳಿಯ ಸಮಸ್ಯೆಗಳನ್ನು ಪರಿಹರಿಸಲು ಸಹಾಯ ಮಾಡುತ್ತದೆ. ಕಾರ್ಮಿಕರು ಪರಿಣಾಮಕಾರಿಯಾಗಿ ಸಂತೃಪ್ತ ಜೀವನ ಸಾಗಿಸಲು ಇದು ಒಂದು ಸಾಧನ ಎಂದು ಅಂತರ ಅಮೆರಿಕಾ ಪ್ರಾದೇಶಿಕ ಕಾರ್ಮಿಕ ಶಿಕ್ಷಣ ಸಂಸ್ಥೆ ಹೇಳುತ್ತದೆ.

ಪ್ರಾಥಮಿಕ ವಿದ್ಯಾಭ್ಯಾಸದ ತಳಹದಿಯಾಗಿರುವ ಓದು, ಬರಹ ಮತ್ತು ಲೆಕ್ಕದ ಬೋಧನೆಗೆ ಮಾತ್ರ ಕಾರ್ಮಿಕ ಶಿಕ್ಷಣ ಸೀಮಿತವಾಗಿಲ್ಲ. ಕರ್ತವ್ಯ ಮತ್ತು ಹಕ್ಕು ಬಾಧ್ಯತೆ, ಪೌರ ನೀತಿ, ಪ್ರಜಾಧರ್ಮ, ಸಾಮಾಜಿಕ ಪರಿಸ್ಥಿತಿ, ಮುಂತಾದವುಗಳ ಅರಿವು ಮೂಡಿಸುವುದು ವಿಶೇಷವಾಗಿ ಕಾರ್ಮಿಕ ಶಿಕ್ಷಣದ ಉದ್ದೇಶಗಳು.

ಈ ಮೇಲಿನ ಎಲ್ಲಾ ಚಿಂತನೆಗಳಿಂದ ತಿಳಿಯುವುದೇನೆಂದರೆ, ಕಾರ್ಮಿಕ ಶಿಕ್ಷಣದ ಉದ್ದೇಶಗಳು ಈ ಕೆಳಗಿನಂತಿವೆ :

(1) ಗ್ರಾಮೀಣ ಕಾರ್ಮಿಕರೂ ಸೇರಿದಂತೆ ಎಲ್ಲಾ ವರ್ಗಗಳ ಕಾರ್ಮಿಕರಲ್ಲಿ ರಾಷ್ಟ್ರಪ್ರೇಮ, ರಾಷ್ಟ್ರದ ಐಕತೆ, ಅನ್ಯೋನ್ಯತೆ, ಮತೀಯ ಸೌಹಾರ್ದ, ರಾಷ್ಟ್ರೀಯ ಭಾವೈಕ್ಯ, ಜಾತ್ಯತೀತತೆಯ ಭಾವನೆ ಗಳನ್ನು ಮತ್ತು ಭಾರತೀಯನಾಗಿರುವ ಹೆಮ್ಮೆಯ ಭಾವನೆಯನ್ನು ಬಲ ಗೊಳಿಸುವುದು.

(2) ರಾಷ್ಟ್ರದ ಘೋಷಿತ ಧ್ಯೇಯಗಳಿಗನುಸಾರವಾಗಿ ನಡೆಯು ತ್ತಿರುವ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಉತ್ತಮ ರೀತಿ ಯಲ್ಲಿ ಭಾಗವಹಿಸುವಂತೆ ಗ್ರಾಮೀಣ ಕಾರ್ಮಿಕರೂ ಸೇರಿದಂತೆ ಎಲ್ಲಾ ವರ್ಗಗಳ ಕಾರ್ಮಿಕರನ್ನು ಸಜ್ಜುಗೊಳಿಸುವುದು.

[ಪುಟ 21ರಲ್ಲಿ ಮುಂದುವರಿದಿದೆ

ಗ್ರಾಮೀಣ ಬ್ಯಾಂಕುಗಳು

ಡಾ. ಉಳಿವೆಪ್ಪ, ಎಚ್. ಎಚ್. ಮತ್ತು ಬಜರಂಗ ಎಸ್. ಜಾಧವ್

ನಮ್ಮ ದೇಶ ಹಳ್ಳಿಗಳಿಂದ ಕೂಡಿದ ಒಕ್ಕಲುತನ ಪ್ರಧಾನವಾದ ರಾಷ್ಟ್ರ. ನಮ್ಮ ದೇಶದ ಒಟ್ಟು ಜನಸಂಖ್ಯೆಯ ಸುಮಾರು ಶೇಕಡಾ 74.3ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿಯೇ ವಾಸವಾಗಿದ್ದಾರೆ ಹಾಗೂ ಸುಮಾರು ಶೇಕಡಾ 68ಕ್ಕಿಂತಲೂ ಹೆಚ್ಚು ಜನರು ಒಕ್ಕಲುತನವನ್ನೇ ಅವಲಂಬಿತರಾಗಿದ್ದಾರೆ. ರಾಷ್ಟ್ರೀಯ ಆದಾಯದಲ್ಲಿ ಒಕ್ಕಲುತನದ ಪಾಲು ಶೇಕಡ 32 ರಷ್ಟು ಇದ್ದು, ನಮ್ಮ ದೇಶದ ಬೆನ್ನಲುಬಾಗಿದೆ. ನಮ್ಮ ದೇಶದ ಆರ್ಥಿಕ ಅಭಿವೃದ್ಧಿ ನಮ್ಮ ದೇಶದ ಒಕ್ಕಲುತನದ ಪ್ರಗತಿಯನ್ನು ಅವಲಂಬಿಸಿದೆ. ಒಕ್ಕಲುತನದ ಪ್ರಗತಿ ನಮ್ಮ ದೇಶದ ಗ್ರಾಮೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿಯನ್ನು ಅವಲಂಬಿಸಿದೆ. ದುರದೃಷ್ಟದಿಂದ, ನಮ್ಮ ದೇಶದ ಒಕ್ಕಲುತನ ಹಿಂದುಳಿದುದಾಗಿದ್ದು, ಬಹಳಷ್ಟು ಗ್ರಾಮೀಣ ಜನತೆಯ ಆರ್ಥಿಕ ಸ್ಥಿತಿ ಚಿಂತಾಜನಕವಾಗಿದೆ.

ನಮ್ಮ ರಾಷ್ಟ್ರದ ಗ್ರಾಮೀಣ ಪ್ರದೇಶಗಳಲ್ಲಿ ಸುಮಾರು ಶೇಕಡ 33.4ರಷ್ಟು (ರಾಷ್ಟ್ರದ ಸರಾಸರಿ ಶೇ. 29.9) ಜನರು ಬಡತನದ ರೇಖೆಯ ಕೆಳಗೆ ಜೀವಿಸುತ್ತಿದ್ದಾರೆ. ಒಟ್ಟು ಗ್ರಾಮೀಣ ಜನಸಂಖ್ಯೆಯ ಸುಮಾರು ಶೇ. 80 ರಷ್ಟು ಜನರು ಚಿಕ್ಕ ರೈತರು, ಅತೀ ಚಿಕ್ಕ ರೈತರು, ಒಕ್ಕಲುತನದ ಕೂಲಿಕಾರರು. ಇವರಲ್ಲಿ ಅತೀ ಚಿಕ್ಕ ರೈತರ ಸಂಖ್ಯೆ 56 ದಶಲಕ್ಷ ; ಕೂಲಿಕಾರ ಸಂಖ್ಯೆ 73.8 ದಶಲಕ್ಷಗಳಿಗೂ ಹೆಚ್ಚು ಇದೆ. ಗ್ರಾಮೀಣ ಪ್ರದೇಶದ ಒಟ್ಟು ಸುಮಾರು 78.4 ದಶಲಕ್ಷ ಕುಟುಂಬಗಳ ಪೈಕಿ ಸುಮಾರು 35.17 ದಶಲಕ್ಷಕ್ಕಿಂತ ಹೆಚ್ಚು ಕುಟುಂಬಗಳು ಭೂರಹಿತ ಹಾಗೂ ಒಂದು ಎಕರೆಗಿಂತ ಕಡಿಮೆ ಭೂಮಿಯನ್ನು ಹೊಂದಿದ ಕುಟುಂಬಗಳಾಗಿವೆ. ಇವರೆಲ್ಲರೂ ಆರ್ಥಿಕ ಸಮಸ್ಯೆಯನ್ನು ಬಹು ದಿನಗಳಿಂದ ಎದುರಿಸುತ್ತಲೇ ಬಂದವರು ಮತ್ತು ಸ್ಥಳೀಯ ಸಾಹುಕಾರರ ಹಾಗೂ ವ್ಯವಹಾರಸ್ಥರ ಋಣದಲ್ಲಿಯೇ ಮುಳುಗಿ ಅವರ ವಿವಿಧ ರೀತಿಯ ಶೋಷಣೆಗಳಿಗೆ ಒಳಪಟ್ಟವರು. ಇವರ ವಾರ್ಷಿಕ ತಲಾ ಆದಾಯ ಅತೀ ಕಡಿಮೆ. ಇತ್ತೀಚಿನ ಅಂದಾಜಿನಂತೆ ನಿವ್ವಳ ತಲಾ ಆದಾಯ ಭಾರತದಲ್ಲಿ ಸರಾಸರಿ ರೂ. 2,863-00 (1980-81 ರ ಬೆಲೆಯ ಅನ್ವಯ) ಇರುತ್ತದೆ. 1995-96ರ ಬೆಲೆಗಳ ಅನ್ವಯ ಇದು ಸುಮಾರು ರೂ. 10,500-00 ಆಗುತ್ತದೆ. ಗ್ರಾಮೀಣ ಪ್ರದೇಶದಲ್ಲಿ ತಲಾ ಆದಾಯ ರಾಷ್ಟ್ರದ ಸರಾಸರಿ ಅಂದಾಜಿಗಿಂತಲೂ ಕಡಿಮೆಯಿದೆ. ಪ್ರತಿ ವರ್ಷವೂ ಸುಮಾರು ರೂ. 2,600 ಕೋಟಿಯಷ್ಟು ವಿವಿಧ ರೀತಿಯ ಕೃಷಿ ಹಣಕಾಸಿನ ಆವಶ್ಯಕತೆಯಿದ್ದು, ಸರಿಯಾದ ಸಮಯದಲ್ಲಿ ಸಾಕಷ್ಟು ಹಣಕಾಸು ಲಭ್ಯವಾಗದೆ, ಗಗನಕ್ಕೇರುತ್ತಿರುವ ಬೆಲೆ, ಇಳಿಯುತ್ತಿರುವ ಆದಾಯ, ಹೆಚ್ಚುತ್ತಿರುವ ಆವಶ್ಯಕತೆಗಳೊಂದಿಗೆ, ಉತ್ಪಾದನೆಗೆ ಬಲವಾದ ಪೆಟ್ಟು ಬೀಳುತ್ತಿದ್ದು, ಗ್ರಾಮೀಣ ಜನತೆಗೆ ಉಸಿರು ಕಟ್ಟಿದಂತಾಗಿದೆ. ರಾಷ್ಟ್ರದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವುದರ ಜೊತೆಗೆ ರಾಷ್ಟ್ರವನ್ನೇ ಬಲಿಷ್ಠಪಡಿಸುವುದರಲ್ಲಿ ಗ್ರಾಮೀಣ ಪ್ರದೇಶಗಳ ಪಾತ್ರವನ್ನು ಅಲಕ್ಷ್ಯಮಾಡುವಂತಿಲ್ಲ. ಇಂದು ಪ್ರತಿಯೊಬ್ಬರೂ ಆ ಕಡೆಗೆ ಗಮನ ಹರಿಸುವುದು ಅವಶ್ಯಕವಾಗಿದೆ.

ಗ್ರಾಮೀಣ ಬ್ಯಾಂಕುಗಳ ಆವಶ್ಯಕತೆ ಹಾಗೂ ಹುಟ್ಟು

ಗ್ರಾಮೀಣ ಪ್ರದೇಶದ ಕೃಷಿ ಹಣಕಾಸಿನ ಸಮಸ್ಯೆ ಬಹುದಿನಗಳ ಸಮಸ್ಯೆ. ಈ ಸಮಸ್ಯೆಯನ್ನು ಹೋಗಲಾಡಿಸುವ ದಿಸೆಯಲ್ಲಿ 1904 ರಲ್ಲಿ ಸಹಕಾರಿ ಚಳವಳಿಯನ್ನು ಪ್ರಾರಂಭಿಸಿ, ವಿವಿಧ ರೀತಿಯ ಕೃಷಿ ಪತ್ತನ್ನು ಒಕ್ಕಲುತನದ ಅಭಿವೃದ್ಧಿಗಾಗಿ ಒದಗಿಸುವುದರ ಸಲುವಾಗಿ ಅನೇಕ ವಿವಿಧ ಸಹಕಾರಿ ಬ್ಯಾಂಕುಗಳನ್ನು ಸ್ಥಾಪಿಸಲಾಯಿತು. ಕೃಷಿ ಪತ್ತನ್ನು ಒದಗಿಸುವಲ್ಲಿ ಅವುಗಳ ಕಾರ್ಯ ಪ್ರಗತಿದಾಯಕವಿಲ್ಲದ್ದರಿಂದ, ಪುನಃ ಇದೇ ಉದ್ದೇಶಕ್ಕಾಗಿ 1969ರಲ್ಲಿ 14 ವಾಣಿಜ್ಯ ಬ್ಯಾಂಕುಗಳನ್ನು ರಾಷ್ಟ್ರೀಕರಿಸಲಾಯಿತು. ಆದರೆ, ವಾಣಿಜ್ಯ ಬ್ಯಾಂಕುಗಳು ಹೆಚ್ಚಾಗಿ ನಗರಗಳಲ್ಲಿಯೇ ಕೇಂದ್ರೀಕರಿಸಿದ್ದು ತಮ್ಮ ಗಮನವನ್ನು ಗ್ರಾಮೀಣ ಪ್ರದೇಶಗಳಿಗೆ ಹರಿಸುವಲ್ಲಿ ಮತ್ತು ಗ್ರಾಮೀಣ ಜನರ ಆವಶ್ಯಕತೆಗಳ ಪ್ರಕಾರ ಕೃಷಿಗೆ ಹಾಗೂ ಕೃಷಿ ಸಂಬಂಧಸಿದ ಕಸುಬುಗಳಿಗೆ ಪತ್ತನ್ನು ಒದಗಿಸಿ, ಜನರಿಗೆ ವಿವಿಧ ಸೌಲಭ್ಯಗಳನ್ನು ನೀಡುವಲ್ಲಿ ತಮ್ಮ ಹೆಚ್ಚಿನ ಆಸಕ್ತಿಯನ್ನು ತೋರಿಸಿದರೂ, ಹೆಚ್ಚುತ್ತಿರುವ ಜನರ ಆವಶ್ಯಕತೆಗಳನ್ನು ಪೂರೈಸುವುದರಲ್ಲಿ ವಿಫಲವಾಗತೊಡಗಿದವು. ಈಗ ಎಲ್ಲಾ ಸಹಕಾರಿ ಬ್ಯಾಂಕುಗಳು ಮತ್ತು ವಾಣಿಜ್ಯ ಬ್ಯಾಂಕುಗಳು ಸೇರಿ ನಮ್ಮ ರಾಷ್ಟ್ರದ ಗ್ರಾಮೀಣ ಪ್ರದೇಶದ ಒಟ್ಟು ಕೃಷಿ ಪತ್ತಿನ ಅವಶ್ಯಕತೆಯ ಸುಮಾರು ಶೇ 40 ಕ್ಕಿಂತಲೂ ಕಡಿಮೆ ಕೃಷಿ ಪತ್ತನ್ನು ಒದಗಿಸುತ್ತಿರುವುದರಿಂದ, ಇದನ್ನು ಕಂಡುಕೊಳ್ಳಬಹುದು. ಅಲ್ಲದೆ ವಾಣಿಜ್ಯ ಬ್ಯಾಂಕುಗಳಿಂದ ಸೌಲಭ್ಯಗಳ ಹೆಚ್ಚಿನ ಪಾಲು ದೊಡ್ಡ ರೈತರಿಗೆ ಸಿಗುತ್ತಿದ್ದು, ಚಿಕ್ಕ ರೈತರು, ಅತೀ ಚಿಕ್ಕ ರೈತರು ಮತ್ತು ಕೂಲಿಕಾರರು ಸೌಲಭ್ಯಗಳನ್ನು ಪಡೆಯುವಲ್ಲಿ ವಂಚಿತರಾದರು. ಸ್ವಾತಂತ್ರ್ಯ ಬಂದಾಗಿನಿಂದಲೂ ಗ್ರಾಮೀಣ ಜನತೆಗಾಗಿಯೇ ಕೆಲವೊಂದು ಮೀಸಲಾದ ಹಣಕಾಸಿನ ಸಂಸ್ಥೆಗಳ ಆವಶ್ಯಕತೆ ಇತ್ತು. ಈ ಸಂದರ್ಭದಲ್ಲಿ ಪುನಃ ಅವುಗಳ ಆವಶ್ಯಕತೆ ಹೆಚ್ಚಾಗಿ ಕಂಡು ಬಂದಿತು. ಗ್ರಾಮೀಣ ಜನತೆಗೆ ;

ಅದರಲ್ಲೂ ಚಿಕ್ಕ ರೈತರಿಗೆ, ಅತೀ ಚಿಕ್ಕ ರೈತರಿಗೆ, ಕೂಲಿಕಾರರಿಗೆ, ಕರಕುಶಲಕಾರರಿಗೆ, ನೇರವಾಗಿ ಹಣ ಕಾಸಿನ ಸೌಲಭ್ಯವನ್ನು ಒದಗಿಸಿ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅವರನ್ನು ಬಡತನ ರೇಖೆಯ ಮೇಲೆ ತರುವುದರ ದಿಶೆಯಲ್ಲಿ 1972ರ ಬ್ಯಾಂಕಿನ ಆಯೋಗದ ಮತ್ತು "ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕ್ರಿಯಾ ಸಮಿತಿ"ಯ ಅಧ್ಯಕ್ಷರಾದ ಶ್ರೀ ಎಂ. ನರಸಿಂಹಮ್‌ರವರ ಶಿಫಾರಸ್ಸುಗಳ ಪ್ರಕಾರ 1975ನೇ ಸಪ್ಟೆಂಬರ್ 26ರಂದು ಭಾರತ ಸರಕಾರದಿಂದ ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಗಳನ್ನು ಸ್ಥಾಪಿಸಲು ಅನುಮತಿ ದೊರೆಯಿತು. ಮುಂದೆ 1976 ರಲ್ಲಿ "ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳ ಕಾಯ್ದೆ" 1976 ಅಸ್ತಿತ್ವದಲ್ಲಿ ಬಂತು. ಎಲ್ಲಾ ಗ್ರಾಮೀಣ ಬ್ಯಾಂಕುಗಳು ಹಾಗೂ ಅವುಗಳ ಕಾರ್ಯ ವ್ಯಾಪ್ತಿ ಅದರ ಚೌಕಟ್ಟಿನಲ್ಲಿರುವಂತೆ ಮಾಡಲಾಯಿತು.

ಗ್ರಾಮೀಣ ಬ್ಯಾಂಕುಗಳ ಮುಖ್ಯ ಉದ್ದೇಶಗಳು

ಗ್ರಾಮೀಣ ಬ್ಯಾಂಕುಗಳ ಹಲವಾರು ಉದ್ದೇಶಗಳಲ್ಲಿ ಈ ಕೆಳಗಿನವುಗಳು ಅತೀ ಮುಖ್ಯ ಉದ್ದೇಶಗಳಾಗಿವೆ :

1. ಗ್ರಾಮೀಣ ಪ್ರದೇಶದ ಒಕ್ಕಲುತನ ಹಾಗೂ ಇತರ ಅಭಿವೃದ್ಧಿ ಕಾರ್ಯಗಳಿಗಾಗಿ ಹಣಕಾಸಿನ ಸೌಲಭ್ಯವನ್ನು ಗ್ರಾಮೀಣ ಜನತೆಗೆ ಹೆಚ್ಚಾಗಿ ಚಿಕ್ಕ ರೈತರಿಗೆ, ಅತೀ ಚಿಕ್ಕ ರೈತರಿಗೆ, ಒಕ್ಕುಲತನ ಕೂಲಿಕಾರರಿಗೆ, ಕರಕುಶಲಕಾರರಿಗೆ ಹಾಗೂ ಇತರ ಚಿಕ್ಕ ಉದ್ದಿಮೆದಾರರಿಗೆ ಒದಗಿಸುವುದು.

2. ವಿವಿಧ ಮೂಲಗಳಿಂದ ಬೇರೆ ಬೇರೆ ರೀತಿಯಿಂದ ಹಣಕಾಸಿನ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಸ್ಥಾನಿಕ ಸಾಹುಕಾರರ ಹಾಗೂ ವ್ಯವಹಾರಸ್ಥರ ಹಿಡಿತ-ಶೋಷಣೆಗಳಿಂದ ಜನರನ್ನು ಮುಕ್ತಗೊಳಿಸುವುದು.

3. ಗ್ರಾಮೀಣ ಬಡವರ ಹಾಗೂ ಹಿಂದುಳಿದ ವರ್ಗದ ಜನತೆಯ ಹೆಚ್ಚುತ್ತಿರುವ ಆವಶ್ಯಕತೆಗಳನ್ನು ಈಡೇರಿಸುವುದು.

4. ಅತೀ ಹಿಂದುಳಿದ ಬ್ಯಾಂಕುಗಳ ಸೌಲಭ್ಯಗಳನ್ನು ಹೊಂದದ, ಅತೀ ಚಿಕ್ಕ ಗ್ರಾಮೀಣ ಪ್ರದೇಶಗಳಲ್ಲೂ ಬ್ಯಾಂಕುಗಳನ್ನು ಸ್ಥಾಪಿಸಿ ನೇರವಾಗಿ ಜನತೆಗೆ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಬ್ಯಾಂಕುಗಳ ಮತ್ತು ಜನರ ಅಂತರವನ್ನು ಕಡಿಮೆಗೊಳಿಸಿ ಮಧ್ಯಸ್ಥಗಾರರನ್ನು (ದಲ್ಲಾಳಿಗಳನ್ನು) ಹೋಗಲಾಡಿಸುವುದು.

5. ಬ್ಯಾಂಕುಗಳು ನೀಡುವ ಸೌಲಭ್ಯಗಳು ನೇರವಾಗಿ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗವಾಗುವಂತೆ ಮೇಲ್ವಿಚಾರಣೆ ನಡೆಸುವುದು.

6. ಸರಕಾರದ ವಿವಿಧ ಯೋಜನೆಗಳ ಮೂಲಕ ಜನರಿಗೆ ದೊರೆಯುವ ಸೌಲಭ್ಯಗಳನ್ನು ಬ್ಯಾಂಕುಗಳ ಮೂಲಕವೇ ಒದಗಿಸುವುದು.

7. ವಿವಿಧ ಆಕರ್ಷಕ ಯೋಜನೆಗಳನ್ನು ಅಳವಡಿಸುವುದರ ಮೂಲಕ ಗ್ರಾಮೀಣ ಜನತೆಯಲ್ಲಿ ಉಳಿತಾಯ ಮಾಡುವ ಹವ್ಯಾಸಗಳನ್ನು ಬೆಳೆಸುವುದು.

8. ಜನರಿಗೆ ಉದ್ಯೋಗ ಅವಕಾಶಗಳನ್ನು ಕಲ್ಪಿಸಿಕೊಡುವುದು ಹಾಗೂ ಅವರ ಉದ್ದಿಮೆ ಮತ್ತು ಸಂಘಟನೆಯ ಶಕ್ತಿಯನ್ನು ಅಭಿವೃದ್ಧಿಗೊಳಿಸುವುದು.

9. ಸರಕಾರದ ಅಭಿವೃದ್ಧಿ ಯೋಜನೆಗಳನ್ನು ಸರ್ಕಾರದ ಆದೇಶದಂತೆ ತನ್ನ ಕಾರ್ಯ ಚಟುವಟಿಕೆಗಳಲ್ಲಿ ಅಳವಡಿಸಿಕೊಂಡು ಜನರಿಗೆ ಅವುಗಳ ಉಪಯೋಗ ತಲುಪುವಂತೆ ನೋಡಿಕೊಳ್ಳುವುದು.

10. ವಾಣಿಜ್ಯ ಬ್ಯಾಂಕಿನಂತೆ ಬ್ಯಾಂಕಿನ ಎಲ್ಲಾ ಸೌಲಭ್ಯಗಳನ್ನು ಜನರಿಗೆ ಒದಗಿಸುವುದು.

ಗ್ರಾಮೀಣ ಬ್ಯಾಂಕುಗಳ ಸ್ವರೂಪ

ಹೆಸರಿಗೆ ತಕ್ಕಂತೆ ಈ ಬ್ಯಾಂಕುಗಳ ಸ್ಥಾಪನೆ ಕೇವಲ ಗ್ರಾಮೀಣ ಪ್ರದೇಶಗಳಿಗೆ ಮೀಸಲಾಗಿದೆ. ಒಂದು ಅಥವಾ ಎರಡು ಜಿಲ್ಲೆಗಳ ಪ್ರದೇಶ ಮಾತ್ರ ಪ್ರತಿಯೊಂದು ಬ್ಯಾಂಕಿನ ಕಾರ್ಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಅಲ್ಲದೆ, ವಾಣಿಜ್ಯ ಬ್ಯಾಂಕು ಅಥವಾ ಯಾವುದೇ ಬ್ಯಾಂಕಿನ ಸೌಲಭ್ಯ ಇಲ್ಲದ ಪ್ರದೇಶಗಳಲ್ಲಿ ಮಾತ್ರ ಈ ಬ್ಯಾಂಕುಗಳು ತಮ್ಮ ಶಾಖೆಗಳನ್ನು ತೆರೆಯುತ್ತವೆ. ಇವು ಸಂಪೂರ್ಣ ಸರ್ಕಾರಿ ಸ್ವಾಮಿತ್ವದ ಪರಿಶಿಷ್ಟ ಬ್ಯಾಂಕುಗಳು.

ಗ್ರಾಮೀಣ ಬ್ಯಾಂಕುಗಳ ಪ್ರಗತಿ

1. ಬ್ಯಾಂಕುಗಳ ಸಂಖ್ಯೆಯಲ್ಲಿ ಹೆಚ್ಚಳ

ಸಂಪೂರ್ಣ ಸರ್ಕಾರಿ ಸ್ವಾಮಿತ್ವದಲ್ಲಿ 6 ಪ್ರಾದೇಶಿಕ ಗ್ರಾಮೀಣ ಬ್ಯಾಂಕುಗಳು ವಿವಿಧ ರಾಷ್ಟ್ರೀಕೃತ ಬ್ಯಾಂಕುಗಳ ಆಶ್ರಯದಲ್ಲಿ ಅಕ್ಟೋಬರ್ 2, 1975ರಂದು ಉದಯವಾದವು. 1979ರ ಅಂತ್ಯಕ್ಕೆ ಇವುಗಳ ಸಂಖ್ಯೆ 60ಕ್ಕೆ ಏರಿತು. 1980ರ ಅಂತ್ಯಕ್ಕೆ ಈ ಸಂಖ್ಯೆ 85ನ್ನು ತಲುಪಿತು. 1976ರಲ್ಲಿ 34 ಬ್ಯಾಂಕುಗಳಿದ್ದವು. ಮುಂದೆ ಮೂರು ವರ್ಷಗಳ ಅವಧಿಯಲ್ಲಿ ಕೆಲವೊಂದು ತಾಂತ್ರಿಕ ಕಾರಣಗಳಿಂದ ಪ್ರಗತಿ ಕುಂಠಿತವಾಯಿತು. 1977 ರಲ್ಲಿ "ದಂತಪಾಲ ರಿವ್ಯೂ ಕಮಿಟಿಯು" ಗ್ರಾಮೀಣ ಬ್ಯಾಂಕುಗಳ ಆವಶ್ಯಕತೆಯನ್ನು ಪರಿಶೀಲಿಸಿ, ಶೀಘ್ರವಾಗಿ ಅವುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಲು ಶಿಫಾರಸ್ಸು ಮಾಡಿದ್ದರಿಂದ ಪುನಃ 1980ರ ವೇಳೆಗೆ ಬ್ಯಾಂಕುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡುಬಂದಿತು. 1980ರ ಅಂತ್ಯಕ್ಕೆ ನಮ್ಮ ರಾಷ್ಟ್ರದ ಸುಮಾರು 160 ಜಿಲ್ಲೆಗಳನ್ನು ಅವುಗಳ ವ್ಯಾಪ್ತಿಯಲ್ಲಿ ತರಲಾಯಿತು. ಅವುಗಳ ಪ್ರಗತಿ ಇದೇ ಮಟ್ಟದಲ್ಲಿ ಮುಂದುವರಿದು 1986ರ ಅಂತ್ಯಕ್ಕೆ ಇವುಗಳ ಸಂಖ್ಯೆ 194ಕ್ಕೆ ತಲುಪಿ, ಸುಮಾರು 351 ಜಿಲ್ಲೆಗಳನ್ನು ತಮ್ಮ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡಿವೆ. ಅಲ್ಲದೆ, ಮಾರ್ಚ್ 1996ರ ಅಂತ್ಯಕ್ಕೆ ತಮ್ಮ ಸಂಖ್ಯೆಯನ್ನು 196ನ್ನು ಏರಿಸಿ ಸುಮಾರು 427 ಜಿಲ್ಲೆಗಳನ್ನು ತಮ್ಮ ಕಾರ್ಯವ್ಯಾಪ್ತಿಯಲ್ಲಿ ತಂದಿವೆ.

2. ಬ್ಯಾಂಕಿನ ಶಾಖೆಗಳಲ್ಲಿ ಭಾರಿ ಹೆಚ್ಚಳ

ಬ್ಯಾಂಕುಗಳ ಪ್ರಗತಿ ಹಾಗೂ ಗ್ರಾಮೀಣ ಅಭಿವೃದ್ಧಿಯಲ್ಲಿ ಅವುಗಳ ಪಾತ್ರವನ್ನು ಹೆಚ್ಚುತ್ತಿರುವ ಅವುಗಳ ಶಾಖೆಗಳಿಂದ ಗುರುತಿಸ ಬಹುದು. 1976-96ರ ಅವಧಿಯಲ್ಲಿ ಗ್ರಾಮೀಣ ಬ್ಯಾಂಕ್ ಶಾಖೆಗಳ ಸಂಖ್ಯೆಯಲ್ಲಿ ಭಾರೀ ಹೆಚ್ಚಳ ಕಂಡು ಬಂದಿದೆ. 1976ರ ಅಂತ್ಯಕ್ಕೆ, 40 ಬ್ಯಾಂಕುಗಳು 548 ಶಾಖೆಗಳನ್ನು ಹೊಂದಿ ಕಾರ್ಯಮಾಡುತ್ತಿದ್ದವು. ಆದರೆ 1996ರ ಜೂನ್ ಅಂತ್ಯಕ್ಕೆ 196 ಬ್ಯಾಂಕುಗಳು 14, 516 ಶಾಖೆಗಳನ್ನು ಹೊಂದಿದ್ದುವು. ಅಲ್ಲದೆ, ಸುಮಾರು 20 ಬ್ಯಾಂಕುಗಳು ಅತೀ ಉತ್ತಮ ರೀತಿಯಿಂದ ಕಾರ್ಯ ಮಾಡುವ ನೂರಕ್ಕಿಂತಲೂ ಹೆಚ್ಚು ಶಾಖೆಗಳನ್ನು ಪ್ರತಿಯೊಂದೂ ಹೊಂದಿದ್ದು, ಒಟ್ಟು 2,329 ಶಾಖೆಗಳನ್ನು ಹೊಂದಿವೆ. ಒಟ್ಟು ಶಾಖೆಗಳ ಸುಮಾರು ಶೇ. 50 ರಷ್ಟು ಶಾಖೆಗಳು ಕೇವಲ ಮೂರು ರಾಜ್ಯಗಳಲ್ಲಿಯೇ ಉದಯಿಸಿವೆ. ಇತ್ತೀಚಿನ ಅಂಕಿಸಂಖ್ಯೆಯ ಪ್ರಕಾರ ಉತ್ತರ ಪ್ರದೇಶ 2,905, ಬಿಹಾರ 1,777, ಮತ್ತು ಮಧ್ಯ ಪ್ರದೇಶ 1,572 ಶಾಖೆಗಳನ್ನು ಹೊಂದಿವೆ. ಕರ್ನಾಟಕದಲ್ಲಿ 1984ನೇ ಅಕ್ಟೋಬರ್ ಅಂತ್ಯಕ್ಕೆ 12 ಬ್ಯಾಂಕುಗಳು–387 ಶಾಖೆಗಳೊಂದಿಗೆ—18 ಜಿಲ್ಲೆಗಳಲ್ಲಿ ಕಾರ್ಯ ಮಾಡುತ್ತಿದ್ದು, 1985ರ ಮಾರ್ಚಿ ಅಂತ್ಯಕ್ಕೆ ಪುನಃ ಒಂದು ಹೊಸ ಗ್ರಾಮೀಣ ಬ್ಯಾಂಕು ಉದಯಿಸಿ ಸುಮಾರು 100 ಶಾಖೆಗಳು ಹೆಚ್ಚಾಗಿವೆ. ಇಂದು ಇವು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕೆಲಸ ಮಾಡುತ್ತಿದ್ದು, ಎಲ್ಲಾ ಗ್ರಾಮೀಣ ಪ್ರದೇಶಗಳನ್ನು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ತಂದಿವೆ.

3. ಬ್ಯಾಂಕುಗಳ ಠೇವಣಿಗಳಲ್ಲಿ ಪ್ರಗತಿ

ಈ ಬ್ಯಾಂಕುಗಳು ಸಂಚಯಿಸಿದ ಹಣದ ಮೊತ್ತದಲ್ಲಿ ಆದ ಭಾರೀ ಹೆಚ್ಚಳವೂ ಅವುಗಳ ಪ್ರಗತಿದಾಯಕ ಚಟುವಟಿಕೆಯನ್ನು ಬಿಂಬಿಸುತ್ತದೆ. 1976ರ ಅಂತ್ಯಕ್ಕೆ ಸಂಚಯಿಸಿದ ಒಟ್ಟು ಹಣ ರೂ. 7.72 ಕೋಟಿ. ಆದರೆ 1990 ಮಾರ್ಚ್ ಅಂತ್ಯಕ್ಕೆ ಸಂಚಯಿಸಿದ ಒಟ್ಟು ಹಣ ರೂ 4,150.52 ಕೋಟಿಗಳಿಗೇರಿದ್ದು, ಪುನಃ 1996ನೇ ಮಾರ್ಚ್‌ನ ಅಂತ್ಯಕ್ಕೆ ರೂ. 14,187.90 ಕೋಟಿ ಗಳಿಗೇರಿದೆ. ಪ್ರತಿಯೊಂದು ಬ್ಯಾಂಕಿನ ಹಾಗೂ ಅದರ ಪ್ರತಿಯೊಂದು ಶಾಖೆಯ ಸಂಚಯಿಸಿದ ಮೊತ್ತ (ಡಿಪಾಜಿಟ್) 1976ರ ಅಂತ್ಯಕ್ಕೆ ಕ್ರಮವಾಗಿ ರೂ. 19.30 ಲಕ್ಷ ಮತ್ತು ರೂ. 1.58 ಲಕ್ಷ ಇದ್ದು, 1996ರ ಮಾರ್ಚ್ ಅಂತ್ಯಕ್ಕೆ ಕ್ರಮವಾಗಿ ರೂ. 7,238.72 ಲಕ್ಷ ಮತ್ತು ರೂ. 97.87 ಲಕ್ಷ ಗಳಿಗೇರಿದೆ. ಅಂದರೆ ಈ ಅವಧಿಯಲ್ಲಿ (1976 ಮಾರ್ಚ್ 1996) ಎಲ್ಲಾ ಬ್ಯಾಂಕುಗಳ ಒಟ್ಟು ಡಿಪಾಜಿಟ್ ಮೊತ್ತದಲ್ಲಿ 1837ರಷ್ಟು, ಪ್ರತಿಯೊಂದು ಬ್ಯಾಂಕಿನ ಡಿಪಾಜಿಟ್ ಮೊತ್ತದಲ್ಲಿ 375 ರಷ್ಟು ಹಾಗೂ ಪ್ರತಿಯೊಂದು ಶಾಖೆಯ ಡಿಪಾಜಿಟ್ ಮೊತ್ತದಲ್ಲಿ 62ರಷ್ಟು ಹೆಚ್ಚಳ ವಾಗಿರುವುದು ಕಂಡುಬರುತ್ತದೆ. ಮತ್ತು ಎಲ್ಲಾ ಬ್ಯಾಂಕುಗಳ ಡಿಪಾಜಿಟ್ ಖಾತೆಗಳ ಒಟ್ಟು ಸಂಖ್ಯೆ 1.89 ಲಕ್ಷಗಳಿಂದ ಸುಮಾರು 180.00 ಲಕ್ಷಗಳಿಗೆ ಏರಿದ್ದು ಪ್ರತಿಯೊಂದು ಬ್ಯಾಂಕಿನಲ್ಲಿ ಇದರ ಸಂಖ್ಯೆ 4.7 ಸಾವಿರದಿಂದ ಸುಮಾರು 91.5 ಸಾವಿರ ಹಾಗೂ ಪ್ರತಿಯೊಂದು ಶಾಖೆಯಲ್ಲಿ 346ರಿಂದ ಸುಮಾರು ಸರಾಸರಿ 2,500ಕ್ಕೆ ಹೆಚ್ಚಾಗಿರುವುದು ಕಂಡುಬಂದಿದೆ.

4. ಬ್ಯಾಂಕುಗಳ ಪತ್ತಿನಲ್ಲಿ ಪ್ರಗತಿ

ಬ್ಯಾಂಕಿನ ಪತ್ತು ಬ್ಯಾಂಕಿನ ಪ್ರಗತಿಯನ್ನಷ್ಟೇ ಅಲ್ಲದೆ, ಅದರ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶದ ಆರ್ಥಿಕ ಅಭಿವೃದ್ಧಿಯ ಮಟ್ಟವನ್ನು ಅಳೆಯುವ ಅಳತೆಗೋಲಾಗಿರುತ್ತದೆ. ಬ್ಯಾಂಕಿನ ಪತ್ತು ಆರ್ಥಿಕ ಅಭಿವೃದ್ಧಿಯ ಸೂಚಕಾಂಕ. ಗ್ರಾಮೀಣ ಬ್ಯಾಂಕುಗಳು ಎಷ್ಟರ ಮಟ್ಟಿಗೆ ನಮ್ಮ ದೇಶದ ಪ್ರಗತಿಗೆ ಸಹಾಯಕವಾಗಿದೆಯೆಂಬುದನ್ನು ತಾವು ನೀಡಿದ ಪತ್ತಿನ ಮೊತ್ತದಿಂದ ತಿಳಿಯಬಹುದು. 1976-90 ಮಾರ್ಚ್ ಅವಧಿಯಲ್ಲಿ ಎಲ್ಲಾ ಗ್ರಾಮೀಣ ಬ್ಯಾಂಕುಗಳು ಸೇರಿ ನೀಡಿದ ಒಟ್ಟು ಪತ್ತು ರೂ. 7.02 ಕೋಟಿಗಳಿಂದ ರೂ. 3,554.04 ಕೋಟಿಗಳಿಗೇರಿದ್ದು, ಪುನಃ 1996ರ ಮಾರ್ಚ್‌ನ ಅಂತ್ಯಕ್ಕೆ ರೂ. 7,505.02 ಕೋಟಿಗಳಿಗೇರಿದೆ. ಈ ಅವಧಿಯಲ್ಲಿ 1976 ಮಾರ್ಚ್ 1996 ಪ್ರತಿಯೊಂದು ಬ್ಯಾಂಕು ನೀಡಿದ ಸರಾಸರಿ ಸಾಲ ರೂ. 17.55 ಲಕ್ಷಗಳಿಂದ ರೂ. 3,829.09 ಲಕ್ಷಗಳಿಗೂ ಪ್ರತಿಯೊಂದು ಶಾಖೆ ನೀಡಿದ ಸಾಲ ರೂ. 1.44 ಲಕ್ಷದಿಂದ ರೂ. 51.77 ಲಕ್ಷಗಳಿಗೇರಿದೆ. ಅಂದರೆ ಎಲ್ಲಾ ಬ್ಯಾಂಕುಗಳು ನೀಡಿದ ಒಟ್ಟು ಸಾಲದ ಮೊತ್ತದಲ್ಲಿ 1,069ರಷ್ಟು, ಪ್ರತಿಯೊಂದು ಬ್ಯಾಂಕು ನೀಡಿದ ಸರಾಸರಿ ಸಾಲದ ಮೊತ್ತದಲ್ಲಿ 218 ರಷ್ಟು ; ಹಾಗೂ ಪ್ರತಿಯೊಂದು ಶಾಖೆ ನೀಡಿದ ಸರಾಸರಿ ಸಾಲದ ಮೊತ್ತದಲ್ಲಿ 36ರಷ್ಟು ಹೆಚ್ಚಳವಾಗಿರುತ್ತದೆ. ಅಲ್ಲದೆ ಒಟ್ಟು ಸಾಲದ ಖಾತೆಗಳು 0.98 ಲಕ್ಷದಿಂದ 250.50 ಲಕ್ಷಗಳಿಗೇರಿದ್ದು, ಪ್ರತಿಯೊಂದು ಬ್ಯಾಂಕಿನ ಸರಾಸರಿ ಸಾಲ ಖಾತೆಗಳು 2.5 ಸಾವಿರದಿಂದ 70.00 ಸಾವಿರಕ್ಕೂ ಮತ್ತು ಶಾಖೆಯ ಸರಾಸರಿ ಸಾಲ ಖಾತೆಗಳು 180ರಿಂದ 1,500ಕ್ಕೆ ತಲುಪಿರುವುದು ನಿಜಕ್ಕೂ ಗಮನಿಸಬೇಕಾದ ಅಂಶ.

5. ಬ್ಯಾಂಕುಗಳ ಪತ್ತು—ಸಂಚಯದ ಪ್ರಮಾಣದಲ್ಲಿ ಹೆಚ್ಚಳ

1976-83ರ ಅವಧಿಯಲ್ಲಿ ಇದರ ಸರಾಸರಿ ಪ್ರಮಾಣ ಶೇ. 94ರಿಂದ 125 ಶೇಕಡಕ್ಕೇರಿದ್ದು, ಕೇವಲ ಶೇ. 52ನ್ನು ಹೊಂದಿದ ವಾಣಿಜ್ಯ ಬ್ಯಾಂಕುಗಳಿಗೆ ಹೋಲಿಸಿದರೆ ಈ ಬ್ಯಾಂಕುಗಳು ಸಾಧಿಸಿದ ಪ್ರಗತಿ ಪ್ರಶಂಸನೀಯ. ಹೀಗೆಯೇ ಹೆಚ್ಚಳ ಮುಂದುವರಿದಿದ್ದು (1987 ರವರೆಗೆ) ನಂತರ ಇದರಲ್ಲಿ ಕಡಿಮೆಯಾಗಿದ್ದರೂ ವಾಣಿಜ್ಯ ಬ್ಯಾಂಕುಗಳಿಗೆ ಹೋಲಿಸಿದರೆ ಪ್ರಗತಿ ಉತ್ತಮವೇ ಆಗಿದೆ. ಈಗ ಸದರಿ ಪ್ರಮಾಣ ಶೇ.53ರಲ್ಲಿದೆ (1996).

6. ಲಾಭ ಹಾಗೂ ನಷ್ಟದ ಸ್ಥಿತಿ

ಗ್ರಾಮೀಣ ಬ್ಯಾಂಕುಗಳ ಮುಖ್ಯ ಉದ್ದೇಶ ಗ್ರಾಮೀಣ ಜನತೆಯ ಪ್ರಗತಿಗಾಗಿ ಸಲ್ಲಿಸುವ ಸೇವೆಯೇ ಹೊರತು ಇತರ ಹಣಕಾಸಿನ ಸಂಸ್ಥೆಗಳಂತೆ ಲಾಭಗಳಿಸುವುದು ಅಲ್ಲ. ಲಾಭ ನಷ್ಟವನ್ನು ಯಾವತ್ತೂ ಗಮನದಲ್ಲಿಟ್ಟು ತುಲನೆ ಮಾಡಿ ಲಾಭ ಸಿಗುವಂತಿದ್ದಲ್ಲಿ ಮಾತ್ರ ವ್ಯವಹಾರ ಮಾಡುವ ಸಂಸ್ಥೆಗಳಂತೆ ಇವು ಅಲ್ಲ. ಇವು ತುಲನೆ ಮಾಡುವುದು ತಾವು ನೀಡುತ್ತಿರುವ ಸೌಲಭ್ಯ ಹಾಗೂ ಅದರಿಂದ ಆಗುವ ಗ್ರಾಮೀಣ ಪ್ರದೇಶದ ಪ್ರಗತಿಯನ್ನು ಮಾತ್ರ. 1982ರ ಅಂತ್ಯಕ್ಕೆ ಸುಮಾರು 74 ಬ್ಯಾಂಕುಗಳು ಸುಮಾರು ರೂ. 531.14 ಲಕ್ಷಗಳಷ್ಟು ನಷ್ಟಕ್ಕೆ ಗುರಿಯಾಗಿದ್ದರೂ, ಸುಮಾರು 45 ಬ್ಯಾಂಕುಗಳ ಪ್ರಗತಿ ಉತ್ತಮ ಸ್ಥಿತಿಯಲ್ಲಿದ್ದು, ಸುಮಾರು ರೂ. 344.84 ಲಕ್ಷಗಳಷ್ಟು ಲಾಭವನ್ನು ಗಳಿಸಿರುತ್ತವೆ. ಇತ್ತೀಚಿನ ವರದಿಯಂತೆ (1996ರ ಜೂನ್ ಅಂತ್ಯಕ್ಕೆ) 150 ಬ್ಯಾಂಕುಗಳು ನಷ್ಟದಲ್ಲಿದ್ದರೂ, 46 ಬ್ಯಾಂಕುಗಳು ಉತ್ತಮ ರೀತಿಯಲ್ಲಿ ಲಾಭವನ್ನು ಗಳಿಸುತ್ತಿವೆ.

ಬ್ಯಾಂಕುಗಳ ಕಾರ್ಯವ್ಯಾಪ್ತಿಯಲ್ಲಿ ಬಂದಿರುವ ಜನಸಂಖ್ಯೆ

ನಮ್ಮ ದೇಶದ ಒಟ್ಟು ಗ್ರಾಮೀಣ ಜನಸಂಖ್ಯೆ ಸುಮಾರು 629 ದಶಲಕ್ಷದಷ್ಟಿದ್ದು ಇದರ ಸುಮಾರು ಶೇ. 80 ರಷ್ಟು ಜನರು (503.2 ದಶಲಕ್ಷ) ಗ್ರಾಮೀಣ ಬ್ಯಾಂಕುಗಳ ಕಾರ್ಯ ವ್ಯಾಪ್ತಿಯಲ್ಲಿ ಬಂದಿದ್ದು, ಪ್ರತಿಯೊಂದು ಬ್ಯಾಂಕು ಸರಾಸರಿ ಸುಮಾರು 2.5 ದಶಲಕ್ಷ ಜನರಿಗೆ ಹಾಗೂ ಪ್ರತಿಯೊಂದು ಶಾಖೆ ಸುಮಾರು 61 ಸಾವಿರ ಜನರಿಗೆ ನೇರವಾಗಿ ಸೌಲಭ್ಯಗಳನ್ನು ಸಲ್ಲಿಸುತ್ತಿರುವುದು ನಿಜವಾಗಿಯೂ ಮೆಚ್ಚುವ ಸಾಧನೆ.

ಅಭಿವೃದ್ಧಿ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಇವುಗಳ ಪಾತ್ರ

ಸರ್ಕಾರವು ಕಾಲಕಾಲಕ್ಕೆ ಕೈಗೊಳ್ಳುವ ಅನೇಕ ಅಭಿವೃದ್ಧಿ ಯೋಜನೆಗಳನ್ನು ತಮ್ಮ ಕಾರ್ಯ ವ್ಯಾಪ್ತಿಯಲ್ಲಿ ಅಳವಡಿಸಿಕೊಂಡು ಅವುಗಳನ್ನು ಕಾರ್ಯರೂಪಕ್ಕೆ ತಂದು, ಜನರಿಗೆ ಅವುಗಳ ಲಾಭ ನೇರವಾಗಿ ತಲುಪುವಂತೆ ಮಾಡುವಲ್ಲಿ ಇವುಗಳ ಪಾತ್ರ ಹಿರಿದಾಗಿದೆ. ಉದಾಹರಣೆ : (1982-83ರ ಅವಧಿಯಲ್ಲಿ "ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ"ಯ ವ್ಯಾಪ್ತಿಯಲ್ಲಿ ರೂ. 112.5 ಕೋಟಿ ಹಣವನ್ನು ಸುಮಾರು 5.5 ಲಕ್ಷ ಜನರಿಗೆ ಹಂಚಲಾಗಿದ್ದು, ಹೀಗೆಯೇ ಕಾರ್ಯ ಮುಂದುವರಿದು 1997-98ರ ಅಂತ್ಯಕ್ಕೆ ಒಟ್ಟು ರೂ. 3,035.68 ಕೋಟಿ ಹಣವನ್ನು 16.97 ಲಕ್ಷ ಜನರಿಗೆ ಸಹಾಯ ಮಾಡಲಾಗಿದೆ.

ಜನತೆಯ ಸಾಮಾನ್ಯ ಅಭಿಪ್ರಾಯ

ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಸೌಲಭ್ಯಗಳ ಕೊರತೆಯಿದ್ದು, ಸಾಕಷ್ಟು ತೊಂದರೆಗಳನ್ನು ಬ್ಯಾಂಕಿನ ಸಿಬ್ಬಂದಿ ಎದುರಿಸುತ್ತಾ ಇದ್ದರೂ ಲೆಕ್ಕಿಸದೇ ಮುನ್ನುಗ್ಗಿ ಬ್ಯಾಂಕಿನ ಉದ್ದೇಶಗಳನ್ನು ಈಡೇರಿಸುವ ದಿಶೆಯಲ್ಲಿ ಸಲ್ಲಿಸುತ್ತಿರುವ ಸಹಾಯ ಸೌಲಭ್ಯಗಳನ್ನು ಪಡೆದು ತಮ್ಮ ಜೀವನವನ್ನು ಮಾರ್ಪಡಿಸಿಕೊಂಡ ಬಹಳಷ್ಟು ಜನರು ಪ್ರಗತಿಗೆ ಕಾರಣವಾದ ಈ ಬ್ಯಾಂಕುಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ವ್ಯಕ್ತಪಡಿಸುತ್ತಿರುವುದು ನಮ್ಮೆಲ್ಲರಿಗೆ ಸಂತೋಷವನ್ನುಂಟು ಮಾಡುವ ವಿಷಯ.

ಗ್ರಾಮೀಣ ಬ್ಯಾಂಕುಗಳು ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಬೆಳೆದು ಇದೇ ರೀತಿ ಜನತೆಗೆ ನೆರವಾದಲ್ಲಿ ನಮ್ಮ ದೇಶ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವೇ ಇಲ್ಲ.

* * *

ಶ್ರಮಿಕ ಶಿಕ್ಷಣ : ಒಂದು ಅಧ್ಯಯನ (ಪುಟ ೧೭ ರಿಂದ ಮುಂದುವರಿದುದು)

(3) ಕಾರ್ಮಿಕರು ತಮ್ಮ ಸಾಮಾಜಿಕ ಮತ್ತು ಆರ್ಥಿಕ ಪರಿಸರದ ಸಮಸ್ಯೆಗಳನ್ನು, ಕುಟುಂಬದವರ ಬಗ್ಗೆ ತಮ್ಮ ಕರ್ತವ್ಯಗಳನ್ನು, ದೇಶದ ಪ್ರಜೆಗಳಾಗಿ ಕೈಗಾರಿಕೆಯಲ್ಲಿನ ಕೆಲಸಗಾರರಾಗಿ ಮತ್ತು ಸಂಘದ ಸದಸ್ಯರಾಗಿ ಹಾಗೂ ಪದಾಧಿಕಾರಿಗಳಾಗಿ ಅವರು ನಿರ್ವಹಿಸಬೇಕಾದ ಜವಾಬ್ದಾರಿಗಳನ್ನು ಉತ್ತಮ ರೀತಿಯಲ್ಲಿ ಅರ್ಥ ಮಾಡಿಕೊಳ್ಳುವಂತೆ ಮಾಡುವುದು.

(4) ಕಾರ್ಮಿಕರಿಂದಲೇ ಮುಖಂಡತ್ವ ಬೆಳೆದುಬರುವಂತೆ ಮಾಡುವದು.

(5) ಸಂಘದ ಸದಸ್ಯರುಗಳಿಗೆ ಉತ್ತಮ ತಿಳಿವಳಿಕೆ ನೀಡುವುದರ ಮೂಲಕ ಮತ್ತು ಪದಾಧಿಕಾರಿಗಳಿಗೆ ಉತ್ತಮ ತರಬೇತಿ ನೀಡುವುದರ ಮೂಲಕ ಬಲಯುತವಾದ ಮತ್ತು ಪರಿಣಾಮಕಾರಿಯಾದ ಸಂಘಗಳನ್ನು ಬೆಳೆಸುವುದು.

(6) ಕಾರ್ಮಿಕ ಸಂಘ ಚಳುವಳಿಯಲ್ಲಿ ಪ್ರಜಾಸತ್ತಾತ್ಮಕ ವಿಧಿ ವಿಧಾನಗಳು ಮತ್ತು ಸಂಪ್ರದಾಯಗಳು ಬಲಗೊಳ್ಳುವಂತೆ ಮಾಡುವುದು.

(7) ಕಾರ್ಮಿಕರ ಶಿಕ್ಷಣದ ಜವಾಬ್ದಾರಿಯನ್ನು ಅಂತಿಮವಾಗಿ ಕಾರ್ಮಿಕ ಸಂಘಗಳೇ ನಿರ್ವಹಿಸುವಂತೆ ಸಹಾಯ ಮಾಡುವುದು.

ಆನಂದ ನಿಧಿ

ಕರ್ನಾಟಕದ ಮೊತ್ತಮೊದಲ ಬ್ಯಾಂಕ್

ಡಾ. ಶ್ರೀನಿವಾಸ ಹಾವನೂರ

ಬ್ಯಾಂಕುಗಳ ಮೂಲೋದ್ದೇಶವೇನು? ಇತರರ ಹಣವನ್ನು ನಿಧಿಯಾಗಿ ಪಡೆದು ಬೇಕೆಂದವರಿಗೆ ಕೊಡುವುದು. ಇಂದು ಅಸ್ತಿತ್ವದಲ್ಲಿರುವ ಬ್ಯಾಂಕುಗಳು ವಿಶಿಷ್ಟ, ಸುಧಾರಿತ ಸ್ವರೂಪದಲ್ಲಿ ಕಾರ್ಯನಿರ್ವಹಿಸುತ್ತಿವೆಯಾದರೂ ಮೂಲೋದ್ದೇಶ ಇದೇ ಆಗಿದೆ.

ಈ ಮೂಲೋದ್ದೇಶವುಳ್ಳ ಮೊದಲಿನ ಬ್ಯಾಂಕ್ ಯಾವುದು ? ಎಲ್ಲಿ ಇದ್ದಿತು ? ಯಾರು ಸ್ಥಾಪಿಸಿದರು ? ಯಾವಾಗ ?

ಆ ಬ್ಯಾಂಕಿನ ಹೆಸರು 'ಆನಂದ ನಿಧಿ' ಎಂಬುದು. ವಿಜಯನಗರ ಸಾಮ್ರಾಜ್ಯದ ಅಚ್ಯುತ ದೇವರಾಯನು 1539 ರಲ್ಲಿ ಇದನ್ನು ಸ್ಥಾಪಿಸಿದ ಸ್ಥಳ ಸ್ವಾಭಾವಿಕವಾಗಿ ಹಂಪಿಯೇ. ಈ ಕುರಿತು ಅಲ್ಲಿಯ ಏಳೆಂಟು ಶಾಸನಗಳಲ್ಲಿ ಪ್ರಸ್ತಾಪ ಬಂದಿದೆ. ಆದ್ದರಿಂದ ಇದು ಖಚಿತವಾದ ಸಂಗತಿಯೇ.

ಇದನ್ನು ಬಹಿರಂಗಪಡಿಸಿದವರು ಸುವಿಖ್ಯಾತ ಶಾಸನ ತಜ್ಞರಾದ ಬಿ. ಎಲ್. ರೈಸ್ ಅವರು. *Mysore and Coorg from Inscriptions* ಎಂಬ ತಮ್ಮ ಗ್ರಂಥದಲ್ಲಿ (1909) ಹೀಗೆ ಹೇಳಿದ್ದಾರೆ :

He (i.e. Achyutaraya) was Profuse in gifts to the Brahmans. He established in 1539 a sort of Bank for the benefit of Brahmans, called the Ananda Nidhi (p. 119).

ವಿಶೇಷವೆಂದರೆ ಆನಂದ ನಿಧಿ ಸ್ಥಾಪನೆಯ ಬಗ್ಗೆ ದಾವಣಗೆರೆ, ಹೊಳಲ್ಕೆರೆ ಮುಂತಾದ ಊರುಗಳಲ್ಲಿಯ ಶಾಸನಗಳಲ್ಲಿಯೂ ದಾಖಲಿಸಲಾಗಿದೆ—ಪ್ರಚಾರಾರ್ಥವಾಗಿ—ಅಂದರೆ ಇದೊಂದು ಬಗೆಯ ಆಗಿನ ಕಾಲದ ಜಾಹೀರಾತಿನ ಕ್ರಮ–ಎಂದೂ ನಾವು ತಿಳಿಯಬಹುದು.

(E. C. Vol. XI, No. 123)

ಹೊಳಲ್ಕೆರೆಯಲ್ಲಿನ ಶಾಸನದ ಒಕ್ಕಣಿಕೆ ಈ ರೀತಿ ಇದೆ :

3 ಶಾಕೇ ಚಂದ್ರರಸಾಮರೇಂದ್ರ ಗಣಿತೇ ವರುಷೇ ವಿಶಾ
4 ರ್ಯ್ಯಾಂಹ್ವಯೇ ಪಕ್ಷೇ ಭಾದ್ರಪದಸ್ಯ ಪೋಷಿತ ವಿಧೌದ್ವಾ
5 ದಶ್ಯಭಿಖ್ಯೇ ತಿಥೌ ವಾರೇ ಭೂಮಿಸುತಸ್ಯ ವಿಷ್ಣಧಿಪತೌ
6 ತಾರೇಮ್ಯತಕ್ಮಾಪತ್ತಿರ್ದತ್ವಾನಂದ ನಿಧಿಲ ದ್ವಿಜಾಂ
7 ಧನದಯನ್ಮಾ ಮೋದಯನ್ಮಾಧವಃ
8 ಪುಣ್ಯೈಷ್ಟ : ಪರಿಪಾಲಿತಸ್ಯ ಪರಿತೋ
9 ಭೂತಾಳಿ ಸಂಸ್ಪೇಷಿತಾ : ಸದ್ವಗ್ಗ್ಯೇನಸ್ವವಸೀತ್ರು
10 ತಸ್ಯ ಸತತಾ ಕ್ರಾಂತಾ ಭುಜಂಗೌಪ್ರಜಂ
11 ಪ್ರಾಪ್ತಸ್ಯೇತಿ ನವಪ್ರಶಸ್ತಿ ಮಧಿಕ ಪ್ರಖ್ಯಾತ
12 ಕಾರ್ಯಾರ್ಚ್ಯುತಾಕ್ಷ್ಮಾ ಪಾನಂದಿ, ನೀ
13 ವಾಪಿನಿಧಯಃ ಕಿಂತ್ತೇ ಲಭಂತ್ತೇ
14 ತುಲಾಂ

ಸಾರಾಂಶ : ವಿಕಾರಿ ನಾಮ ಸಂವತ್ಸರದ ಭಾದ್ರಪದ ಶುಕ್ಲ ದ್ವಾದಶಿ ಮಂಗಳವಾರದ ದಿನ ಮಾಧವನ ಪ್ರೀತ್ಯರ್ಥ, ಅಚ್ಯುತ ರಾಯನು ಬ್ರಾಹ್ಮಣರನ್ನು ಕುಬೇರರನ್ನಾಗಿ ಮಾಡುವ ಉದ್ದೇಶದಿಂದ ಆನಂದ ನಿಧಿಯನ್ನು ಸ್ಥಾಪಿಸಿದ್ದಾನೆ. ಅದನ್ನು ಭೂತಗಳು, ಸರ್ಪಗಳು ಕಾಯುತ್ತಿವೆ. ಇದೊಂದು ಅತಿ ನವ ಪ್ರಶಸ್ತಿ, ಕುಬೇರನ ನವನಿಧಿಗೆ ಸಮಾನವಾದದ್ದು.

ದಾವಣಗೆರೆ ಶಾಸನದಲ್ಲಿ (E. C. Vol. XI, No. 24)

ಹೆಚ್ಚು ಕಡಿಮೆ ಇದೇ ಶಬ್ದ ಒಕ್ಕಣಿಕೆ ಇದ್ದು, 'ಇದಕ್ಕಿಂತ ಉತ್ತಮ ಸ್ವರೂಪದ ನಿಧಿ ಬೇರೆಲ್ಲಿ ತಾನೇ ಇದ್ದೀತು ? (ನತೋಪಿ ನಿಧಯಃ ಕಿಂ ತೇ ಲಭಂ ತೇ ತುಲಾಂ) ಎಂಬ ಉದ್ಗಾರ ಕೊನೆಯಲ್ಲಿದೆ.

ಅಂತೂ ಬ್ರಾಹ್ಮಣರ ಶ್ರೇಯೋಭಿವೃದ್ಧಿಗಾಗಿ ಈ ನಿಧಿಯ ಬಳಕೆ ಇದ್ದಿತು ಎಂಬುದು ಸ್ಪಷ್ಟ. ಹಾಗಿದ್ದರೆ ಇದನ್ನು ದಾನ-ದಕ್ಷಿಣೆ ಎನ್ನಬಹುದೆ 'ದಾನ'ದ ಸ್ವರೂಪ ಇಲ್ಲಿ ಇದ್ದ ಹಾಗೆ ಕಾಣುವುದಿಲ್ಲ. ಯಾವುದಾದರೂ ವಿಶಿಷ್ಟ ಪ್ರಸಂಗವಿದ್ದರೆ ಬ್ರಾಹ್ಮಣರಿಗೆ ನೆರವು ನೀಡುವುದಕ್ಕಾಗಿ ಈ ನಿಧಿ ಇದ್ದಿತೆ ? (ಉದಾಹರಣೆಗೆ ಸ್ಕಾಲರ್‌ಶಿಪ್) ಏನೇ ಇದ್ದರೂ ಬೇರೆಯವರಿಗೆ ಕೊಡುವುದಕ್ಕೆಂದು ಸಾಕಷ್ಟು ದೊಡ್ಡ ಮೊತ್ತವನ್ನು ಅಚ್ಯುತರಾಯನು ತೆಗೆದಿರಿಸಿದ್ದನು. ಆದರೆ ಸೇಫ್ಟಿಗಾಗಿ ತುಸು ಎಚ್ಚರ ವಹಿಸಿದ್ದರ ಪೌರಾಣಿಕ ಸೂಚನೆಯೂ ಇದೆ. ಏನೇ ಇರಲಿ ಇದು ' ಎ ಸಾರ್ಟ್ ಆಫ್ ಬ್ಯಾಂಕ್' ಎಂದೇ ತಿಳಿಯ ತಕ್ಕದು.

ದೊರೆ ಅಚ್ಯುತರಾಯನ ಬಗ್ಗೆ ಒಂದು ಮಾತು. ಈತ ಸುಪ್ರಸಿದ್ಧ ಕೃಷ್ಣದೇವರಾಯನ ಮಲ ತಮ್ಮ. ತನ್ನ ಮಗ ಅಲ್ಪವಯ ಇದ್ದುದರಿಂದ ಅಚ್ಯುತರಾಯನು ಪಟ್ಟವೇರಬೇಕೆನ್ನುವ ಅಪೇಕ್ಷೆಯನ್ನು ಹೊಂದಿದ್ದ. ಅನ್ಯುತರಾಯನ್ನು ತನ್ನ ಆಳ್ವಿಕೆಯಲ್ಲಿ (1529-1542) ಒರಿಸ್ಸಾ, ಕಂಚಿ, ಕೇರಳ, ಉತ್ಮುತ್ತೂರು ರಾಜರೊಡನೆ ಯುದ್ಧ ಮಾಡಿ ವಿಜಯಯಾಗಿದ್ದವ ಜೊತೆಗೆ ಅತೀವ ಧರ್ಮಿಷ್ಠ ಅನೇಕ ದಾನ ಧರ್ಮಗಳನ್ನು, ಯಜ್ಞಯಾಗಗಳನ್ನು ಕೈಗೊಂಡಿದ್ದ ತನ್ನ ಸರದಾರರು, ಧನಿಕ ಪಾಳೆಯಗಾರರು—ಮೊದಲಾದವರಿಂದ ಅಪಾರವಾಗಿ ಧನ ಸಂಗ್ರಹಿಸಿ, ಅಷ್ಟೇ ಧಾರಾಳವಾಗಿ ವಿನಿಯೋಗಿಸುತ್ತಿದ್ದುದಾಗಿ ಇತಿಹಾಸಕಾರ ಪಾಂ. ಬಿ. ದೇಸಾಯಿಯುವರು ಹೇಳಿದ್ದಾರೆ (*A History of Karnataka*, P. 375). ಅಂದಾಗ ಈ 'ಆನಂದ ನಿಧಿ' ಸ್ಥಾಪಿಸಿದ್ದುದು ಕ್ರಮ ಪ್ರಾಪ್ತವೇ ಆಗಿದ್ದಿತು.

ಬ್ಯಾಂಕ್‌ಗಳ ಸಾಲ ವಸೂಲಿ ಸಮಸ್ಯೆ (ಪುಟ ೫ ರಿಂದ ಮುಂದುವರಿದುದು)

ನಿಲ್ಲಿಸಿ ಅವನಲ್ಲಿ ಆತ್ಮವಿಶ್ವಾಸ ತುಂಬುವಂತೆ ಮಾಡಬೇಕು.

13. ತಾಂತ್ರಿಕ ಸಲಹೆ, ಸಾಲದ ಬಗ್ಗೆ ಮತ್ತು ಅದು ಮರುಪಾವತಿ ಮಾಡಿದರೆ ಅವನಿಗೆ, ಬ್ಯಾಂಕಿಗೆ, ಹಾಗೂ ದೇಶಕ್ಕೆ ಆಗುವ ಉಪಯೋಗದ ಬಗ್ಗೆ ಸೂಕ್ತ ಮಾಹಿತಿ ನೀಡಬೇಕು.

14. ಬ್ಯಾಂಕಿನ ಅಧಿಕಾರಿಗಳು ಆಗಾಗ್ಗೆ ಸಾಲಗಾರನನ್ನು ಭೇಟಿ ಮಾಡಿ ಪಾವತಿಯಾಗಬೇಕಾಗಿರುವ ಸಾಲದ ಕಂತಿನ ಬಗ್ಗೆ ಅವನ ಗಮನ ಸೆಳೆಯುವುದರ ಜೊತೆಗೆ ಮರುಪಾವತಿಯನ್ನು ಖಾತ್ರಿ ಮಾಡಿಕೊಳ್ಳಬೇಕು.

ಸಾಲ ವಸೂಲಾತಿ ಬ್ಯಾಂಕಿನ ಒಂದು ಪ್ರಮುಖ ಕಾರ್ಯ. ಸಾಲ ವಸೂಲಾತಿ ಸಮರ್ಪಕವಾಗಿರಬೇಕಾದರೆ ಕೊಟ್ಟ ಸಾಲಗಳು ಸರಿಯಾಗಿರಬೇಕು. 'ಗಡ್ಡಕ್ಕೆ ಬೆಂಕಿ ತಗುಲಿದಾಗ ಬಾವಿ ತೋಡುವ ಮಂದಿ' ಗಳಂತಾಗದೆ ಮುನ್ನೆಚ್ಚರಿಕೆಯಿಂದ ಮೊದಲೆ ಸಕಲ ವಿಷಯಗಳನ್ನು ಪರಿಗಣಿಸಿ ಸಾಲ ಮಂಜೂರು ಮಾಡುವುದು ಅವಶ್ಯಕ. ಸಾಲಗಾರನಿಂದ ಸಾಲ ವಸೂಲಿಯಾಗದಿದ್ದಾಗ ವಿಳಂಬ ಮಾಡದೆ ಬ್ಯಾಂಕಗಳು ತಮ್ಮ ಅಧಿಕಾರದಲ್ಲಿ ಮಾಡಬಹುದಾದ ರೀತಿ ನೀತಿ ಅನುಸರಿಸಿ, ಸಾಲಗಾರನ ಆಸ್ತಿ, ಪೀಠೋಪಕರಣ, ಯಂತ್ರ ಇತ್ಯಾದಿಗಳನ್ನು ಮುಟ್ಟುಗೋಲು ಮಾಡಿಕೊಂಡು ಅದನ್ನು ವಿಕ್ರಯಿಸಿ ಸಾಲ ಖಾತೆಗೆ ಜಮಾ ಮಾಡಿಕೊಳ್ಳಬೇಕು. ಇದು ಸಹ ಸಾಧ್ಯವಾಗದಿದ್ದಲ್ಲಿ ವಿಳಂಬ ಮಾಡದೆ ರಾಜಿ/ಸಂಧಾನಗಳ ಮೂಲಕ ಸಾಲ ವಸೂಲಿ 'ಮಾಡಿಕೊಳ್ಳಬೇಕು. ಸಾಲಗಾರರು ಸಹ ತಮ್ಮ ಮೇಲಿರುವ ಜವಾಬ್ದಾರಿಯನ್ನು ಗಮನದಲ್ಲಿರಿಸಿಕೊಂಡು ಸಾಲ ವಸೂಲಿ ಎನ್ನುವ ಮಾತಿಗೆ ಬದಲಾಗಿ ಸಾಲ ಮರುಪಾವತಿಯನ್ನು ಜಾರಿಗೆ ತರುವಂತಾದಲ್ಲಿ ಬ್ಯಾಂಕುಗಳ ಧ್ಯೇಯ ಹಾಗೂ ದೇಶದ ಉದ್ಧಾರದ ಕನಸು ನನಸಾಗುವುದರಲ್ಲಿ ಸಂಶಯವಿಲ್ಲ.

* * *

ಸಹಕಾರಿ ಸಂಸ್ಥೆಗಳಲ್ಲಿ ನಿರ್ವಹಣೆಯ ಸಮಸ್ಯೆಗಳು (ಪುಟ ೧೬ ರಿಂದ ಮುಂದುವರಿದುದು)

ನಾಯಕತ್ವ ಸುಧಾರಣಾ ಕಾರ್ಯಕ್ರಮಗಳನ್ನು ನಿಯೋಜಿಸಿ ಸದಸ್ಯರುಗಳ ಪ್ರತಿನಿಧಿಗಳು ಅವರ ಮತ್ತು ವೃತ್ತಿಪರ ನಿರ್ವಹಣೆಯ ಸಂಬಂಧದ ಬಗ್ಗೆ ಸಂವೇದನಾಶೀಲರಾಗಿರುವಂತೆ ಮಾಡುವುದು.

ಸಹಕಾರಿ ಕ್ಷೇತ್ರದಲ್ಲಿರುವ ಸಿಬ್ಬಂದಿ ನಿರ್ವಹಣೆ ನೀತಿ ನಿಯಮಗಳನ್ನು ಪುನರ್ವೀಕ್ಷಿಸಿ ಸೂಕ್ತವಾದ ಸಿಬ್ಬಂದಿ ನಿರ್ವಹಣೆ ನೀತಿಗಳ ರೂಪುರೇಷೆಗಳನ್ನು ನಿಗದಿಗೊಳಿಸುವುದರ ಮೂಲಕ ಸಹಕಾರಿ ಕ್ಷೇತ್ರಕ್ಕೆ ವೃತ್ತಿ ಪರಿಣತರು ಮತ್ತು ನಿಪುಣರು ಪ್ರವೇಶಿಸುವಂತಹ ಪೂರಕ ವಾತಾವರಣ ಉಂಟುಮಾಡುವುದು.

ಒಟ್ಟಾರೆಯಾಗಿ, ಸ್ಪರ್ಧಾತ್ಮಕವಾದ ಪರಿಸರದಲ್ಲಿ ಸಹಕಾರಿ ಸಂಸ್ಥೆ ಸಮರ್ಥ ಹಾಗೂ ಪರಿಣಾಮಕಾರಿಯಾದ ಉದ್ಯಮವಾಗಿ ಉತ್ತಮವಾದ ಸೇವೆಯನ್ನು ಪೂರೈಸುವಂತಾಗುವುದು. ಕಡೆಯದಾಗಿ ನಿಷ್ಠಾವಂತ ನಾಯಕತ್ವ, ವೃತ್ತಿಪರ ನಿರ್ವಹಣೆ ಸಕ್ರಿಯವಾಗಿ ಪಾಲ್ಗೊಳ್ಳುವ ಸದಸ್ಯ ವರ್ಗ ಮತ್ತು ಪರಿಸರವನ್ನು ಹೊಂದಿಕೊಂಡಿದೆ.

ಸಹಕಾರಿ ಸಂಸ್ಥೆಗಳಿಗಾಗಿ ಒಂದು ಪ್ರಾರ್ಥನೆ

ಓ ದೇವರೆ,
ಸಹಕಾರವನ್ನು
ಅದನ್ನು ಬಳಸಿಕೊಂಡ ನಾಯಕರುಗಳಿಂದ,
ಅದನ್ನು ದುರುಪಯೋಗಿಸಿಕೊಂಡ ರಾಜಕಾರಣಿಗಳಿಂದ,
ಅದನ್ನು ನಿಂದಿಸಿದ ಅಧಿಕಾರಶಾಹಿಯಿಂದ,
ಅದನ್ನು ಉಪಯೋಗಿಸದ ಸದಸ್ಯ ವರ್ಗದಿಂದ
ಸಂರಕ್ಷಿಸು !

ಈ ಸಂಚಿಕೆಯ ಲೇಖಕರು

1. ಜಿ. ಎಸ್. ನರಸಿಂಹಮೂರ್ತಿ, ಶಾಖಾ ವ್ಯವಸ್ಥಾಪಕರು, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಮೆಡಿಕಲ್ ಕಾಲೇಜು ಶಾಖೆ, ಬೆಂಗಳೂರು 560 002

2. ಎಂ. ರಮೇಶ, ಭಾರತೀಯ ಸ್ಟೇಟ್ ಬ್ಯಾಂಕ್, ವಲಯ ಕಛೇರಿ, ಬೆಂಗಳೂರು

3. ಕೆ. ಪರಶುರಾಮಪ್ಪ, ಅಧಿಕಾರಿ, ಭಾರತೀಯ ಸ್ಟೇಟ್ ಬ್ಯಾಂಕ್, ಬೆಂಗಳೂರು ಶಾಖೆ

4. ಕೆ. ಸುಬ್ರಹ್ಮಣ್ಯ, ಬೋಧನಾಧಿಕಾರಿ, ಕ. ರಾ. ಸ. ಕೃ. ಗ್ರಾ. ಅ. ಬ್ಯಾಂಕ್ ಸಿಬ್ಬಂದಿ ತರಬೇತಿ ಕೇಂದ್ರ, ಬೆಂಗಳೂರು 560 020

5. ಕಾ. ಶ್ರೀನಿವಾಸ, ಭಾರತೀಯ ಸ್ಟೇಟ್ ಬ್ಯಾಂಕ್, ಲೇಖನ ಸಾಮಗ್ರಿ ಇಲಾಖೆ, ಸ್ಥಳೀಯ ಪ್ರಧಾನ ಕಛೇರಿ, ಬೆಂಗಳೂರು

6. ಡಾ. ಎಚ್. ಎಚ್. ಉಳಿವೆಪ್ಪ, ಪ್ರವಾಚಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಕಿತ್ತೂರು ರಾಣಿ ಚೆನ್ನಮ್ಮ ಸ್ನಾತಕೋತ್ತರ ಕೇಂದ್ರ, ಬೆಳಗಾವಿ

7. ಬಜರಂಗ ಎನ್. ಜಾಧವ, ಸಂಶೋಧನ ವಿದ್ಯಾರ್ಥಿ, ಕಿತ್ತೂರು ರಾಣಿ ಚೆನ್ನಮ್ಮ ಸ್ನಾತಕೋತ್ತರ ಕೇಂದ್ರ, ಬೆಳಗಾವಿ

8. ಡಾ. ಶ್ರೀನಿವಾಸ ಹಾವನೂರ, ಬೆಂಗಳೂರು

ನಮೂನೆ IV

ಪತ್ರಿಕೆಯ ಒಡೆತನ ಮತ್ತು ಇತರ ವಿವರಗಳನ್ನು ಕುರಿತ ಹೇಳಿಕೆ

ಪತ್ರಿಕೆಗಳ ನೋಂದಣಿ ಕುರಿತ (ಕೇಂದ್ರದ) ನಿಯಮಾವಳಿಯ ನಿಯಮ 8ರಂತೆ

ಪತ್ರಿಕೆಯ ಹೆಸರು : ಬ್ಯಾಂಕಿಂಗ್ ಪ್ರಪಂಚ

ಪ್ರಕಟಣೆಯ ಸ್ಥಳ : ಬೆಂಗಳೂರು 560 002

ಪ್ರಕಟಣೆಯ ಅವಧಿ : ತ್ರೈಮಾಸಿಕ

ಡಿ. ಟಿ. ಪಿ. ಸಂಯೋಜನೆ : ಕರ್ನಾಟಕ ಪ್ರೆಸ್, 21, ಈಜುಕೊಳದ ರಸ್ತೆ, ಸರಸ್ವತೀಪುರಂ, ಮೈಸೂರು 570009 . ದೂರವಾಣಿ : 545322

ಮುದ್ರಕರು : ಮೈಸೂರು ಪ್ರಿಂಟಿಂಗ್ ಪ್ರೆಸ್, 1210, ಕಾಂತರಾಜ ಅರಸು ರಸ್ತೆ, ಕೃಷ್ಣಮೂರ್ತಿಪುರಂ, ಮೈಸೂರು 570005. ದೂರವಾಣಿ : 444869

ಪ್ರಕಾಶಕರು : ಪಾ. ರಾಜಗೋಪಾಲ (ಭಾರತೀಯ), ಪ್ರಧಾನ ಕಾರ್ಯದರ್ಶಿ, ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳ ಸಮನ್ವಯ ಸಮಿತಿ (ನೋಂ.) 22 ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು 560 009

ಸಂಪಾದಕರು : ಎಚ್ಚೆಸ್ಕೆ (ಎಚ್. ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್, ಭಾರತೀಯ.) ಆರನೆಯ ಮುಖ್ಯ ರಸ್ತೆ, ಸರಸ್ವತೀಪುರಂ, ಮೈಸೂರು 570009

ಪತ್ರಿಕೆಯ ಒಡೆತನ : ಸಮನ್ವಯ ಸಮಿತಿ (ನೋಂ.) ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು, 22, ಜಯಚಾಮರಾಜೇಂದ್ರ ರಸ್ತೆ, ಬೆಂಗಳೂರು 560 002.

ಮೇಲೆ ನೀಡಿರುವ ವಿವರಗಳು ನನ್ನ ಸಾಧ್ಯವಾದ ಮಟ್ಟಿಗಿನ ತಿಳಿವಳಿಕೆ ಮತ್ತು ನಂಬಿಕೆಯ ಪ್ರಕಾರ ಸತ್ಯವಾಗಿವೆಯೆಂದು ನಾನು, ಪಾ. ರಾಜಗೋಪಾಲ, ಈ ಮೂಲಕ ಘೋಷಿಸುತ್ತೇನೆ.

ಪಾ. ರಾಜಗೋಪಾಲ
ಪ್ರಕಾಶಕ